# ಕರ್ನಾಟಕ ವಿಕಾಸ

ಜುಲೈ 2011




12ನೇ ಪಂಚವಾರ್ಷಿಕ ಯೋಜನೆ ರೂಪಿಸುವಲ್ಲಿ
ದಕ್ಷಿಣ ರಾಜ್ಯಗಳೊಂದಿಗೆ ಸಮಾಲೋಚನಾ ಸಮ್ಮೇಳನ

# ಹನ್ನೆರಡನೆ ಪಂಚವಾರ್ಷಿಕ ಯೋಜನೆ



ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರಾದ
ಶ್ರೀ ರಾಮಚಂದ್ರೇಗೌಡರವರೊಂದಿಗೆ ಸಮಾಲೋಚನೆಯಲ್ಲಿ
ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಎಸ್.ವಿ. ರಂಗನಾಥ್‌ರವರು




ಸಮಾಲೋಚನೆಯಲ್ಲಿ ಶ್ರೀ ಕೆ. ಜೈರಾಜ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಮತ್ತು ಶ್ರೀಮತಿ ಶಮೀಮ್ ಭಾನು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ

ದಕ್ಷಿಣ ರಾಜ್ಯಗಳೊಂದಿಗೆ ಸಮಾಲೋಚನಾ ಸಮ್ಮೇಳನ
ದಿನಾಂಕ 10-11ನೇ ಜೂನ್, 2011

# ಕರ್ನಾಟಕ ವಿಕಾಸ


ಜುಲೈ 2011

ಸಂಪುಟ : 52 ಸಂಚಿಕೆ : 8

ಈ ಸಂಚಿಕೆಯಲ್ಲಿ


5 ಸಚಿವಾಲಯದಿಂದ ಸಂದೇಶ – ಡಾ. ಅಮಿತಾ ಪ್ರಸಾದ್

7 ಮುಖಪುಟ ವರದಿ – ಡಾ. ಎಸ್. ಮಾಧೇಶ್ವರನ್ – ಬಿ.ಎಸ್. ಹಿರೇಮಠ

21 ಚಿಂತನೆ – ಪ್ರೊ. ಎ.ಎಚ್. ಮಾಸಾಪತಿ

28 ಕಾವ್ಯ ವಿಕಾಸ – ಜಿ. ವೆಂಕಟೇಶ್

29 ಬದುಕುವ ಮಾತು – ಡಾ. ಪಾಟೀಲ ಪುಟ್ಟಪ್ಪ

30 ಕವಿಯ(ಕ್ಷ) ಪ್ರಶ್ನೆಗಳು – ಎಂ. ಚಿದಾನಂದಪ್ಪ

31 ನುಡಿ ನಿರ್ಮಲ

35 ಆರೋಗ್ಯ – ಡಾ. ಬಿ. ರಮಣರಾವ್

36 ಗ್ರಾಮ ಸ್ವರಾಜ್

39 ಸುತ್ತೋಲೆಗಳು



ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು

**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ|| ಎಂ.ಎಸ್. ಮಂಜುನಾಥ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**


**ವಾರ್ಷಿಕ ಚಂದಾ :**

ವ್ಯಕ್ತಿಗಳಿಗೆ ರೂ. 50/–

ಸಂಸ್ಥೆಗಳಿಗೆ ರೂ. 60/–


ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
email:karnatakavikasa@ymail.com


## ಪತ್ರಿಕೆ ಕುರಿತು ನಿಮ್ಮ ನುಡಿ

ಮಾನ್ಯರೇ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಅಮಿತಾ ಪ್ರಸಾದ್‌ರವರು ಹಲವು ಪದವಿಗಳು, ಅಲ್ಲದೆ ಡಾಕ್ಟರೇಟ್ ಪದವಿಗಳಿಸಿದ್ದಾರೆ. ತಮ್ಮ ಅಧಿಕಾರವನ್ನು ಬಡವರಿಗೆ ಮೀಸಲಿಡುತ್ತಾರೆ ಎಂದು ನಂಬಿಕೆಯಿದೆ. 'ಕಿವಿ ಮಾತು' ಕಾವ್ಯ ಅತ್ಯಂತ ಸೊಗಸಾಗಿ ಮೂಡಿಬಂದು ಓದುಗರಿಗೆ ಅರಿವನ್ನು ಮೂಡಿಸಿತು. ರೇಷ್ಮೆ ಕೃಷಿಯ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಲಾಗಿತ್ತು. ಕೇಂದ್ರ ಸರ್ಕಾರ 'ನಿರ್ಮಲ ಗ್ರಾಮ ಪುರಸ್ಕಾರ' ಪ್ರಶಸ್ತಿ, ಅಲ್ಲದೆ 'ನೈರ್ಮಲ್ಯ' ರಾಜ್ಯ ಪ್ರಶಸ್ತಿಯನ್ನು ನೀಡುತ್ತಿರುವುದು ಒಳ್ಳೆಯ ಯೋಜನೆ. ಪ್ರಶಸ್ತಿಗೋಸ್ಕರವಾದರು ಗ್ರಾಮ ಪಂಚಾಯತಿಗಳು ಮೂಲಸೌಲಭ್ಯ, ಸ್ವಚ್ಛತೆಗಳನ್ನು ಹಳ್ಳಿಗಳಲ್ಲಿ ಕಾಪಾಡುತ್ತೇವೆ.

– ನವೀನ್ ಎನ್.

S/o. ನೀಲಪ್ಪ, ಎನ್. ಶ್ರೀ ಕೋಲಶಾಂತೇಶ್ವರ ದೇವಸ್ಥಾನದ ಹತ್ತಿರ,
ಅರಸಿಕೆರೆ – 583125, ಹರಪನಹಳ್ಳಿ ತಾ॥, ದಾವಣಗೆರೆ ಜಿಲ್ಲೆ.




ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾಗಿ ಹೊಸದಾಗಿ ಕಾರ್ಯವಹಿಸಿಕೊಂಡಿರುವ ಡಾ. ಅಮಿತಾ ಪ್ರಸಾದ್‌ರವರಿಗೆ ಅಭಿನಂದನೆಗಳು. ಅತ್ಯುನ್ನತ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿರುವ ಅಮಿತಾ ಮೇಡಮ್‌ರವರು ಗ್ರಾಮೀಣಾಭಿವೃದ್ಧಿಯನ್ನು ಇನ್ನಷ್ಟು ಕ್ರಿಯಾಶೀಲ ಹಾಗೂ ಸೃಜನಶೀಲತೆಯಿಂದ ಕೆಲಸ ನಿರ್ವಹಿಸುವ ಬಯಕೆಯನ್ನು ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಕಳಕಳಿಯನ್ನು ಎಲ್ಲಾ ಪಂಚಾಯತ್ ರಾಜ್ ವ್ಯವಸ್ಥೆಯವರು ಅರಿತುಕೊಂಡು ಮುನ್ನಡೆಯಬೇಕು. ಎಂದಿನಂತೆ ಎಲ್ಲಾ ಲೇಖನಗಳು ಚೆನ್ನಾಗಿ ಮೂಡಿ ಬಂದಿವೆ. ಧನ್ಯವಾದಗಳು.

– ಪ್ರಹ್ಲಾದ ವೀರಪ್ಪ ಬಡಿಗೇರ

ಮನೆ ನಂ. 1601, ಬಡಿಗೇರ ಓಣಿ, ಎಂ.ಕೆ. ಹುಬ್ಬಳ್ಳಿ, ತಾ॥ ಬೈಲಹೊಂಗಲ, ಜಿ॥ ಬೆಳಗಾವಿ.

ಮಹಾತ್ಮ ಗಾಂಧೀಜಿಯವರು ಕಂಡ ಗ್ರಾಮ ಸ್ವರಾಜ್ಯದ ಕನಸನ್ನು ನನಸನ್ನಾಗಿಸಲು ಪ್ರತಿ ತಿಂಗಳು ಹೊರಬರುವ 'ಕರ್ನಾಟಕ ವಿಕಾಸ' ಪತ್ರಿಕೆ ನಾಡಿನ ಅಪಾರ ಓದುಗರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿದೆ. ಗ್ರಾಮದ ಸರ್ವಾಂಗೀಣ ಪ್ರಗತಿಗೆ ಸಹಕಾರಿಯಾದ ವಿವಿಧ ಲೇಖನ, ಕವನಗಳನ್ನು ಪ್ರಕಟಿಸಿ ಜ್ಞಾನವನ್ನೀಡಿ ಜನರನ್ನು ಕ್ರಿಯಾಶೀಲರನ್ನಾಗಿಸಲು ಸಮರ್ಥವಾಗಿದೆ. ಜೂನ್ 2011 ಸಂಚಿಕೆಯಲ್ಲಿ ಪ್ರಕಟವಾದ 'ಜೀವನದಲ್ಲಿ ಮನುಷ್ಯನು ಸರಳತೆಯನ್ನು ಇರಿಸಿಕೊಳ್ಳಬೇಕು' ಎಂಬ ಡಾ. ಪಾಟೀಲ ಪುಟ್ಟಪ್ಪನವರ 'ಬದುಕುವ ಮಾತು' ಅಂಕಣ ಚಿಕ್ಕದಾಗಿದ್ದರೂ ಚೊಕ್ಕ ಚಿನ್ನದಂತಿತ್ತು. ಸರಳ ಜೀವನ ಸುಖಕ್ಕೆ ಸೋಪಾನ ಆಡಂಬರದ ಜೀವನ ಆತಂಕಕ್ಕೆ ಆಹ್ವಾನವೆಂಬುದನ್ನು ತಿಳಿಸಿತು. ಪ್ರಕಟಿಸಿದ ನಿಮಗೆ ನನ್ನ ಧನ್ಯವಾದಗಳು.

– ಬಸವರಾಜ ಹೂಗಾರ

ಹಿರೇಸಿಂಗನಗುತ್ತಿ, ತಾ॥ ಹುನಗುಂದ, ಬಾಗಲಕೋಟೆ ಜಿಲ್ಲೆ – 587 154.

'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯಲ್ಲಿ ಬರುವ ಲೇಖನಗಳು ಕೇವಲ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟಿದ್ದಲ್ಲ. ಪ್ರತಿಯೊಬ್ಬ ಕನ್ನಡಿಗ ಓದಬೇಕಾದ ಅಭಿವೃದ್ಧಿಯ ಕೈಪಿಡಿ ಇದಾಗಿದೆ. ಜಲಸಂರಕ್ಷಣೆ, ಪರಿಸರ ರಕ್ಷಣೆ, ನಾಡು-ನುಡಿಯ ಕುರಿತು ಇನ್ನೂ ಲೇಖನಗಳು ಮೂಡಿಬರಲೆಂದು ಆಶಿಸುತ್ತೇನೆ.

– ಸಾಗರ

ಶ್ರೀ ಕೊತ್ತಲ ಬಸವೇಶ್ವರ ಪ್ರೌಢಶಾಲೆ, ಅಂಚೆ ಮುಧೋಳ,
ತಾ॥ ಸೇಡಂ, ಗುಲಬರ್ಗಾ ಜಿಲ್ಲೆ – 585 318.

ನಮ್ಮ ನೆಚ್ಚಿನ ಕರ್ನಾಟಕ ವಿಕಾಸ ಜೂನ್-2011ರಲ್ಲಿ ಕವಿಯ(ಕ್ವ) ಪ್ರಶ್ನೆ 'ಕಾಯಕ ಪ್ರೀತಿ ಬೆಳೆಸೋಣವೇ? ಬಸವರಾಜ ತಿಪ್ಪಣ್ಣ ಆಡ್ನೂರ ಇವರ ಬರಹ ಪ್ರಶ್ನೆಗಳು ನಮ್ಮ ಕಾಯಕಯೋಗಿ ಅಣ್ಣ ಬಸವಣ್ಣನವರ ಕಾಯಕವೇ ಕೈಲಾಸ ನೆನಪಿಸಿತು. ಡಾ॥ ಅಮಿತಾ ಪ್ರಸಾದ್‌ರವರ 'ಅಭಿವೃದ್ಧಿಯೆಡೆಗೆ ಸದೃಢ ನಡಿಗೆ' ಬರಹ ಅವರ ಅಪಾರ ಅನುಭವಗಳ ಸಾರವನ್ನು ಸರಳ ರೀತಿಯಲ್ಲಿ ಅರ್ಥವಾಗುವಂತೆ ಕಟ್ಟುನಿಟ್ಟಾಗಿ ಹೇಳಿದ್ದಾರೆ.

– ರಾಜೇಂದ್ರ ಹೆಗಡೆ ಹಾವೇರಿ

ಕಂದಾಯ ಇಲಾಖೆ, ತಾಂಡೂರು ಹತ್ತಿರ, ಮಂಜುನಾಥನಗರ, ಇಜಾರಿಕಮೊ ಪುರ ಗ್ರಾಮ
ಹಾವೇರಿ ಜಿಲ್ಲೆ – 581 110.

ಸಚಿವಾಲಯದಿಂದ ಸಂದೇಶ

**ಡಾ. ಅಮಿತಾ ಪ್ರಸಾದ್**
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

ಬಂಧುಗಳೇ,

## ಕರ್ನಾಟಕ ವಿಕಾಸ ಪತ್ರಿಕೆಯ ಸದುದ್ದೇಶಗಳು ಸದುಪಯೋಗವಾಗಲಿ

ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಜನಪರ ಯೋಜನೆಗಳನ್ನು ಕಾರ್ಯಗತಗೊಳಿಸಿ ಗ್ರಾಮೀಣ ಬಡ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ, ತನ್ಮೂಲಕ ದೇಶವನ್ನು ಪ್ರಗತಿಯ ಪಥದತ್ತ ಹೊತ್ತೊಯ್ಯುವ ಗುರುತರ ಜವಾಬ್ದಾರಿಯನ್ನು ಹೊಂದಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಚಟುವಟಿಕೆಗಳು ತಮಗೆಲ್ಲಾ ತಿಳಿದ ವಿಷಯವೆ. ಅದಷ್ಟೇ ಅಲ್ಲ. ಸರ್ಕಾರದ ಯೋಜನೆ ಪ್ರಯೋಜನಗಳು, ನೀತಿ ನಿಲುವುಗಳು, ಸರ್ಕಾರದ ಆದೇಶ/ಸುತ್ತೋಲೆಗಳು, ಪಂಚಾಯತ್ ರಾಜ್ ಸಂಸ್ಥೆಗಳ ಕುರಿತ ಸುಧಾರಣೆಗಳನ್ನು ಹಾಗೂ ಅಭಿವೃದ್ಧಿ ಪರ ಮಾಹಿತಿಗಳನ್ನು ಗ್ರಾಮೀಣ ಜನರ ಅರಿವು/ಜ್ಞಾನಕ್ಕಾಗಿ ನಿರಂತರವಾಗಿ ಸ್ಥಳೀಯ ಕನ್ನಡ ಭಾಷೆಯಲ್ಲಿ ಸರಳವಾಗಿ ನಿರೂಪಿಸುವ ಪ್ರಮುಖ ಕಾರ್ಯವನ್ನು ಸಹ ಇಲಾಖೆಯು ಮಾಡುತ್ತಲೇ ಮುಂದುವರೆದಿದೆ. ಇದಕ್ಕಾಗಿಯೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖವಾಣಿಯಾಗಿ "ಕರ್ನಾಟಕ ವಿಕಾಸ" ಮಾಸ ಪತ್ರಿಕೆಯನ್ನು ಕನ್ನಡ ಭಾಷೆಯಲ್ಲಿ ಹೊರತರಲಾಗುತ್ತಿದ್ದು ಇಲಾಖೆಯ ಕೈಪಿಡಿಯಾಗಿ ಪ್ರತಿ ಮಾಸವು ಚುನಾಯಿತ ಪ್ರತಿನಿಧಿಗಳಿಗೆ, ಅಧಿಕಾರಿ ಸಿಬ್ಬಂದಿಗಳಿಗೆ ಹಾಗೂ ಚಂದಾದಾರರಿಗೆ ಮಾಹಿತಿಗಳನ್ನು ನೀಡುತ್ತಾ ಬರುತ್ತಿದೆ. "ಕರ್ನಾಟಕ ವಿಕಾಸ" ಮಾಸ ಪತ್ರಿಕೆಗೆ 50 ವರ್ಷಗಳಿಗೂ ಮಿಗಿಲಾದ ಸುದೀರ್ಘ ಇತಿಹಾಸವಿದ್ದು 1960ರಿಂದ ವಿವಿಧ ಕಾಲಘಟ್ಟಗಳಲ್ಲಿ ಹೊಸ ಬದಲಾವಣೆಗಳನ್ನು ತರುತ್ತಾ ಪತ್ರಿಕೆಯನ್ನು ಪ್ರಕಟಿಸುತ್ತಾ ಬರಲಾಗುತ್ತಿರುವುದು ಹೆಮ್ಮೆಯ ಸಂಗತಿಯೆ. ಇದರ ಪ್ರಮುಖ ಉದ್ದೇಶವೇನೆಂದರೆ ಸರ್ಕಾರದ ಮಾಹಿತಿಗಳು ತತ್‌ಕ್ಷಣದಲ್ಲಿಯೇ ಸಂಬಂಧಿಸಿದ ಎಲ್ಲರಿಗೂ ಯಾವುದೇ ವ್ಯತ್ಯಯವಿಲ್ಲದಂತೆ ತಲುಪಬೇಕೆಂಬುದಷ್ಟೆ ಆಗಿದೆ.

ಈ ಪತ್ರಿಕೆಯಲ್ಲಿ ಪ್ರಮುಖವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ:ಪಂಗಡದವರಿಗೆ ಮೀಸಲಾದ ಅಭಿವೃದ್ಧಿ ಯೋಜನೆಗಳನ್ನು ಕುರಿತು ಮಾಹಿತಿ ಮತ್ತು ವಿವರಗಳನ್ನು ಪ್ರಕಟಿಸಲಾಗುತ್ತಿದೆ. ಇದಲ್ಲದೆ ಪ್ರಮುಖವಾಗಿ ರಾಜ್ಯದ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳಿಂದ ಅನುಷ್ಠಾನಗೊಳಿಸಲಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಹಾಗೂ ಯೋಜನೆಗಳ ಮಾಹಿತಿ ಹಾಗೂ ವಿವರಣೆಗಳ ಬಗ್ಗೆ ವಿಶೇಷ ಒತ್ತು ನೀಡಲಾಗುತ್ತದೆ. ಇಲಾಖೆಯು ಹೊರತರುವ ಪ್ರಮುಖ ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಸಹ ಪತ್ರಿಕೆಯಲ್ಲಿ ಪ್ರಕಟಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಶಾಸನ/ಕಾನೂನು ರಚನಾಕಾರರು, ಅನುಷ್ಠಾನಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರೊಂದಿಗೆ ಸಂಪರ್ಕ ಸೇತುವೆಯಾಗಿ ಪತ್ರಿಕೆಯು ಕಾರ್ಯನಿರ್ವಹಿಸುತ್ತಿದೆ.

ಮೂರು ಹಂತದ ಸ್ಥಳೀಯ ಪಂಚಾಯತ್‌ಗಳ ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಇಲಾಖೆಯ ಹಿರಿಯ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ "ಕರ್ನಾಟಕ ವಿಕಾಸ" ಮಾಸ ಪತ್ರಿಕೆಯನ್ನು ಪ್ರತಿ ತಿಂಗಳು ತಪ್ಪದೇ ನಿರಂತರವಾಗಿ ಉಚಿತವಾಗಿ ಅಂಚೆಯ ಮೂಲಕ ರವಾನಿಸಲಾಗುತ್ತಿದೆ. ಇದಲ್ಲದೇ ಎಲ್ಲಾ ಗ್ರಾಮ ಪಂಚಾಯತಿಯ ಗ್ರಂಥಾಲಯಗಳು, ನಗರ, ಜಿಲ್ಲಾ, ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕ ಗ್ರಂಥಾಲಯಗಳು, ಇತರೆ ಸರ್ಕಾರಿ ಕಚೇರಿಗಳ ಮುಖ್ಯಸ್ಥರು, ರಾಜ್ಯ ಸರ್ಕಾರದ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಉಚಿತವಾಗಿ ಹಾಗೂ ಇತರ ಆಸಕ್ತರು/ಚಂದಾದಾರರಿಗಾಗಿ ರವಾನಿಸುವ ಸಲುವಾಗಿಯೇ ಒಟ್ಟಾರೆ ಪ್ರತಿ ತಿಂಗಳು 26000 ಪ್ರತಿಗಳನ್ನು ಮುದ್ರಿಸಿ ರವಾನಿಸಲಾಗುತ್ತಿದೆ.

ಪತ್ರಿಕೆಯ ಸದುದ್ದೇಶಗಳು ಈಡೇರಬೇಕಾದರೆ ಪತ್ರಿಕೆಯಲ್ಲಿನ ಮಾಹಿತಿಗಳು ಗ್ರಾಮೀಣ ಜನತೆಗೆ ಅಧಿಕಾರಿ:ಸಿಬ್ಬಂದಿಗಳಿಗೆ ತಪ್ಪದೇ ಮುಟ್ಟಬೇಕು. ಪತ್ರಿಕೆಗಳು ತಲುಪದಿದ್ದಲ್ಲಿ ತಕ್ಷಣವೇ ಈ ಕಚೇರಿಗೆ ತಿಳಿಸುವಂತಹ ಜವಾಬ್ದಾರಿ ನಿಮ್ಮೆಲ್ಲರದ್ದಾಗಿರುತ್ತದೆ. ಇದರೊಂದಿಗೆ ತಮ್ಮ ವ್ಯಾಪ್ತಿಯಲ್ಲಿ ಯಶಸ್ವಿಗೊಳಿಸಲಾದ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಕಾಮಗಾರಿಗಳು, ಯಶೋಗಾಥೆಗಳು ಮುಂತಾದ ಮಾಹಿತಿಗಳನ್ನು ಸಂಬಂಧಿಸಿದ ಛಾಯಾಚಿತ್ರಗಳೊಂದಿಗೆ ಈ ಪತ್ರಿಕೆಯ ಸಂಪಾದಕರಿಗೆ ತಲುಪಿಸಿ ಪತ್ರಿಕೆಯನ್ನು ಮತ್ತಷ್ಟು ಅರ್ಥಪೂರ್ಣಗೊಳಿಸುವ ನಿಟ್ಟಿನಲ್ಲಿ ತಾವೆಲ್ಲರೂ ಕೈಜೋಡಿಸಬೇಕಾಗಿದೆ. ಇದಕ್ಕೆ ತಮ್ಮೆಲ್ಲರ ಸಹಕಾರವಿರಲಿ ಎಂದೇ ನನ್ನ ಭಾವನೆ.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಮುಖಪುಟ ವರದಿ

# ಹನ್ನೆರಡನೆ ಪಂಚವಾರ್ಷಿಕ ಯೋಜನೆ ರೂಪಿಸುವಲ್ಲಿ ದಕ್ಷಿಣ ರಾಜ್ಯಗಳೊಂದಿಗೆ ಸಮಾಲೋಚನಾ ಸಮ್ಮೇಳನ



ಡಾ. ಎಸ್. ಮಾಧೇಶ್ವರನ್ *



ಬಿ.ಎಸ್. ಹಿರೇಮಠ **

**12ನೇ ಪಂಚವಾರ್ಷಿಕ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಲು ಪೂರ್ವಭಾವಿಯಾಗಿ ಯೋಜನಾ ಆಯೋಗವು ದಕ್ಷಿಣ ರಾಜ್ಯಗಳೊಂದಿಗೆ ಚರ್ಚಿಸಲು ಸಮಾವೇಶವನ್ನು ಬೆಂಗಳೂರಿನಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು. ಸಮಾವೇಶದ ಸಂಕ್ಷಿಪ್ತ ವಿವರಗಳು ಇಲ್ಲಿವೆ.**

## ಹಿನ್ನೆಲೆ

ಹನ್ನೊಂದನೆ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ನಾವಿದ್ದು ಇಲ್ಲಿಯವರೆಗೆ ನಾವು ಏನನ್ನು ಸಾಧಿಸಿದ್ದೇವೆ ಎಂಬುದನ್ನು ಪರಿಶೀಲಿಸಿ ಕಾರ್ಯತಂತ್ರದಲ್ಲಿನ ನ್ಯೂನತೆಗಳನ್ನು ಕಂಡು ಹಿಡಿದು ಸರಿಪಡಿಸುವ ಕಾಲ ಇದಾಗಿದೆ. ಇದಲ್ಲದೆ ಹೊಸ ಸವಾಲುಗಳನ್ನು ಗುರುತಿಸಿ ಮುಂದಿನ ಹೊಸ ಯೋಜನೆಗಳನ್ನು ರೂಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಯೋಜನಾ ಆಯೋಗವು ಹನ್ನೆರಡನೆ ಪಂಚವಾರ್ಷಿಕ ಯೋಜನೆಯ ಪಥವನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿದೆ. ಇದಕ್ಕಾಗಿ ಯೋಜನಾ ಆಯೋಗವು ಪ್ರಾದೇಶಿಕ ಮಟ್ಟದಲ್ಲಿ ಎಲ್ಲ ಭಾಗೀದಾರರೊಂದಿಗೆ ಸಮಾಲೋಚನೆಯನ್ನು ನಡೆಸುತ್ತಿದೆ. ದಕ್ಷಿಣ ರಾಜ್ಯಗಳ ಪ್ರಾದೇಶಿಕ ಸಮಾಲೋಚನಾ ಸಮಾವೇಶವನ್ನು ದಿನಾಂಕ 10 ಹಾಗೂ 11ನೇ ಜೂನ್ 2011 ರಂದು ಕರ್ನಾಟಕ ಸರ್ಕಾರವು ಏರ್ಪಡಿಸಿತ್ತು. ಈ ಸಮಾವೇಶವನ್ನು




* ವಿಶೇಷಾಧಿಕಾರಿ, ಮೌಲ್ಯಮಾಪನ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.

** ಯೋಜನಾ ನಿರ್ದೇಶಕರು, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.



ನಾಲ್ಕು ಅಧಿವೇಶನಗಳಾಗಿ ವಿಂಗಡಿಸಿ ಈ ಮುಂದಿನ ವಿಷಯಗಳ ಬಗ್ಗೆ ಸಮಾಲೋಚನೆಯನ್ನು ಕೈಗೊಳ್ಳಲಾಯಿತು. 1. ರಾಜ್ಯ ಸರ್ಕಾರಗಳ ವಿಷಯಗಳು, 2. ಪಂಚಾಯತ್ ರಾಜ್ ಸಂಸ್ಥೆಗಳು, 3. ನಾಗರಿಕ ಸಮಾಜ ಸಂಸ್ಥೆಗಳು, ಸಾಮಾಜಿಕ ನ್ಯಾಯ ಮತ್ತು ಲಿಂಗ ವಿಷಯಗಳು ಮತ್ತು 4. ಕೈಗಾರಿಕೆ ಮತ್ತು ವ್ಯಾಪಾರ. ಸದರಿ ಸಮಾಲೋಚನಾ ಸಮಾವೇಶದಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಮತ್ತು ಚರ್ಚೆಯ ಸಂಕ್ಷಿಪ್ತ ವಿವರಗಳನ್ನು ಮುಂದಿನ ಕಂಡಿಕೆಗಳಲ್ಲಿ ಕೊಡಲಾಗಿದೆ.

### ರಾಜ್ಯ ಸರ್ಕಾರಗಳ ವಿಷಯಗಳು

ಈ ಅಧಿವೇಶನದಲ್ಲಿ ಕರ್ನಾಟಕವೂ ಸೇರಿದಂತೆ ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳ ಮಾನ್ಯ ಮುಖ್ಯಮಂತ್ರಿಗಳು, ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಶ್ರೀ ಮಂಟೆಕ್‌ಸಿಂಗ್ ಅಹಲುವಾಲಿಯಾ ಉಪಾಧ್ಯಕ್ಷರು, ಯೋಜನಾ ಆಯೋಗ ಇವರು ಸಮಾವೇಶವನ್ನು ಉದ್ಘಾಟಿಸಿದರು. ಯೋಜನಾ ಆಯೋಗದ ಸದಸ್ಯರು ಹಾಗೂ ಅಧಿಕಾರಿಗಳು ಎಲ್ಲ ಅಧಿವೇಶನಗಳಲ್ಲಿ ಭಾಗವಹಿಸಿದ್ದರು.

ಯೋಜನಾ ಆಯೋಗದ ಉಪಾಧ್ಯಕ್ಷರು ಉದ್ಘಾಟನಾ ಭಾಷಣವನ್ನು ಮಾಡಿದರು. ನಂತರ ರಾಜ್ಯಗಳ ಮುಖ್ಯಮಂತ್ರಿಗಳು/ಅಧಿಕಾರಿಗಳು ತಮ್ಮ ರಾಜ್ಯಗಳಿಗೆ ಸಂಬಂಧಿಸಿದಂತೆ ಹನ್ನೆರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಬೇಕಾದ ವಿಷಯಗಳು, ಸವಾಲುಗಳು ಮತ್ತು ಕಾರ್ಯತಂತ್ರಗಳ ಬಗ್ಗೆ ವಿವರಗಳನ್ನು ನೀಡಿದರು. ಒಟ್ಟಾರೆ ಸಮಾಲೋಚನೆಯ ಉದ್ದೇಶವು ನಿರ್ದಿಷ್ಟವಾದ ನಿರ್ಧಾರವಾಗಿರದೆ ವಿಷಯಗಳನ್ನು ಪ್ರಸ್ತಾವಿಸಿ ಅವುಗಳನ್ನು ಹೇಗೆ ಪರಿಹರಿಸಬೇಕೆಂಬ ಬಗ್ಗೆ ವಿಶಾಲ ತಳಹದಿಯಲ್ಲಿ ಚರ್ಚೆಗೆ ಅನುವಾಗುತ್ತಿರುವುದು ಸ್ಪಷ್ಟವಾಗಿತ್ತು. ಆದಾಗ್ಯೂ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕೂಡಾ ಆಗಿತ್ತು. ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬಹುದೊಡ್ಡ ಆಶಾವಾದದ ಹಿನ್ನೆಲೆಯಲ್ಲಿ ಆರ್ಥಿಕತೆಯು ಪ್ರವೇಶವಾಗುತ್ತಿದ್ದು ಪ್ರಮುಖ ಸವಾಲುಗಳನ್ನು ಅದು ಬಿಂಬಿಸುತ್ತಿದೆ. ಬೆಳವಣಿಗೆಯ ಕ್ಷೇತ್ರದಲ್ಲಿ ನಾವು ಒಳ್ಳೆಯ ಸಾಧನೆಯನ್ನು ಮಾಡಿದ್ದೇವೆ. ಆದರೆ ಒಳಗೊಳ್ಳುವಿಕೆಯ ಕ್ಷೇತ್ರದಲ್ಲಿ ಅಷ್ಟೊಂದು ಸಾಧನೆಯನ್ನು ಮಾಡಲು ಸಾಧ್ಯವಾಗಿಲ್ಲ. ಹನ್ನೊಂದನೆ ಪಂಚವಾರ್ಷಿಕ ಯೋಜನೆ ಅವಧಿಯ ಸಂಪೂರ್ಣ ಮಾಹಿತಿ ಲಭ್ಯವಾದಾಗ ಈಗ ಊಹಿಸಿರುವುದಕ್ಕಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವುದನ್ನು ಕಾಣಬಹುದು.

ರಾಷ್ಟ್ರದ ಆಂತರಿಕ ಉತ್ಪನ್ನದಡಿ ಶೇಕಡಾ 9ರಷ್ಟು ಅಥವಾ ಅದಕ್ಕಿಂತ ಹೆಚ್ಚು ಸಾಧಿಸಲು ಖಾಸಗಿ ವಲಯವು ಇದನ್ನು ಕಾರ್ಯಗತಗೊಳಿಸಬೇಕು. ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬೆಳವಣಿಗೆ ಒಳಗೊಳ್ಳುವುದಕ್ಕೆ ಸಹಾಯವಾಗುವ ಹಾಗೂ ಹೂಡಿಕೆ ಸ್ನೇಹಿಯಾಗಿರುವ ವಾತಾವರಣವನ್ನು ನಿರ್ಮಿಸಲು ನೀತಿ ನಿರ್ಧಾರಗಳನ್ನು ಕೈಗೊಳ್ಳಬೇಕು. ಹಣಕಾಸು ಕೊರತೆಯನ್ನು ನಿರ್ದಿಷ್ಟ ನಿಯಂತ್ರಣದಲ್ಲಿಡುವುದು ಪ್ರಥಮ ಆದ್ಯತೆಯಾಗಬೇಕು. ಇದರೊಂದಿಗೆ ವಿಶೇಷವಾಗಿ ಹೂಡಿಕೆಯು ಹೆಚ್ಚಾಗುವಂತಹ ಅನೇಕ ಕ್ಷೇತ್ರಗಳಲ್ಲಿನ ಸುಧಾರಣೆಗಳು ನಿರಂತರವಾಗಿ ಪ್ರಗತಿಯ ಪಥದಲ್ಲಿರಬೇಕು. ಹಣಕಾಸು ವಲಯವು ಸಂಪನ್ಮೂಲಗಳ ಸಂಗ್ರಹಣೆ ಹಾಗೂ ಹಂಚಿಕೆಯಲ್ಲಿ ಪರಿಣಾಮಕಾರಿಯಾಗಿರುವುದು ಬಹು ಮಹತ್ವದ್ದಾಗಿದೆ. ಕೇಂದ್ರ ಸರ್ಕಾರವೇ ಈ ಕ್ಷೇತ್ರದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು ಅನೇಕ ಇವೆ.

ಸರ್ಕಾರದ ಸ್ವಂತ ಸಂಪನ್ಮೂಲಗಳ ಹಂಚಿಕೆಯನ್ನು ಆದ್ಯತಾ ವಲಯಗಳಿಗನುಗುಣವಾಗಿ ಮಾಡಬೇಕು. ಅವುಗಳಲ್ಲಿ ಆರೋಗ್ಯ, ಶಿಕ್ಷಣ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ ಪ್ರಮುಖ. ವಿಶೇಷವಾಗಿ ನೀರು ನಿರ್ವಹಣೆ, ಗ್ರಾಮೀಣ ಮೂಲಸೌಕರ್ಯ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಮೊದಲ ಆದ್ಯತೆಯನ್ನು ನೀಡಬೇಕು. ಇತರೆ

ಮೂಲಸೌಕರ್ಯಗಳ ಅಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚಾಗಿ ಸಾರ್ವಜನಿಕ–ಖಾಸಗಿ–ಸಹಭಾಗಿತ್ವದಲ್ಲಿ ಕ್ರಮ ಕೈಗೊಳ್ಳಬೇಕು. ಬೃಹತ್ ಯೋಜನೆಗಳ ಅನುಷ್ಠಾನದಲ್ಲಿನ ತೊಂದರೆಗಳನ್ನು ತ್ವರಿತವಾಗಿ ನಿವಾರಿಸಬೇಕು.

ಹನ್ನೆರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಆರ್ಥಿಕತೆಯನ್ನು ಬಾಧಿಸುವ ಸವಾಲುಗಳು ಹನ್ನೊಂದನೆ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿದ್ದುದಕ್ಕಿಂತ ಬಹು ಗಂಭೀರವಾಗಿವೆ. ಈ ಸವಾಲುಗಳು : (ಅ) ಇಂಧನ ಸ್ಥಿತಿಯ ನಿರ್ವಹಣೆ, (ಆ) ಮಿತ ನೀರು ನಿರ್ವಹಣೆ, (ಇ) ನಗರ ವರ್ಗಾಂತರಗೊಳ್ಳುವುದರಿಂದಾಗುವ ಸಮಸ್ಯೆಗಳಿಗೆ ಪರಿಹಾರ ಮತ್ತು (ಈ) ತ್ವರಿತ ಬೆಳವಣಿಗೆಗೆ ನೆರವಾಗುವಂತಹ ಪ್ರಕ್ರಿಯೆಗಳಿಂದ ಪರಿಸರ ಸಂರಕ್ಷಣೆಯನ್ನು ಖಾತ್ರಿಪಡಿಸುವುದು. ಈ ಕ್ಷೇತ್ರಗಳಲ್ಲಿ ಸಂಕೀರ್ಣವಾದ ಆಯ್ಕೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಳ್ಳಬೇಕು. ಅದರಿಂದ ಯಶಸ್ವಿಯಾದ ಫಲಶೃತಿಗಳನ್ನು ಪಡೆಯಲು ಮಹತ್ವದ ಪಾತ್ರವನ್ನು ವಹಿಸಬೇಕು. ಈ ವಿಷಯದಲ್ಲಿ ಯಶಸ್ವಿಯಾದರೆ ಹೆಚ್ಚಿನ ಸ್ಥಿರ ಬೆಳವಣಿಗೆ ಹಾಗೂ ಬಡತನ ನಿರ್ಮೂಲನೆಯ ದಾರಿಯಲ್ಲಿ ಸಾಗಿದ ಕೆಲವೇ ಕೆಲವು ದೇಶಗಳ ಗುಂಪಿನಲ್ಲಿ ಭಾರತವನ್ನು ಕಾಣಬಹುದಾಗಿದೆ.

ಯೋಜನೆಗಳ ಅನುಷ್ಠಾನ ಪರಿಣಾಮಕಾರಿಯಾಗಿರುವಂತೆ ಮಾಡಲು ಹೆಚ್ಚಿನ ಸುಧಾರಣೆಯ ಅಗತ್ಯವಿದೆ. ಈ ವಿಷಯದಲ್ಲಿ ಹೆಚ್ಚಿನ ಕ್ರಮಗಳು ರಾಜ್ಯ ಸರ್ಕಾರದ್ದು. ಆದರೆ ಕೇಂದ್ರ ಸರ್ಕಾರವು ಯೋಜನೆಗಳ ವಿನ್ಯಾಸಗಳಲ್ಲಿ ಸುಧಾರಣೆ, ಉತ್ತಮ ವಿನ್ಯಾಸ ಹೊಂದಿದ ಯೋಜನೆಗಳಿಗೆ ನೀಡುವ ಸಂಪನ್ಮೂಲಗಳನ್ನು ಆದ್ಯತೆಗೊಳಿಸುವುದು, ಕೆಳಮಟ್ಟಕ್ಕೆ ಸಂಪನ್ಮೂಲಗಳ ನೀಡಿಕೆ ಮತ್ತು ಸಾಮರ್ಥ್ಯ ಅಭಿವೃದ್ಧಿಗಾಗಿ ಮಾರ್ಗೋಪಾಯಗಳನ್ನು ಗುರುತಿಸಬೇಕು. ಸಾಕ್ಷ್ಯಾಧಾರಿತ ಮೌಲ್ಯಮಾಪನವು ಮರುವಿನ್ಯಾಸ ಮತ್ತು ಆದ್ಯತೀಕರಣಕ್ಕಾಗಿ ಅತ್ಯವಶ್ಯ.

ಕರ್ನಾಟಕದ ಗೌರವಾನ್ವಿತ ಮುಖ್ಯಮಂತ್ರಿಗಳು ಅಧ್ಯಕ್ಷೀಯ ಭಾಷಣವನ್ನು ಮಾಡಿದರು. ಕರ್ನಾಟಕದ ಯೋಜನೆಗಳು ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸುವುದರೊಂದಿಗೆ ನಿರಂತರವಾಗಿ ಬೆಳವಣಿಗೆಯನ್ನು ಸಾಧಿಸುವ ಗುರಿಗಳನ್ನು ಹೊಂದಿವೆ. ಯೋಜನೆಗಳ ಅನುಷ್ಠಾನದಲ್ಲಿ ಗಣನೀಯ ಸಾಧನೆಯನ್ನು ಕೈಗೊಂಡಿರುವುದನ್ನು ದಾಖಲೆಗಳಿಂದ ತಿಳಿಯಬಹುದೆಂದು ವಿವರಗಳನ್ನು ನೀಡಿದರು. ಹನ್ನೊಂದನೆ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಶೇಕಡಾ 100ಕ್ಕಿಂತ ಹೆಚ್ಚು ಪ್ರಗತಿಯನ್ನು ಸಾಧಿಸಲಾಗುವುದು ಮತ್ತು ಹನ್ನೆರಡನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಉತ್ತಮ ನಿರ್ವಹಣೆ ಹಾಗೂ ಸಮಾನ ಬೆಳವಣಿಗೆಗೆ ಹೆಚ್ಚು ಒತ್ತು ನೀಡುವುದನ್ನು ಮುಂದುವರೆಸಲಾಗುವುದೆಂದು ತಿಳಿಸಿದರು. ಈ ಯೋಜನೆಯ ಅವಧಿಯಲ್ಲಿ ಬೆಳವಣಿಗೆ ದರವು ಶೇ. 9 ರಿಂದ 9.5 ಆಗಬಹುದೆಂಬ ಲೆಕ್ಕಾಚಾರವನ್ನು ಹಾಕಲಾಗಿದೆಯೆಂದು ತಿಳಿಸಿದರು. ಬೆಳವಣಿಗೆ ಗುರಿಗಳನ್ನು ಸಾಧಿಸಲು ಕರ್ನಾಟಕವು ಸಂಪನ್ಮೂಲ ಕ್ರೋಢೀಕರಣವನ್ನು ಕೈಗೊಳ್ಳುವುದಾಗಿ ತಿಳಿಸಿದರು. ಆದಾಗ್ಯೂ ಈ ಬೆಳವಣಿಗೆ ದರವನ್ನು ಸಾಧಿಸಲು ಕೆಲವು ನೀತಿ ಪ್ರಕ್ರಿಯೆಗಳು ಅಗತ್ಯವಾಗಿವೆಯೆಂದು ತಿಳಿಸಿದರು. ನೀರಾವರಿ, ವಿದ್ಯುತ್ ಮತ್ತು ನೀರು ಪೂರೈಕೆಯಂತಹ ಕ್ಷೇತ್ರಗಳಲ್ಲಿ ರಾಜಕೀಯ ಸಂಕಲ್ಪ ಮತ್ತು ಸಮ್ಮತಿ ಮೂಲಕ ಕಾರ್ಯಸಾಮರ್ಥ್ಯವನ್ನು ಉತ್ತೇಜಿಸುವ ನೀತಿಗಳನ್ನು ಗುರುತಿಸಲು ಯೋಜನೆಯು ಹೆಚ್ಚಿನ ಆದ್ಯತೆಯನ್ನು ನೀಡಬೇಕೆಂದು ತಿಳಿಸಿದರು. ಈ ಕೆಳಗಿನ ಸಮಸ್ಯೆಗಳನ್ನು ಪಟ್ಟಿ ಮಾಡುತ್ತ ಯೋಜನಾ ಆಯೋಗವು ಈ ಕೆಳಗಿನ ಕ್ಷೇತ್ರಗಳಲ್ಲಿ ಮಧ್ಯಸ್ಥಿಕೆಯನ್ನು ವಹಿಸಬೇಕೆಂದು ತಿಳಿಸಿದರು.






1. ಯೋಜನಾ ಆಯೋಗವು ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ನಮನೀಯತೆ (flexibility), ಗಾತ್ರ ಮತ್ತು ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಲು ಅವುಗಳ ಪುನರ್ರಚನೆಯ ಕುರಿತು ಉಪ ಸಮಿತಿಯೊಂದನ್ನು ರಚಿಸಿದೆ. ರಾಜ್ಯಗಳಿಗೆ ಸಹಾಯವನ್ನು ಬಹಳಷ್ಟು ನಿಬಂಧನೆಗಳು ಹಾಗೂ ವಿಭಾಗಗಳಲ್ಲಿ ನೀಡಲಾಗುತ್ತಿದೆ. 2011–12ರ ಆಯವ್ಯಯದಲ್ಲಿ ನಿಗದಿಪಡಿಸಿದ ರೂ. 70,503 ಕೋಟಿಗಳ ಕೇಂದ್ರ ಸಹಾಯಾನುದಾನದಲ್ಲಿ ಮೂರನೇ ಎರಡಷ್ಟು RKVY, AIDB, JNNURM, ಇತ್ಯಾದಿಗಳಂತಹ ನಿಗದಿತ ರಾಜ್ಯ ಯೋಜನೆಗಳಿಗೆ ಕೊಡಲಾಗುತ್ತಿದೆ. ಕಾರ್ಯಕ್ರಮಗಳಾಧಾರಿತ ಮತ್ತು ನಿಬಂಧನೆಗಳುಳ್ಳ ಯೋಜನೆಗಳಿಂದ ಸ್ಥಳೀಯ ಅವಶ್ಯಕತೆಗನುಗುಣವಾಗಿ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಈ ಪದ್ಧತಿಯನ್ನು 12ನೇ ಯೋಜನೆಯಿಂದ ಕೈಬಿಡಬೇಕು. ರಾಜ್ಯಗಳು ತಮ್ಮ ಆದ್ಯತೆಗಳನ್ನು ನಿರ್ಧರಿಸಲು ಸಾಧ್ಯವಾಗುವಂತೆ ಉದ್ದೇಶಾಧಾರಿತ ಹಂಚಿಕೆ ಸೂತ್ರದ ಮೂಲಕ ಸಹಾಯಾನುದಾನ ರಾಜ್ಯಗಳಿಗೆ ಹರಿದು ಬರಬೇಕು.

2. ಯೋಜನಾ ಪಥವು ರೈತರ ಆದಾಯವನ್ನು ಹೆಚ್ಚಿಸುವ ಮತ್ತು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸುವ ಅಗತ್ಯತೆಯನ್ನು ಬಿಂಬಿಸಬೇಕು. ಹವಾಮಾನ ಮತ್ತು ಮಾರುಕಟ್ಟೆ ವೈಪರೀತ್ಯಗಳಿಂದ ರಕ್ಷಿಸಲು ರೈತರಿಗೆ ವಿಮೆ ಮಾಡಿಸುವ ಅಗತ್ಯವಿದೆ. ಜಲಾನಯನ ಆಧಾರಿತ ಒಣಭೂಮಿ ಉಪಚಾರ ಮತ್ತು ಜಲ ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸುವ ಸಲಹೆಯನ್ನು ಅಪ್ರೋಚ್ ಪೇಪರಿನಲ್ಲಿ ಅಳವಡಿಸುವುದನ್ನು ಕರ್ನಾಟಕವು ಸ್ವಾಗತಿಸುತ್ತದೆ.

3. ಇಂಧನವನ್ನು ಉತ್ಪಾದಿಸುವ ಕಂಪನಿಗಳಿಗೆ ಕಲ್ಲಿದ್ದಲು ಬ್ಲಾಕುಗಳನ್ನು ಹಂಚಿಕೆ ಮಾಡುವ ಆದ್ಯತೆಯನ್ನು ನೀಡಬೇಕು. ಕೆಲವು ಉತ್ಪಾದನಾ ಘಟಕಗಳು ಇಂಧನ ಕಲ್ಲಿದ್ದಲು ಜೋಡಣೆ/ಕಲ್ಲಿದ್ದಲು ಬ್ಲಾಕುಗಳು/ಪರಿಸರ ಅನುಮತಿಗಾಗಿ ಸ್ಥಗಿತಗೊಂಡಿವೆ. ಪರಿಸರಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಹರಿಸಲು ಕಾಲಮಿತಿ ಆಧಾರಿತ ಅನುಮತಿ ನೀಡುವ ಸಲುವಾಗಿ ಮಾರ್ಗಸೂಚಿಗಳನ್ನು ಹೊರಡಿಸಬೇಕು. ಇಂಧನ ಯೋಜನೆಗಳು ಸಮಯಕ್ಕೆ ಸರಿಯಾಗಿ ಬರದೇ ಇದ್ದರೆ ಹನ್ನೆರಡನೆ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ರಾಜ್ಯವು ಸಾಧಿಸಬೇಕಾದ ಬೆಳವಣಿಗೆ ದರಗಳ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತವೆ. ಆದಷ್ಟು ಬೇಗನೆ ಈ ಸಮಸ್ಯೆಗಳನ್ನು ಬಗೆಹರಿಸಬೇಕು. ಇದರಿಂದ ರಾಜ್ಯವು ಕಲ್ಲಿದ್ದಲು ಹಂಚಿಕೆ, ಗ್ಯಾಸ್ ಹಂಚಿಕೆ ಮತ್ತು ಪರಿಸರ ಅನುಮತಿಯನ್ನು ಬೇಗನೆ ಪಡೆಯಲು ಸಾಧ್ಯವಾಗುತ್ತದೆ.

4. ಸೆಕೆಂಡರಿ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕು. ಕೇಂದ್ರ ಸರ್ಕಾರವು ಮಧ್ಯಾಹ್ನದ ಊಟದ ಕಾರ್ಯಕ್ರಮವನ್ನು ಹೈಸ್ಕೂಲುಗಳ ಎಂಟನೆ ಹಾಗೂ ಒಂಬತ್ತನೆ ತರಗತಿಗಳ ವಿದ್ಯಾರ್ಥಿಗಳಿಗೂ ವಿಸ್ತರಿಸಬೇಕು. ಕೇಂದ್ರ ಸರ್ಕಾರವು ಸುಧಾರಣೆಗಳನ್ನು ಉತ್ತೇಜಿಸಲು SSA/RMSA ಮತ್ತು ಇತರೆ ಕಾರ್ಯಕ್ರಮಗಳ ನಿಬಂಧನೆಗಳನ್ನು ಸಡಿಲಗೊಳಿಸಬೇಕು. ಕೇಂದ್ರ ಸರ್ಕಾರವು 65:35ರ ಅನುಪಾತದ ಬದಲಾಗಿ RMSA ನಲ್ಲಿದ್ದಂತೆ ಶಿಕ್ಷಣ ಹಕ್ಕು ಅಧಿನಿಯಮವನ್ನು ಅನುಷ್ಠಾನಗೊಳಿಸಲು ಅನುದಾನವನ್ನು 75:25ರ ಅನುಪಾತದಲ್ಲಿ ಒದಗಿಸಬೇಕು.

5. ಜನಸಂಖ್ಯೆಯ ಬಹುಪಾಲು ಕೃಷಿ ಉದ್ಯೋಗದಲ್ಲಿ ತೊಡಗಿದೆ. ಈ ವರ್ಗ ಜೀವನೋಪಾಯಕ್ಕಾಗಿ ಬೇಕಾದ ಆದಾಯವನ್ನು ಗಳಿಸುತ್ತಿಲ್ಲ. ಆದುದರಿಂದ ಗ್ರಾಮೀಣ ಪ್ರದೇಶದ ಮಾನವಶಕ್ತಿ ಅದರಲ್ಲೂ ಗ್ರಾಮೀಣ

ಯುವಕರನ್ನು ಕೈಗಾರಿಕೆ ಮತ್ತು ಸೇವಾ ವಲಯಗಳ ಉದ್ಯೋಗದಲ್ಲಿ ತೊಡಗಿಸುವ ಸವಾಲು ನಮ್ಮ ಮುಂದಿದೆ. ಗ್ರಾಮೀಣ ಯುವಕರಿಗೆ ಕೌಶಲ್ಯ ತರಬೇತಿಯನ್ನು ನೀಡಲು ಸೂಕ್ತ ವ್ಯವಹಾರ ಉದ್ಯೋಗಗಳನ್ನು ಕೈಗೊಳ್ಳಲು ತಿಳುವಳಿಕೆಯನ್ನು ನೀಡಲು ಬೃಹದಾಕಾರದ ಹೂಡಿಕೆಯನ್ನು ಮಾಡುವ ಅವಶ್ಯಕತೆಯಿದೆ. ರಾಷ್ಟ್ರವ್ಯಾಪಿ ಕೌಶಲ್ಯ ವರ್ಧನೆಯನ್ನು ಕೈಗೊಳ್ಳಲು 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಬೇಕು. ಮಾನವ ಸಂಪನ್ಮೂಲಗಳ ಉತ್ಪಾದಕತೆಯನ್ನು ವರ್ಧಿಸುವುದರತ್ತ ಒತ್ತು ನೀಡುವ ಮೂಲಕ ಅಭಿವೃದ್ಧಿ ಕಾರ್ಯತಂತ್ರದಲ್ಲಿ ಮಹತ್ತರ ಬದಲಾವಣೆಯನ್ನು ಕಾಣಬಹುದು.

6. ಕಾರ್ಮಿಕ ನಿಯಮಗಳ ಪರಿಷ್ಕರಣೆಯ ಅವಶ್ಯಕತೆಯಿದೆ. ಇಡೀ ದೇಶಕ್ಕಾಗಿ ಅಂತರ್‌ರಾಷ್ಟ್ರೀಯ ಮಟ್ಟದ ಪ್ರಮುಖ ಕಾರ್ಮಿಕ ನಿಯಮಗಳನ್ನು ಹೊಂದಲು ರಾಷ್ಟ್ರೀಯ ಸಹಮತವನ್ನು ಹೊಂದುವ ಅವಶ್ಯಕತೆಯಿದೆ. ಇದರೊಂದಿಗೆ ಎಲ್ಲಾ ಕೆಲಸಗಾರರಿಗೆ ಕೆಲಸಗಾರರ ಹಕ್ಕು, ಸಾಮಾಜಿಕ ಭದ್ರತೆ ಮತ್ತು ಕೆಲಸದ ಸ್ಥಿತಿಗತಿಗಳ ಸುಧಾರಣೆಯ ಬಗ್ಗೆ ಮುಂದೆ ಹೆಜ್ಜೆ ಇಡಬೇಕಾಗಿದೆ.

7. ಯೋಜನಾ ಪಥವು ಸಾಮಾಜಿಕವಾಗಿ ಹಿಂದುಳಿದ ಸಮೂಹಗಳ ಅಭಿವೃದ್ಧಿ ಮತ್ತು ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ನೀಡುವ ಅನುದಾನವನ್ನು ಶಿಕ್ಷಣದಲ್ಲಿ ಹೆಚ್ಚುತ್ತಿರುವ ವೆಚ್ಚಕ್ಕೆ ಸಮನಾಗಿ ಮತ್ತು ವೃತ್ತಿ ಶಿಕ್ಷಣ ಸಂಸ್ಥೆಗಳು ನೀಡುವ ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುವ ಹಾಗೆ ಹೆಚ್ಚಿಸಬೇಕು.

8. ನಗರ ಬಡತನವು ರಾಷ್ಟ್ರದ ಸರಾಸರಿ ಮಟ್ಟಕ್ಕಿಂತ ಹಾಗೂ ಇತರೆ ನೆರೆರಾಜ್ಯಗಳಿಗಿಂತ ಸ್ವಲ್ಪ ಹೆಚ್ಚಾಗಿದೆ. ಇದನ್ನು ಕಡಿಮೆ ಮಾಡುವುದಕ್ಕಾಗಿ ನಗರ ಸ್ಥಳೀಯ ಸಂಪನ್ಮೂಲಗಳ ಶೇಕಡಾ 33ರಷ್ಟು ಉಪಯೋಗಿಸ ಲಾಗಿದೆ. ಆದಾಗ್ಯೂ ಕೇಂದ್ರದ ಸಹಾನುದಾನವು ಬಡತನ ನಿರ್ಮೂಲನ ಮಾಡಲು ಹಾಗೂ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಅತ್ಯವಶ್ಯಕವಾಗಿದೆ.

9. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಅನುದಾನವನ್ನು ಪಡೆಯದೇ ಮಾಹಿತಿ ತಂತ್ರಜ್ಞಾನ ಬೆಳವಣಿಗೆಗೆ ನಗರಗಳ ಮೂಲಸೌಕರ್ಯಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆಯನ್ನು ಮಾಡಬೇಕಾಗುತ್ತದೆ. ಈ ಹಿಂದೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ರಫ್ತಿನಲ್ಲಿ ಸಾಕಷ್ಟು ಬೆಳವಣಿಗೆಯನ್ನು ಸಾಧಿಸಿದ ರಾಜ್ಯಗಳು ಉತ್ತೇಜನವನ್ನು ಪಡೆದಿಲ್ಲ. ಬೆಂಗಳೂರಿನಂತಹ ನಗರಗಳು ಸಾರ್ವತ್ರಿಕವಾಗಿ 'ಬ್ರಾಂಡ್ ಇಂಡಿಯಾ' ಮನ್ನಣೆಯನ್ನು ಗಳಿಸಿವೆ ಮತ್ತು ರಾಷ್ಟ್ರದ ರಫ್ತು ಗಳಿಕೆಯಲ್ಲಿ 14 ಶತಕೋಟಿ ಅಮೇರಿಕನ್ ಡಾಲರ್‌ನಷ್ಟು ಕೊಡುಗೆಯನ್ನು ನೀಡಿದ್ದು ಅವುಗಳಿಗೆ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ಹೆಚ್ಚಿನ ಪ್ರಮಾಣದ ನೆರವನ್ನು ನೀಡಬೇಕು.

10. GST ಯಿಂದ ರಾಜ್ಯದ ಸಂಪನ್ಮೂಲಗಳ ಮೇಲಾಗುವ ಪರಿಣಾಮಗಳಿಂದಾಗುವ ಅನಿಶ್ಚತತೆ ಪ್ರಮುಖ ವಿಷಯವಾಗಿದೆ. ನಿಯಮಿತ ಕಾಲಾವಧಿಗೆ ನಷ್ಟ ಭರಿಸುವ ಕೇಂದ್ರದ ಭರವಸೆಯು ಸ್ವಾಗತಾರ್ಹ.

11. ಆರೋಗ್ಯಕ್ಕಾಗಿ ರಾಷ್ಟ್ರೀಯ ಆಂತರಿಕ ಉತ್ಪನ್ನದ ಶೇಕಡಾ ಒಂದರಷ್ಟು ಮಾತ್ರ ಸಾರ್ವಜನಿಕ ವಲಯದ ಹೂಡಿಕೆ ಇದ್ದು ಹನ್ನೆರಡನೆಯ ಯೋಜನೆಯಡಿ ಇದರ ಗಾತ್ರವನ್ನು ಶೇಕಡಾ 2ಕ್ಕೆ ಹೆಚ್ಚಿಸುವ ಅವಶ್ಯಕತೆಯಿದೆ.

12. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಗ್ರಾಮೀಣ ಭಾಗದಲ್ಲಿ ತೀವ್ರ ದೌರ್ಬಲ್ಯದಿಂದ ಇರುವುದನ್ನು ರಾಜ್ಯ ಸರ್ಕಾರವು ಮನಗಂಡಿದೆ. ಸಾರ್ವಜನಿಕ ಆರೋಗ್ಯ ಸೇವೆಯನ್ನು






ಒದಗಿಸುವುದರ ಹೊಣೆಗಾರಿಕೆಯನ್ನು ಹೆಚ್ಚಿಸಲು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರವನ್ನು ನೀಡಿದಲ್ಲಿ ಈ ಸಮಸ್ಯೆಯಿಂದ ಹೊರಬರುಬಹುದೆಂಬ ಅನಿಸಿಕೆ ಇದೆ.

13. ಕರ್ನಾಟಕದಲ್ಲಿ 12 ಜಿಲ್ಲೆಗಳು (ಸಿ–ಕೆಟಗರಿ) ಅತ್ಯಂತ ಕಡಿಮೆ ಆರೋಗ್ಯ ಸೂಚಿಗಳನ್ನು ಹೊಂದಿದವುಗಳಾಗಿವೆ. ಇವುಗಳಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಒದಗಿಸುವ ಕೇಂದ್ರ ಸಂಪನ್ಮೂಲ ಹಂಚಿಕೆಯಲ್ಲಿ ಹೆಚ್ಚಿನ ಒತ್ತು ನೀಡುವ ಅವಶ್ಯಕತೆಯಿದೆ.

14 ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರದ ನಡುವಿನ ಪ್ರಮುಖ ವಿಷಯಗಳನ್ನು ಬಗೆಹರಿಸಲು ಪರಿಹಾರ ನೀಡುವ ವ್ಯವಸ್ಥೆಯನ್ನು ಸ್ಥಾಪಿಸುವ ಅವಶ್ಯಕತೆಯಿದೆ.

15 ಈಗಿನ ಕೇಂದ್ರ ಅಧಿನಿಯಮ (ಮೆಟ್ರೊ ರೈಲ್ವೆ ನಿರ್ಮಾಣ ಅಧಿನಿಯಮ 1978 ಮತ್ತು ಮೆಟ್ರೊ ರೈಲ್ವೆ ಕಾರ್ಯಾಚರಣೆ ಮತ್ತು ನಿರ್ವಹಣೆ ಅಧಿನಿಯಮ 2002)ದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಪಾತ್ರ ಇಲ್ಲ ಮತ್ತು ಇದರಿಂದ ರಾಜ್ಯ ಸರ್ಕಾರದ ವ್ಯಾಪ್ತಿಯಿಂದ ಮೆಟ್ರೊ ಅಭಿವೃದ್ಧಿ ವಿಷಯವನ್ನು ತೆಗೆದು ಹಾಕಿದಂತಾಗಿದೆ. ಮುನ್ಸಿಪಾಲಿಟಿ ಪ್ರದೇಶದೊಳಗೆ ಮೆಟ್ರೊ ನಿರ್ಮಾಣ, ಅಲ್ಲದೆ ದರಗಳ ನಿಗದಿ, ಕ್ಲೇಮುಗಳನ್ನು ನಿರ್ಧರಿಸುವಂತಹ (ಸಂಸ್ಥೆ ಮೂಲಕ ನಿಯಂತ್ರಣ) ಚಟುವಟಿಕೆಗಳ ಮೆಟ್ರೊ ನಿಯಂತ್ರಣ, ಕಾರ್ಯಾಚರಣೆ ಮತ್ತು ನಿರ್ವಹಣೆ ಕಾರ್ಯವನ್ನು ರಾಜ್ಯ ಸರ್ಕಾರಕ್ಕೆ ವಹಿಸುವ ಅವಶ್ಯಕತೆಯಿದೆ. ಅಲ್ಲದೆ ಈ ಬಗ್ಗೆ ನಿಯಮಗಳ ರಚನೆಯ ಅಧಿಕಾರವನ್ನು ನೀಡಬೇಕು. ಈ ವಲಯದ ಸಾಮಾನ್ಯ ಉತ್ತೇಜನ ಮತ್ತು ತಾಂತ್ರಿಕ ಗುಣಮಟ್ಟ ಕುರಿತಾದ ವಿಷಯಗಳನ್ನು ರಾಜ್ಯದ ಸಹಭಾಗಿತ್ವ ದೊಂದಿಗೆ ಕೇಂದ್ರ ಸಂಸ್ಥೆಯಲ್ಲಿರುವುದನ್ನು ರಾಜ್ಯವು ಒಪ್ಪುತ್ತದೆ.

16. ವಿಮಾನ ನಿಲ್ದಾಣ, ಬಂದರು ವಲಯ ಹಾಗೂ ಹೆದ್ದಾರಿಗಳಲ್ಲಿದ್ದಂತೆ ರೈಲ್ವೆ ವಲಯಕ್ಕೂ ಕೂಡ ಸಾರ್ವಜನಿಕ–ಖಾಸಗಿ–ಸಹಭಾಗಿತ್ವದ ನೀತಿಯನ್ನು ಅಳವಡಿಸಬೇಕು.

ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯೋಜನೆ ರೂಪಿಸುವಿಕೆ ಮತ್ತು ಕಾರ್ಯಕ್ರಮಗಳ ವಿನ್ಯಾಸದಲ್ಲಿ ರಾಜ್ಯಕ್ಕೆ ಹೆಚ್ಚಿನ ಜವಾಬ್ದಾರಿ ಇರುವುದನ್ನು ಒತ್ತಿ ಹೇಳಿದರು. ಅವು ಕೆಳಗಿನಂತಿವೆ.

* ಹನ್ನೊಂದನೆ ಯೋಜನೆಯಲ್ಲಿ ಕೇಂದ್ರದ ಒಟ್ಟು ಆಯವ್ಯಯ ಸಹಾಯ ಶೇ. 4.7 ರಷ್ಟಿದ್ದು ಅದು ಹನ್ನೆರಡನೆ ಯೋಜನೆಯಲ್ಲಿ ಶೇಕಡಾ 5.4ಕ್ಕೆ ಹೆಚ್ಚುವ ಸಾಧ್ಯತೆಯಿದೆ. ಆದಾಗ್ಯೂ ಹೆಚ್ಚಿನ ಸುಧಾರಣೆಯನ್ನು ಕೇಂದ್ರ ಯೋಜನೆಯಿಂದಲೇ ಆಗಬೇಕಾಗಿದೆ. ಉದ್ದೇಶಿತ ಹೆಚ್ಚಳವು ಹನ್ನೊಂದನೆ ಯೋಜನೆಯ ಶೇಕಡಾ 1.2 ರಿಂದ ಹನ್ನೆರಡನೆ ಯೋಜನೆಯಲ್ಲಿ ಶೇಕಡಾ 1.3 ರಷ್ಟು ಆಗಬಹುದೆಂದು ದಿನಾಂಕ 21.4.2001ರ ಪೂರ್ಣಯೋಜನಾ ಆಯೋಗದ ಚರ್ಚೆಯಿಂದ ತಿಳಿದು ಬರುತ್ತದೆ. ಹನ್ನೊಂದನೆ ಯೋಜನೆಯ ಮಧ್ಯಂತರ ಪರಿಶೀಲನೆಯಲ್ಲಿ ಕೇಂದ್ರ ಯೋಜನೆಗೆ ಆದ್ಯತೆ ನೀಡಲಾಗಿದೆ. ಹನ್ನೆರಡನೆ ಯೋಜನೆಯಡಿ ಗುರುತಿಸಿದ ಹೆಚ್ಚಿನ ಕಾರ್ಯತಾಂತ್ರಿಕ ಸವಾಲುಗಳನ್ನು ರಾಜ್ಯಗಳೇ ಪರಿಹರಿಸಬೇಕಾಗಿದೆ. ಯೋಜನೆ ರೂಪಿಸುವಿಕೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ವಿನ್ಯಾಸದಲ್ಲಿ ರಾಜ್ಯಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ಒದಗಿಸಿದರೆ ಅದು ವಿವೇಕದ ಹಾಗೂ ಪರಿಣಾಮಕಾರಿ ಕ್ರಮವಾಗಬಲ್ಲದು.

## ಪಂಚಾಯತ್ ರಾಜ್ ಸಂಸ್ಥೆಗಳು

ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಕ್ರಮಗಳ ವಿನ್ಯಾಸಗೊಳಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಯ ಪಾತ್ರದ ಬಗ್ಗೆ ಯೋಜನಾ ಆಯೋಗದ ಸದಸ್ಯರು ವಿವರಿಸಿದರು. ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

* ಪಂಚಾಯತ್ ರಾಜ್ ಸಂಸ್ಥೆಗಳು ಅನೇಕ ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುವುದರಿಂದ ಹೇಗೆ ಅವು ಕಾರ್ಯಕ್ರಮಗಳ ವಿನ್ಯಾಸಗೊಳಿಸುವಿಕೆಯಲ್ಲಿ ತೊಡಗಿಸಿಕೊಳ್ಳ ಬೇಕೆಂಬ ಬಗ್ಗೆ ಸಲಹೆಯನ್ನು ನೀಡುವುದು.
* ವಿಶೇಷವಾಗಿ ಹಿಂದುಳಿದ ವರ್ಗಗಳ ದೃಷ್ಟಿಯಿಂದ ನಾಗರೀಕರ ಆಶೋತ್ತರಗಳನ್ನು ಈಡೇರಿಸುವಲ್ಲಿ ಈಗಿರುವ ಕಾರ್ಯಕ್ರಮಗಳ ಕಾರ್ಯಕ್ಷಮತೆ ಹಾಗೂ ಅನುದಾನ ಒದಗಿಸುವಿಕೆಯಲ್ಲಿ ಹೇಗೆ ಸುಧಾರಣೆ ತರಬೇಕೆಂಬ ಬಗ್ಗೆ ಗಂಭೀರವಾಗಿ ಪರೀಕ್ಷಿಸುವುದು.
* ಅವುಗಳ ಅನುಷ್ಠಾನ ಸಾಮರ್ಥ್ಯವನ್ನು ಸುಧಾರಿಸುವ ಮಾರ್ಗೋಪಾಯಗಳನ್ನು ನೀಡುವುದು.
* ಸೇವಾ ನೀಡಿಕೆಯಲ್ಲಿ ಸುಧಾರಣೆಯನ್ನು ತರಲು ಯೋಜನೆ/ಕಾರ್ಯಕ್ರಮಗಳ ಸರಳೀಕರಣದ ಕ್ರಮಗಳನ್ನು ತಿಳಿಸುವುದು.
* ದಕ್ಷಿಣ ಪ್ರಾದೇಶಿಕ ಮಟ್ಟದ ಅನುಕೂಲಕ್ಕಾಗಿ ವಿಶೇಷವಾಗಿ ಕರಾವಳಿ ಪ್ರದೇಶಕ್ಕೆ ಸಂಬಂಧಿಸಿದಂತೆ ಈಗಿರುವ ಕಾರ್ಯಕ್ರಮಗಳಲ್ಲಿ ಯಾವ ಬದಲಾವಣೆಯನ್ನು ತರಲು ಇಚ್ಛಿಸಲಾಗಿದೆಯೆಂಬುದನ್ನು ತಿಳಿಸುವುದು.
* ಯಾವ ಕಾರ್ಯಕ್ರಮ/ಯೋಜನೆಗಳಲ್ಲಿ ಸಾರ್ವಜನಿಕ–ಖಾಸಗಿ–ಸಹಭಾಗಿತ್ವ ಬೇಕು ಮತ್ತು ಎಲ್ಲಿ ಸರ್ಕಾರವೇ ಭಾಗವಹಿಸುವುದನ್ನು ಮುಂದುವರೆಸಬೇಕೆಂಬ ಬಗ್ಗೆ ತಿಳಿಸುವುದು.
* ನಾಗರಿಕ ಸಮಾಜ ಸಂಸ್ಥೆಗಳು ಯೋಜನೆಯಡಿ ಮಾಹಿತಿ ಹರಿವು, ಜವಾಬ್ದಾರಿ ಮತ್ತು ಪಾರದರ್ಶಕತೆಯನ್ನು ಹೊಂದುವಂತೆ ಆಡಳಿತದ ಎಲ್ಲ ಮಟ್ಟಗಳಲ್ಲಿ (ರಾಜ್ಯ, ಜಿಲ್ಲೆ, ತಾಲ್ಲೂಕು) ಹೇಗೆ ಭಾಗವಹಿಸಬೇಕೆಂಬ ಬಗ್ಗೆ ಸಲಹೆ ನೀಡುವುದು.

ಯೋಜನಾ ಪ್ರಕ್ರಿಯೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿದ ನಂತರ ಈ ಕೆಳಗಿನ ಕ್ಷೇತ್ರಗಳ ಚರ್ಚೆಯನ್ನು ಗುಂಪುಗಳಲ್ಲಿ ಕೈಗೊಳ್ಳಲಾಯಿತು.

1. **ಮೂಲಸೌಕರ್ಯ :** ಅವಶ್ಯಕ ರಚನೆ ಮತ್ತು ಸೌಲಭ್ಯಗಳು.
2. **ಸೇವೆಗಳು :** ಸಮರ್ಥ ಹಾಗೂ ಸಮಾನ ಸಾರ್ವಜನಿಕ ಸೇವೆಗಳ ನೀಡಿಕೆ.
3. **ಅಧಿಕಾರ ವರ್ಗಾವಣೆ :** ಸ್ವಾಯತ್ತತೆ ಮತ್ತು ವಿಕೇಂದ್ರೀಕರಣ.
4. **ನಿಧಿ :** ಹಂಚಿಕೆಯ ಆದ್ಯತೆಗಳು
5. **ಸ್ಥಳೀಯ ಯೋಜನೆ :** ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯ ಪರಿಹಾರಗಳು.
6. **ಸಾಮರ್ಥ್ಯ :** ನಾಗರೀಕರು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ತರಬೇತಿ

ಯೋಜನಾ ಆಯೋಗವು ಮೇಲಿನ ಚರ್ಚೆಯಿಂದ ಈ ಕೆಳಗಿನ ಅಂಶಗಳ ಬಗ್ಗೆ ಉತ್ತರವನ್ನು ಬಯಸಿತ್ತು.

* 2017 ರಲ್ಲಿ ಈ ವಿಷಯಗಳಲ್ಲಿ ದೂರದೃಷ್ಟಿ ಹೇಗಿರಬೇಕು?





* ನಾವು ರಚನಾತ್ಮಕವಾಗಿ ಅಲ್ಲಿಗೆ ಹೇಗೆ ಹೋಗಬೇಕು? ಅದು ಹೇಗೆ ಸಾಧ್ಯ?
* ಕೇಂದ್ರದ ಕೊಡುಗೆ ಏನು? ರಾಜ್ಯಗಳ ಕೊಡುಗೆ ಏನು?
* ಈ ದೂರದೃಷ್ಟಿಯನ್ನು ಸಾಧಿಸಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೇಗೆ ಸಬಲೀಕರಣ ಗೊಳಿಸಬೇಕು?

ಮೇಲಿನ ಆರು ಕ್ಷೇತ್ರಗಳನ್ನು ಮೂರು ಗುಂಪುಗಳಿಗೆ ಸೀಮಿತಗೊಳಿಸಲಾಯಿತು.

1. ಮೂಲಸೌಕರ್ಯ ಮತ್ತು ಸೇವೆಗಳು, 2. ಅಧಿಕಾರಿ ನೀಡಿಕೆ ಮತ್ತು ನಿಧಿ, 3. ಸ್ಥಳೀಯ ಸಮಸ್ಯೆಗಳು ಮತ್ತು ಸಾಮರ್ಥ್ಯ. ಈ ಗುಂಪುಗಳ ಚರ್ಚೆಯಿಂದ ಈ ಕೆಳಗಿನ ಅಂಶಗಳು ವ್ಯಕ್ತವಾದವು.

## 1. ಮೂಲ ಸೌಕರ್ಯ ಮತ್ತು ಸೇವೆಗಳು

ಈ ಗುಂಪು ಚರ್ಚೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ದೂರದೃಷ್ಟಿಯನ್ನು ರೂಪಿಸಲಾಯಿತು. ಈ ಸಂಸ್ಥೆಗಳು ಗುಣಮಟ್ಟದ ಜನಜೀವನವನ್ನು ನಡೆಸುವಂತಾಗಲು ಹಾಗೂ ಎಲ್ಲ ಅವಕಾಶಗಳನ್ನು ನೀಡಲು ಅನುಕೂಲವಾಗುವಂತೆ ಜನರನ್ನು ಸಿದ್ಧಗೊಳಿಸಲು ಬೇಕಾದ ಎಲ್ಲ ಸೇವೆಗಳನ್ನು 2017ರ ವೇಳೆಗೆ ಒದಗಿಸುವಂತಾಗಬೇಕು. ಇದನ್ನು ಸಾಧಿಸಲು ಒಳಗಿನ ಮತ್ತು ಹೊರಗಿನ (ಬಾಹ್ಯ) ಕಾರ್ಯಾಚರಣೆಗಾಗಿ ಭೌತಿಕ ಮೂಲಸೌಕರ್ಯಗಳನ್ನು ಬಲಗೊಳಿಸುವ ಬಗ್ಗೆ ಈ ಗುಂಪು ಸಲಹೆ ಮಾಡಿತು. ಅದರ ವಿವರಗಳು ಕೆಳಗಿನಂತಿವೆ.

### ಒಳ ಮೂಲಸೌಕರ್ಯ

– ಕಚೇರಿ ಕಟ್ಟಡಗಳು ಮತ್ತು ಮೂಲಸೌಕರ್ಯಕ್ಕೆ ನೆರವಾಗುವ ಮಾನವಶಕ್ತಿ : ಇದಕ್ಕಾಗಿ ಮುಡಿಪಾದ ಮಾನವಶಕ್ತಿ.

– ವಿವಿಧ ಕಾರ್ಯಕ್ರಮಗಳ ದಾಖಲೆಗಳನ್ನಿಡಲು ಹಾಗೂ ಉಸ್ತುವಾರಿ ಮಾಡಲು ಮಾನವಶಕ್ತಿ

### ಬಾಹ್ಯ ಮೂಲಸೌಕರ್ಯ

– ವಸತಿ (ಮನೆ ನಿರ್ಮಾಣಕ್ಕಾಗಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಒಂದೇ ವೆಚ್ಚ ; ಅದೇ ಸಾಮಗ್ರಿ ಅದೇ ವೆಚ್ಚ)

– ಕುಡಿಯುವ ನೀರು (ನೀರು ಕೊಯ್ಲು ವ್ಯವಸ್ಥೆಯ ಬಲವರ್ಧನೆ)

– ನೈರ್ಮಲ್ಯ

– ಸಂಪರ್ಕ

– ನಗರ ಪ್ರದೇಶದಲ್ಲಿರುವಂತಹ ಶಿಕ್ಷಣ ಮತ್ತು ಆರೋಗ್ಯ ಮೂಲಸೌಕರ್ಯಗಳನ್ನು ಗ್ರಾಮಿಣ ಪ್ರದೇಶಗಳಲ್ಲಿ ಬಲಗೊಳಿಸುವುದು.

– ವಿದ್ಯುಚ್ಛಕ್ತಿ ನಿರಂತರ ಪೂರೈಕೆಯನ್ನು ಖಾತ್ರಿಪಡಿಸುವುದು.

– ಮಾರುಕಟ್ಟೆಗಾಗಿ ಸ್ಥಳೀಯ ಮೂಲಸೌಕರ್ಯದ ಅವಕಾಶ ಮತ್ತು ಬಲಗೊಳಿಸುವುದು ಮತ್ತು ಮಾರುಕಟ್ಟೆ ಮೂಲಸೌಕರ್ಯ (ಶೈತ್ಯಾಗಾರ, ಇತ್ಯಾದಿ)

## 2. ಅಧಿಕಾರ ನೀಡಿಕೆ ಮತ್ತು ನಿಧಿ

ಸ್ವಾಯತ್ತತೆ ಮತ್ತು ವಿಕೇಂದ್ರೀಕರಣದ ಕುರಿತು ವಿವರವಾದ ಚರ್ಚೆಯನ್ನು ಈ ಗುಂಪು ಕೈಗೊಂಡು ಕೆಳಗೆ ಸಲಹೆಯನ್ನು ನೀಡಿತು.

* 3Fs ಮತ್ತು 4 Fs ಗಳಲ್ಲದೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸ್ವಾತಂತ್ರ್ಯವನ್ನು ನೀಡುವದರ ಜೊತೆಗೆ ಅಧಿಕಾರ ನೀಡುವ ಕುರಿತು ಮರು ವಿಚಾರ ಮಾಡುವುದು.

* ಪಂಚಾಯತ್ ರಾಜ್ ಸಂಸ್ಥೆಗಳಿಗೆ 3Fs ಅಧಿಕಾರ ನೀಡುವುದಲ್ಲದೆ ಮೂರು ಸ್ತರಗಳಾದ ಜಿಲ್ಲಾ, ಬ್ಲಾಕು ಹಾಗೂ ಗ್ರಾಮ ಪಂಚಾಯತ್‌ಗಳ ನಡುವೆ ಅಧಿಕಾರವನ್ನು ಹಂಚುವುದಕ್ಕೆ ಒತ್ತು ನೀಡುವುದು – ರಾಜ್ಯ ಹಣಕಾಸು ಆಯೋಗಗಳಿಗೆ ಈ ಅಧಿಕಾರವನ್ನು ನೀಡುವುದು.
* ಮೂರುಸ್ತರಗಳ ಪಂಚಾಯಿತಿಗಳ ಅಧಿಕಾರಕ್ಕೆ ಸಂಬಂಧಿಸಿದಂತೆ ಅವುಗಳ ಪಾತ್ರದ ಕುರಿತು ಸ್ಪಷ್ಟ ಚಿತ್ರಣ.
* ಶಾಸಕರ ನಿಧಿ ಮತ್ತು ಸಂಸತ್ ಸದಸ್ಯರ ನಿಧಿ ಕುರಿತು ಮರು ವಿಚಾರ ತೆಗೆದು ಹಾಕುವುದು ಅಥವಾ ಮರುವಿನ್ಯಾಸಗೊಳಿಸುವುದು.
* ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಹೆಚ್ಚು ಮುಕ್ತ ನಿಧಿ.
* ಹೆಚ್ಚಿನ ನಿಧಿ ರಾಜ್ಯ ವಲಯ ಕಾರ್ಯಕ್ರಮದ್ದಾಗಿದ್ದು ಪಂಚಾಯತ್ ರಾಜ್ ವ್ಯಾಪ್ತಿಗೆ ಬರುವುದಿಲ್ಲ. ಹೆಚ್ಚು ನಿಧಿಯನ್ನು ಒದಗಿಸುವುದು.
* ಜಿಲ್ಲಾ ವಲಯ ಯೋಜನೆಗಳಡಿ ವೇತನಕ್ಕಾಗಿ ಸಂದಾಯವಾದ ನಂತರ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಬಹಳ ಕಡಿಮೆ ಅನುದಾನ ಒದಗಿ ಬರುವುದನ್ನು ಹೋಗಲಾಡಿಸಬೇಕು.
* ಈ ಸಂಸ್ಥೆಗಳ ತೆರಿಗೆ ಹಾಕುವ ಅಧಿಕಾರವನ್ನು ಬಲಗೊಳಿಸಬೇಕು. ಉತ್ತಮ ಸಂಪನ್ಮೂಲ ಕ್ರೋಢಿಕರಣದ ಪ್ರಯತ್ನಗಳಿಗಾಗಿ ಪ್ರೋತ್ಸಾಹ ಧನವನ್ನು ನೀಡಬೇಕು. ರಾಜ್ಯ ಹಣಕಾಸು ಆಯೋಗಗಳಿಗೆ ಈ ಅಧಿಕಾರವನ್ನು ನೀಡಬೇಕು ಮತ್ತು ಕಾಲಕಾಲಕ್ಕೆ ಪರಿಷ್ಕರಿಸಬೇಕು.
* ಸೂಕ್ತ ಯೋಜನಾ ಮಾನವ ಶಕ್ತಿಯನ್ನು ಒದಗಿಸಿ ಜಿಲ್ಲಾ ಯೋಜನಾ ಸಮಿತಿಗಳನ್ನು ಬಲಗೊಳಿಸ ಬೇಕು.
* ಸರ್ಕಾರೇತರ ಸಂಘಗಳಿಗೆ ವಿವಿಧ ಏಜೆನ್ಸಿಗಳಿಂದ ನೇರವಾಗಿ ನಿಧಿಯನ್ನು ನೀಡುವುದನ್ನು ತೆಗೆದುಹಾಕಬೇಕು ಮತ್ತು ಅದನ್ನು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ನೀಡಬೇಕು.
* ಗ್ರಾಮಸಭೆಯಿಂದಲೇ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳಡಿ ಫಲಾನುಭವಿಗಳ ಆಯ್ಕೆಯಾಗಬೇಕು ಮತ್ತು ಉಳಿದ ಸಂಸ್ಥೆಗಳು ಈ ಫಲಾನುಭವಿಗಳ ಪಟ್ಟಿಯನ್ನು ಬದಲಾವಣೆ ಮಾಡಲು ಅನುಮತಿಯನ್ನು ನೀಡಬಾರದು.
* ರಾಜ್ಯ ಹಣಕಾಸು ಆಯೋಗಗಳ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ ಅಥವಾ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ವಿಳಂಬ ಮಾಡುತ್ತಿವೆ ಇಲ್ಲವೇ ಬಾಕಿ ಇರುತ್ತವೆ. ರಾಜ್ಯ ಸರ್ಕಾರಗಳು ಶಿಫಾರಸ್ಸುಗಳನ್ನು ಅನುಷ್ಠಾನ ಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಬೇಕು.
* ಬಹು ಅನುಷ್ಠಾನ ಸಂಸ್ಥೆಗಳು (ಸಮಾನಾಂತರ ಸಂಸ್ಥೆಗಳು – ಗ್ರಾಮ ಅರಣ್ಯ ಸಮಿತಿ, ಇತ್ಯಾದಿ) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೊಣೆಗಾರಿಕೆಯನ್ನಾಗಿ ಮಾಡಬೇಕು.

### 3. ಸ್ಥಳೀಯ ಯೋಜನೆ (ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯ ಪರಿಹಾರ) ಮತ್ತು ಸಾಮರ್ಥ್ಯ (ನಾಗರೀಕರು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರಿಗೆ ತರಬೇತಿ)

ಈ ಗುಂಪು ಸ್ಥಳೀಯ ಸಮಸ್ಯೆಗಳು ಹಾಗೂ ಅವುಗಳಿಗೆ ಪರಿಹಾರ ಹೇಗಿರಬೇಕು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ





ಸಾಮರ್ಥ್ಯವನ್ನು ಹೆಚ್ಚಿಸಲು ಯಾವ ತರಬೇತಿ ಬೇಕು ಎಂಬ ಬಗ್ಗೆ ಸುದೀರ್ಘವಾದ ಚರ್ಚೆಯನ್ನು ನಡೆಸಿತು. ಚರ್ಚೆಯಿಂದ ಹೊರಹೊಮ್ಮಿದ ಅಂಶಗಳು ಈ ಕೆಳಗಿನಂತಿವೆ.

**(ಅ) ಸ್ಥಳೀಯ ಸಮಸ್ಯೆಗಳು**

* ನಿಧಿಯ ಕೊರತೆ
* ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಮತ್ತು ಸಂರಕ್ಷಣೆ
* ತಾಂತ್ರಿಕ ಮತ್ತು ಯೋಜನಾ ಸಿಬ್ಬಂದಿಯ ಕೊರತೆ
* ವಿವಿಧ ಇಲಾಖೆಗಳ ನಡುವಿನ ಸಮನ್ವಯ ಕೊರತೆ
* ವಿವಿಧ ಯೋಜನೆಗಳು, ಕಾರ್ಯಕ್ರಮಗಳು, ನಿಧಿಯ ಹರಿವು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಮಟ್ಟದಲ್ಲಿ ಮಾಹಿತಿಯ ಕೊರತೆ.
* ಪಂಚಾಯತ್ ರಾಜ್ ಸಂಸ್ಥೆಗಳನ್ನು ಬೈಪಾಸ್ ಮಾಡುವ ಸಮಾನಾಂತರ ಸಮಿತಿಗಳ ಅಸ್ತಿತ್ವ
* ಕಡಿಮೆ ಅವಧಿಯ ಸೇವೆ.
* ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ಸಂಕೀರ್ಣ ಮಾರ್ಗಸೂಚಿಗಳು
* ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸುಸ್ಥಿರ ಜನಜೀವನ
* ಸಂಪನ್ಮೂಲ ಮತ್ತು ಜನ ಸಂಘರ್ಷ. – ವನ್ಯಜೀವಿ ಮತ್ತು ಜನ ಸಂಘರ್ಷ

**(ಆ) ಪರಿಹಾರಗಳು**

* ಸೂಕ್ತ ಚಟುವಟಿಕೆ ನಕ್ಷೆಯ ಅವಶ್ಯಕತೆಯಿದೆ (ಉದಾ : ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು, ಸಾರ್ವಜನಿಕ ವಿತರಣಾ ಪದ್ಧತಿ, ಅಂಗನವಾಡಿ ಇತ್ಯಾದಿ ವಿಷಯಗಳನ್ನು ಗ್ರಾಮ ಪಂಚಾಯತಿ ನಿರ್ವಹಿಸಬೇಕು)
* ಚುನಾಯಿತ ಸದಸ್ಯರು ಅದರಲ್ಲೂ ವಿಶೇಷವಾಗಿ ಸಮಾಜದ ಹಿಂದುಳಿದ ವರ್ಗ ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವುದು.
* ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸ್ಥಳೀಯ ಮಟ್ಟದಲ್ಲಿ ನಮನೀಯತೆ (ಹೊಂದಾಣಿಕೆ)ಯ ಅವಶ್ಯಕತೆಯಿದೆ.
* ಇಲಾಖಾ ಅಧಿಕಾರಿ ಮತ್ತು ಸಿಬ್ಬಂದಿಗಳ ಸಾಮರ್ಥ್ಯ ಅಭಿವೃದ್ಧಿ
* ಸಾಮಾಜಿಕ ಗುಂಪುಗಳಿಗೆ ತಿಳುವಳಿಕೆ ನೀಡುವುದು – ಸ್ವಸಹಾಯ ಗುಂಪುಗಳು, ಯುವಕ ಸಂಘಗಳು, ಇತ್ಯಾದಿಗಳಿಗೆ ಗ್ರಾಮ ಸಭೆಯನ್ನು ಬಲಗೊಳಿಸಲು
* ಪಂಚಾಯತ್ ರಾಜ್ ಸಂಸ್ಥೆಗಳನ್ನು ತಾಂತ್ರಿಕ ಮತ್ತು ಯೋಜನಾ ಸಿಬ್ಬಂದಿಯನ್ನು ಒದಗಿಸಿ ಬಲಗೊಳಿಸುವುದು.
* PESA ಅಧಿನಿಯಮದಲ್ಲಿದ್ದಂತೆ ಗ್ರಾಮ ಸಭೆಗಳಿಗೆ ಅಧಿಕಾರ ನೀಡಿ ಬಲಗೊಳಿಸುವುದು.
* ದತ್ತಾಂಶ (ಅಂಕಿ–ಅಂಶಗಳ)ಗಳ ಇಂದೀಕರಣ (ಸ್ಥಳೀಯ ಯೋಜನೆಗೆ ತಾಂತ್ರಿಕ ನೆರವು)
* ಕೆಳಮಟ್ಟದ ಹೊಣೆಗಾರಿಕೆ ಪ್ರಕ್ರಿಯೆಯನ್ನು ಬಲಗೊಳಿಸುವುದು
* ಸಾಮಾಜಿಕ ಪರಿಶೋಧನೆಯನ್ನು ಬಲಗೊಳಿಸುವುದು.
* ಪಂಚಾಯತ್ ರಾಜ ಸಂಸ್ಥೆಗಳ ಸದಸ್ಯರಿಗೆ ಸಾಕ್ಷರತಾ ಕಾರ್ಯಕ್ರಮಗಳು.
* ಎಲ್ಲ ಯೋಜನೆಗಳನ್ನು ಜಿಲ್ಲಾ ಯೋಜನಾ ಸಮಿತಿಗಳಿಗೆ ಸಲ್ಲಿಸಿ ಅನುಮೋದನೆಯನ್ನು ಪಡೆಯುವುದು.

## ನಾಗರಿಕ ಸಮಾಜ ಸಂಸ್ಥೆಗಳು, ಸಾಮಾಜಿಕ ನ್ಯಾಯ ಮತ್ತು ಲಿಂಗ ಸಂಬಂಧಿ ವಿಷಯಗಳು

ನಾಗರೀಕ ಸಮಾಜ ಸಂಸ್ಥೆಗಳ ಪಾತ್ರವನ್ನು ಈ ಅಧಿವೇಶನದಲ್ಲಿ ಚರ್ಚಿಸಲಾಯಿತು. ಈ ಚರ್ಚೆಯಲ್ಲಿ ಬಂದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

* ಕಾರ್ಯತಂಡ ಅಥವಾ ಆನ್‌ಲೈನ್ ಮೂಲಕ ನೇರವಾಗಿ ಹನ್ನೆರಡನೇ ಪಂಚವಾರ್ಷಿಕ ಯೋಜನೆ ತಯಾರಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ.
* ವಿಶೇಷವಾಗಿ ಹಿಂದುಳಿದ ವರ್ಗಗಳ ದೃಷ್ಟಿಯಿಂದ ನಾಗರೀಕರ ಆಶೋತ್ತರಗಳನ್ನು ಈಡೇರಿಸುವಲ್ಲಿ ಈಗಿನ ಕಾರ್ಯಕ್ರಮಗಳ ಕಾರ್ಯಕ್ಷಮತೆ ಹಾಗೂ ಅನುದಾನ ಒದಗಿಸುವಿಕೆಯಲ್ಲಿ ಹೇಗೆ ಸುಧಾರಣೆ ತರಬೇಕೆಂಬ ಬಗ್ಗೆ ಗಂಭೀರವಾಗಿ ಪರಿಶೀಲಿಸುವುದು.
* ವಿಶೇಷವಾಗಿ ರಾಜ್ಯ ಹಾಗೂ ಜಿಲ್ಲೆಗಳಲ್ಲಿ ಸರ್ಕಾರಿ ವ್ಯವಸ್ಥೆಯ ಅನುಷ್ಠಾನ ಸಾಮರ್ಥ್ಯ ಸುಧಾರಣೆಗಾಗಿ ಮಾರ್ಗೋಪಾಯಗಳನ್ನು ಸೂಚಿಸುವುದು.
* ಸೇವಾ ನೀಡಿಕೆಯಲ್ಲಿ ಸುಧಾರಣೆಯನ್ನು ತರಲು ಯೋಜನೆ/ಕಾರ್ಯಕ್ರಮಗಳ ಸರಳೀಕರಣದ ಕ್ರಮಗಳನ್ನು ತಿಳಿಸುವುದು.
* ದಕ್ಷಿಣ ಪ್ರಾದೇಶಿಕ ಮಟ್ಟದ ಅನುಕೂಲಕ್ಕಾಗಿ ವಿಶೇಷವಾಗಿ ಕರಾವಳಿ ಪ್ರದೇಶಕ್ಕೆ ಸಂಬಂಧಿಸಿದಂತೆ ಈಗಿರುವ ಕಾರ್ಯಕ್ರಮಗಳಲ್ಲಿ ಯಾವ ಬದಲಾವಣೆಯನ್ನು ತರಲು ಇಚ್ಛಿಸಲಾಗಿದೆಯೆಂಬು ದನ್ನು ತಿಳಿಸುವುದು.
* ಯಾವ ಕಾರ್ಯಕ್ರಮ/ಯೋಜನೆಗಳಲ್ಲಿ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಬೇಕು ಮತ್ತು ಎಲ್ಲಿ ಸರ್ಕಾರವೇ ಭಾಗವಹಿಸುವುದನ್ನು ಮುಂದುವರೆಸಬೇಕೆಂಬ ಬಗ್ಗೆ ತಿಳಿಸುವುದು.
* ನಾಗರಿಕ ಸಮಾಜ ಸಂಸ್ಥೆಗಳು ಯೋಜನೆಯಡಿ ಮಾಹಿತಿ ಹರಿವು, ಜವಾಬ್ದಾರಿ ಮತ್ತು ಪಾರದರ್ಶಕತೆಯನ್ನು ಹೊಂದುವಂತೆ ಆಡಳಿತದ ಎಲ್ಲ ಮಟ್ಟಗಳಲ್ಲಿ (ರಾಜ್ಯ, ಜಿಲ್ಲೆ, ತಾಲ್ಲೂಕು) ಹೇಗೆ ಭಾಗವಹಿಸಬೇಕೆಂಬ ಬಗ್ಗೆ ಸಲಹೆ ನೀಡುವುದು.

ಈ ಕೆಳಗಿನ ವಿಷಯಗಳ ಕುರಿತು ಗುಂಪು ಚರ್ಚೆಗಳನ್ನು ಕೈಗೊಳ್ಳಲಾಯಿತು.

1. ಹನ್ನೆರಡನೆ ಯೋಜನೆಯ ಹೊಸ/ವಿಶೇಷ ಕಾರ್ಯಕ್ರಮಗಳ ವಿನ್ಯಾಸದಲ್ಲಿ ನಾಗರೀಕ ಸಮಾಜ ಸಂಸ್ಥೆಗಳ ಪಾತ್ರ.
2. ಒಳಗೊಳ್ಳುವ ಬೆಳವಣಿಗೆಯಲ್ಲಿ ಈ ಸಂಸ್ಥೆಗಳ ಪಾತ್ರ : ವಿಷಯ, ತಜ್ಞತೆ.
3. ಸರ್ಕಾರದ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಸಂಘಟನೆ, ಮಾಹಿತಿ, ಶಿಕ್ಷಣ ಮತ್ತು ಸಂವಹನ, ಸಾಮರ್ಥ್ಯ ಅಭಿವೃದ್ಧಿಯನ್ನು ಕೈಗೊಳ್ಳುವಲ್ಲಿ ಈ ಸಂಸ್ಥೆಗಳ ಪಾತ್ರ.
4. ಸರ್ಕಾರದ ಯೋಜನೆ, ಕಾರ್ಯಕ್ರಮಗಳ ಅನುಷ್ಠಾನ ಮತ್ತು ಸೇವಾ ನೀಡಿಕೆಯಲ್ಲಿ ಸುಧಾರಣೆ ತರುವಲ್ಲಿ ಈ ಸಂಸ್ಥೆಗಳ ಪಾತ್ರ.
5. ಸಾಮಾಜಿಕ ಪರಿಶೋಧನೆ, ಜನ ಸುನವಾಯಿ, ನಾಗರೀಕ ವರದಿ ಕಾರ್ಡುಗಳು ಇತ್ಯಾದಿಗಳ ಮೂಲಕ ಹೊಣೆಗಾರಿಕೆಯನ್ನು ಖಾತ್ರಿಪಡಿಸಲು ಈ ಸಂಸ್ಥೆಗಳ ಪಾತ್ರ.





**ಮೇಲಿನ ಕ್ಷೇತ್ರಗಳ ಕುರಿತು ಗುಂಪುಗಳು ಚರ್ಚೆಯನ್ನು ಕೈಗೊಂಡು ಹೊರಹೊಮ್ಮಿದ ಅಂಶಗಳು ಈ ಕೆಳಗಿನಂತಿವೆ.**

* ನೀತಿ ನಿರೂಪಣೆಯ ಹಂತದಲ್ಲಿ ನಾಗರೀಕ ಸಮಾಜ ಸಂಸ್ಥೆಗಳನ್ನು ತೊಡಗಿಸಬೇಕು. ಅಲ್ಲದೆ ಸಾರ್ವಜನಿಕ ಸಮಾಲೋಚನೆಯನ್ನು ಕೈಗೊಳ್ಳಬೇಕು.
* ಆಂತರಿಕ ಉತ್ಪನ್ನದ ಬೆಳವಣಿಗೆಗೆ ಮಾತ್ರ ಆದ್ಯತೆ ನೀಡದೆ ಮಾನವ ಅಭಿವೃದ್ಧಿ ಸೂಚಿಗೂ ಒತ್ತು ನೀಡಬೇಕು.
* ಯಾವುದೇ ಪ್ರಮುಖ ಯೋಜನೆಯಲ್ಲಿ ಸ್ಥಳೀಯ ಸಮುದಾಯದ ಸಾಕಷ್ಟು ಪಾಲು ಮತ್ತು ಅವರ ಆಸಕ್ತಿಯನ್ನು ಒಳಗೊಂಡಿರಬೇಕು.
* ಕೂಲಿ ಉದ್ಯೋಗದ ಬದಲು ಉತ್ಪಾದಕ ಉದ್ಯೋಗಕ್ಕೆ ಹೆಚ್ಚಿನ ಒತ್ತು.
* ಸ್ಥಳೀಯವಾಗಿ ಉದ್ಯೋಗ ನೀಡಬಹುದಾದ ಕೌಶಲ್ಯಗಳ ಅಭಿವೃದ್ಧಿಯೂ ಸೇರಿದಂತೆ ಕೌಶಲ್ಯ ಅಭಿವೃದ್ಧಿಗೆ ಒತ್ತು.
* ದೂರದ ಕ್ಷೇತ್ರಗಳ ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಮತ್ತು ಮಕ್ಕಳಿಗೆ ಸಾಕಷ್ಟು ಸಂರಕ್ಷಣೆಯನ್ನು ನೀಡಲು ಒತ್ತು.
* ಬಡವರಿಗೆ ಹಕ್ಕುಗಳನ್ನು ನೀಡಲಾಗಿದೆ; ಹಕ್ಕುಗಳ ಬಗ್ಗೆ ಅವರಿಗೆ ಮಾಹಿತಿ ನೀಡಿಲ್ಲ. ಹಕ್ಕುಗಳನ್ನು ಪಡೆಯಲು ಅವರನ್ನು ಸಂಘಟಿಸಿಲ್ಲ. ಕೊಡಲ್ಪಟ್ಟ ಹಕ್ಕುಗಳನ್ನು ಉಪಯೋಗಿಸದಿದ್ದಲ್ಲಿ ಅವುಗಳ ಪ್ರಯೋಜನವಿಲ್ಲ. ಅವರಿಗೆ ಶಿಕ್ಷಣ ನೀಡಲು ಸಂಘಟಿಸಲು ಅನುದಾನವನ್ನು ನೀಡಬೇಕು.
* ಮೂರು ಮುಖ್ಯ ಶಬ್ದಗಳು : ಮಾಹಿತಿ–ಸಂಘಟನೆ–ಅನುಷ್ಠಾನ
* ಫಲಿತಾಂಶಗಳನ್ನು ಸಾಧಿಸಲು ಅನುಷ್ಠಾನವನ್ನು ನೇರವಾಗಿ ಕೈಗೊಳ್ಳಲಾಗುತ್ತದೆ. ಅದರ ಬದಲಾಗಿ ಬೃಹತ್ ಪ್ರಮಾಣದಲ್ಲಿ ಮಾಡಲು ಆ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು.
* ಸಂವಿಧಾನದ 73ನೇ ತಿದ್ದುಪಡಿಯ ಅಂಶಗಳ ತ್ವರಿತ ಅನುಷ್ಠಾನ ಖಾತ್ರಿಪಡಿಸಲು ಯೋಜನಾ ಆಯೋಗ ತನ್ನ ಅಧಿಕಾರವನ್ನು ಬಳಸಬೇಕು.
* ಉತ್ತಮ ಆಡಳಿತಕ್ಕಾಗಿ ಆಡಳಿತ ಸುಧಾರಣೆ : ಪ್ರಾಮಾಣಿಕ ವ್ಯಕ್ತಿಗಳ ಗುಂಪನ್ನು ರಚಿಸಿ ಅವರಿಗೆ ಸೂಕ್ತ ಜನರನ್ನು ಆಯ್ಕೆ ಮಾಡುವ ಅಧಿಕಾರ ನೀಡುವುದು – ಅವರಿಗೆ ಸೂಕ್ತ ಅವಧಿಯ ಭದ್ರತೆ ನೀಡುವುದು.
* ಕಾಲಾವಧಿಯ ಉಸ್ತುವಾರಿ ಮತ್ತು ಮೌಲ್ಯಮಾಪನ.
* ಮಾಹಿತಿ ತಂತ್ರಜ್ಞಾನದ ಉಪಯೋಗ
* ಮೌಲ್ಯಮಾಪನ ಅಧ್ಯಯನಗಳ ದತ್ತಾಂಶ
* ಒಟ್ಟುಗೂಡಿಕೆ : ಸಂಪನ್ಮೂಲಗಳ ವ್ಯರ್ಥಗೊಳಿಸುವಿಕೆ ಮತ್ತು ಇಲಾಖೀಕರಣಗಳಿಂದ ತೊಂದರೆಗಳನ್ನು ನಿವಾರಿಸಲು ಸರ್ಕಾರಕ್ಕೆ ಸಹಾಯ ಮಾಡುವುದು.
* ಸರ್ಕಾರದ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಮೌಲ್ಯಮಾಪನವನ್ನು ಹೊರಗುತ್ತಿಗೆ ಮೂಲಕ ಹಾಗೂ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳುವುದು.
* ಮಿಲೆನೀಯಂ ಅಭಿವೃದ್ಧಿ ಗುರಿಗಳಲ್ಲಿ ಕೆಲವು ಗುರಿಗಳ ಜವಾಬ್ದಾರಿಯನ್ನು ನಾಗರಿಕ ಸಮಾಜ ಸಂಸ್ಥೆಗಳು ತೆಗೆದುಕೊಳ್ಳುವುದು.
* ಈ ಸಂಸ್ಥೆಗಳು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತರಬೇಕಾದ ಮಾನವ ಸಂಪನ್ಮೂಲಗಳನ್ನು ಸರ್ಕಾರದ ಕಾರ್ಯಕ್ರಮಗಳಿಗೆ ಒದಗಿಸುವುದು.

ಕೊನೆಯಲ್ಲಿ ಹೊಣೆಗಾರಿಕೆಯನ್ನು ಖಾತ್ರಿಪಡಿಸಲು ಈ ಸಂಸ್ಥೆಗಳ ಪಾತ್ರದ ಕುರಿತು ಬಹುಮುಖ್ಯವಾದ ವಿಷಯಗಳು

ಈ ಚರ್ಚೆಯಿಂದ ಹೊರಹೊಮ್ಮಿದವು. ಅದರಲ್ಲಿ ಹೊಣೆಗಾರಿಕೆ ಮತ್ತು ಉಸ್ತುವಾರಿ ಪ್ರಮುಖ ಸಮಸ್ಯೆಗಳು ಚರ್ಚೆಯಲ್ಲಿ ಬೆಳಕಿಗೆ ಬಂದವು. ಅವುಗಳಲ್ಲಿನ ಕೆಲವು ಅಂಶಗಳು ಈ ಕೆಳಗಿನಂತಿವೆ.

- ಉಸ್ತುವಾರಿಯನ್ನು ಕೈಗೊಳ್ಳುವಲ್ಲಿ ಮತ್ತು ದೂರುಗಳ ನಿರ್ವಹಣೆಯಲ್ಲಿ ಸರ್ಕಾರ ಅಶಕ್ತವಾಗಿದೆ.
- ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಕೊರತೆ ಭ್ರಷ್ಟಾಚಾರಕ್ಕೆಡೆ ಮಾಡಿಕೊಟ್ಟಿದೆ.
- ಮಾಹಿತಿ ಹಕ್ಕು ಅಧಿನಿಯಮ ಕಲಂ 4ರ ಪ್ರಕಾರ ಮಾಹಿತಿ ಪ್ರಕಟಣೆಯ ಕೊರತೆ.
- ಅಶಕ್ತ ಪಂಚಾಯತಿಗಳು
- ಮಾಹಿತಿ ಕೊರತೆ
- ಉಸ್ತುವಾರಿ, ಹೊಣೆಗಾರಿಕೆ ಸಾಧನ ಮತ್ತು ಹಕ್ಕುಗಳ ಬಗೆಗಿನ ತಿಳಿವಳಿಕೆ ಕೊರತೆ

ಈ ಗುಂಪುಗಳು ಸಮಸ್ಯೆಗಳನ್ನು ಚರ್ಚಿಸುವುದೇ ಅಲ್ಲದೆ ಅವುಗಳಿಗೆ ಪರಿಹಾರವನ್ನು ನೀಡಿವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಕೆಳಗೆ ಕೊಡಲಾಗಿದೆ.

* ಗ್ರಾಮ ಸಭೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಮಟ್ಟದಲ್ಲಿ ಹೊಣೆಗಾರಿಕೆಯನ್ನು ಬಲಗೊಳಿಸಬೇಕು. ಗ್ರಾಮಸಭೆಗಳನ್ನು ಅಧಿಕಾರಯುಕ್ತಗೊಳಿಸಬೇಕು.
* ಸಮುದಾಯ ಉಸ್ತುವಾರಿ ಪ್ರಕ್ರಿಯೆಗಳನ್ನು ಬಲಗೊಳಿಸಬೇಕು.
* ದೂರು (ಕುಂದು ಕೊರತೆ) ನಿವಾರಣೆ ವ್ಯವಸ್ಥೆಯನ್ನು ಬಲಗೊಳಿಸಬೇಕು. ಲೋಕಾಯುಕ್ತ ಮತ್ತು ಲೋಕಪಾಲ ತರಹದ ಒಂಬುಡ್ಸಮನ್ ಸಂಸ್ಥೆಗಳನ್ನು ಎಲ್ಲಾ ಮಟ್ಟಗಳಲ್ಲಿ ಕುಂದುಕೊರತೆ ಮತ್ತು ದೂರುಗಳಿಗೆ ಪರಿಹಾರ ನೀಡಲು ಸ್ಥಾಪಿಸಬೇಕು.
* ನಾಗರೀಕ ವರದಿ ಕಾರ್ಡುಗಳು ಮತ್ತು ಸಾಮಾಜಿಕ ಪರಿಶೋಧನೆಯನ್ನು ಕಡ್ಡಾಯಗೊಳಿಸಬೇಕು.
* ಹೊಸ ತಂತ್ರಜ್ಞಾನವನ್ನು ಹೊಂದಬೇಕು–e–ಸಂಗ್ರಹ, ವರದಿ ಕಾರ್ಡುಗಳು.
* ಹನ್ನೆರಡನೆ ಯೋಜನೆಯಲ್ಲಿ ಆಡಳಿತ ಸುಧಾರಣೆಗೆ ಆದ್ಯತೆ ನೀಡಬೇಕು.
* ಸಿಟಿಜನ್ ಚಾರ್ಟರ್ಸ್ ಮೂಲಕ ನಾಗರೀಕರಿಗೆ ಮಾಹಿತಿ ನೀಡಬೇಕು.
* ಆಯವ್ಯಯ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆಗೆ ಒತ್ತು ನೀಡಬೇಕು.
* ನಾಗರೀಕ ಸಮಾಜ ಸಂಸ್ಥೆಗಳು ಮಾಹಿತಿ ತಿಳುವಳಿಕೆ ಮತ್ತು ಸಮರ್ಥನೆಯಲ್ಲಿ ಕ್ರಿಯಾತ್ಮಕ ಪಾತ್ರವನ್ನು ವಹಿಸಬಹುದು.

## ಕೈಗಾರಿಕೆ ಮತ್ತು ವ್ಯಾಪಾರ

ಕೊನೆಯ ಅಧಿವೇಶನದಲ್ಲಿ ಕೈಗಾರಿಕಾ ಉದ್ಯಮಿಗಳು, ವ್ಯಾಪಾರ ಸಂಘಗಳು (ಟ್ರೇಡ್ ಯೂನಿಯನ್ಸ್) ಮತ್ತು ಶೈಕ್ಷಣಿಕ ತಜ್ಞರು ಭಾಗವಹಿಸಿದ್ದರು. ಈ ಅಧಿವೇಶನದಲ್ಲಿ ಎರಡು ಪ್ರಶ್ನೆಗಳನ್ನು ಎತ್ತಲಾಯಿತು. 1. ಹನ್ನೆರಡನೇ ಯೋಜನೆಯ ಯಶಸ್ಸಿಗೆ ಮಾನದಂಡಗಳೇನು? 2. ಈ ಯೋಜನೆಯಿಂದ ಏನನ್ನು ನಿರೀಕ್ಷಿಸಬಹುದು?

ಇದಲ್ಲದೆ ಭಾರತದ ಉತ್ಪಾದನಾ ಉದ್ಯಮದಲ್ಲಿ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ತೊಂದರೆಗಳಾವವು ಎಂಬ ಬಗ್ಗೆಯೂ ಚರ್ಚಿಸಲಾಯಿತು. ಅವು ಮುಖ್ಯವಾಗಿ ಸಾರಿಗೆ





ಮೂಲ ಸೌಕರ್ಯ, ಇಂಧನ, ಸರ್ಕಾರದ ಅನುಮತಿಗಳು, ನಿಯಮಗಳು, ತಪಾಸಣೆ, ಕೌಶಲ್ಯವುಳ್ಳ ಕೆಲಸಗಾರರು, ತಂತ್ರಜ್ಞಾನ, ಕಾರ್ಮಿಕ ನಿಯಮಗಳು, ಕಡಿಮೆ ವೆಚ್ಚದ ಆಮದು, ಭೂಮಿ ಮತ್ತು ಇತರೆ ಸಂಗತಿಗಳು. ಈ ತೊಂದರೆಗಳನ್ನು ಹೇಗೆ ನಿವಾರಿಸಬೇಕೆಂಬ ಯೋಜನಾ ಆಯೋಗದ ಪ್ರಶ್ನೆಗೆ ಸುದೀರ್ಘ ಚರ್ಚೆಯನ್ನು ಕೈಗೊಳ್ಳಲಾಯಿತು. ಮುಂದಿನ ಪರಿಹಾರಗಳನ್ನು ಸೂಚಿಸಲಾಯಿತು. ತೆರಿಗೆ ಹಾಗೂ ಹಣಕಾಸಿನ ಉತ್ತೇಜನಗಳು, ಸರ್ಕಾರಗಳು, ಉದ್ಯಮಿಗಳು, ಭಾಗೀದಾರರ ಮಧ್ಯೆ ಸಮಸ್ಯೆ ಪರಿಹಾರ (ಭೂಮಿ, ಕಾರ್ಮಿಕರು, ಇತ್ಯಾದಿ) ಸಹಯೋಗ ವೇದಿಕೆಗಳು, ಕಾರ್ಮಿಕ ನಿಯಮಗಳಲ್ಲಿ ಬದಲಾವಣೆ, ಉತ್ತಮ ಸಮನ್ವಯ ಮತ್ತು ಅನುಷ್ಠಾನ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾತ್ರ.

## ಉಪ ಸಂಹಾರ

ಯೋಜನಾ ಆಯೋಗವು ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಪಥದ ತಯಾರಿಕೆಯನ್ನು ಈಗಾಗಲೇ ಪ್ರಾರಂಭಿಸಿದೆ ಮತ್ತು ಈ ವಿಷಯದಲ್ಲಿ ಹೊಸ ಹಾಗೂ ಸಮಾಲೋಚನಾತ್ಮಕ ಪ್ರಕ್ರಿಯೆಯನ್ನು ಕೈಗೊಳ್ಳುತ್ತಿದೆ. ಮಹಿಳೆಯರು ದಲಿತರು ಮತ್ತು ಯುವಕರ ವಿವಿಧ ನಾಗರೀಕ ವರ್ಗಗಳ ಸಂಘ ಸಂಸ್ಥೆಗಳೊಂದಿಗೆ ಸಮಾಲೋಚಿಸುವುದೇ ಅಲ್ಲದೆ ಯೋಜನಾ ಆಯೋಗವು ಪ್ರಪ್ರಥಮವಾಗಿ ಆಯೋಗದ ವೆಬ್‌ಸೈಟಿನ ಮೂಲಕವು ಆಸಕ್ತ ಭಾಗೀದಾರ ಸಮಾಲೋಚನೆಯನ್ನು ಹಮ್ಮಿಕೊಂಡಿದೆ.

ಆಯೋಗವು 'ಹನ್ನೆರಡು ಕಾರ್ಯತಾಂತ್ರಿಕ ಸವಾಲುಗಳು' ಎಂಬ ಶೀರ್ಷಿಕೆಯಡಿ ಸಮಾಲೋಚನೆಯನ್ನು ಪ್ರಾರಂಭಿಸಿದೆ. ಈ ಕಾರ್ಯತಾಂತ್ರಿಕ ಸವಾಲುಗಳಡಿ ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ಉತ್ತಮ ಫಲಿತಾಂಶಗಳನ್ನು ಹೊರತರುವಲ್ಲಿ ಅಳವಡಿಸಬೇಕಾದ ಮಾರ್ಗೋಪಾಯಗಳ ಕುರಿತು ಸಮಾಲೋಚನೆಯನ್ನು ಕೈಗೊಳ್ಳಲಾಗುತ್ತಿದೆ. ಈ ಸವಾಲುಗಳು ಸಂಕೀರ್ಣವಾಗಿವೆ ಮತ್ತು ಒಂದರ ಮೇಲೊಂದು ಹಾಸುಹೊಕ್ಕಾದಂತಿವೆ. ಅಲ್ಲದೆ ಅವುಗಳನ್ನು ವಿವಿಧ ಮಾರ್ಗಗಳಲ್ಲಿ ವ್ಯಾಖ್ಯಾನಿಸಬಹುದು. ಆಯೋಗದ ಸಮಾಲೋಚನೆಯ ಉದ್ದೇಶವು ಪ್ರತಿಯೊಂದು ವಿಷಯದಲ್ಲಿ ಮಹತ್ವದ ಅಂಶಗಳನ್ನು ಪಡೆಯುವುದಾಗಿದೆ. ಭಾಗೀದಾರರು ಈ ಸವಾಲುಗಳ ವಿವಿಧ ಮಗ್ಗುಲುಗಳನ್ನು ವಿವರಿಸಿ ಪರಿಹಾರ ನೀಡಬಹುದು. ಅಲ್ಲದೆ ಯೋಜನಾ ಆಯೋಗದ ಸವಾಲು ಗಳಲ್ಲದೆ ಇನ್ನೂ ಪರಿಹರಿಸಬೇಕಾದ ಬೇರೆ ಸವಾಲುಗಳನ್ನು ಗುರುತಿಸಬಹುದು.

ಉದಾಹರಣೆಗಳನ್ನು ನೀಡುವುದಾದರೆ ಜಲ ಸಂಪನ್ಮೂಲಗಳ ನಿರ್ವಹಣೆ ಅತೀ ಸೂಕ್ಷ್ಮ ಕ್ಷೇತ್ರ ಮತ್ತು ಇದನ್ನು 'ಪರಿಸರ ನಿರ್ವಹಣೆ' ಕಾರ್ಯತಂತ್ರಗಳ ಸವಾಲಿನಲ್ಲಿ ಸೇರಿಸಲಾಗಿದೆ. ಗ್ರಾಮೀಣ ರೂಪಾಂತರ ಮತ್ತು ಕೃಷಿ ಬೆಳವಣಿಗೆಯ ಸ್ಥಿರತೆಯಂತಹ ಸವಾಲುಗಳಲ್ಲಿ ಅನೇಕ ವಿಷಯಗಳು ಸಮ್ಮಿಳಿತವಾಗಿವೆ. ಅದರಂತೆ 'ಸಾಮಾಜಿಕ ನ್ಯಾಯ' ಅತ್ಯಂತ ಸೂಕ್ಷ್ಮ ಸವಾಲಾಗಿದ್ದು, ಅದನ್ನು ಉಳಿದ ಸವಾಲುಗಳಂತೆ ಪರಿಹಾರವನ್ನು ನೀಡಲು ಉದ್ದೇಶಿಸಲಾಗಿದೆ. ಆದಾಗ್ಯೂ ಯೋಜನಾ ಆಯೋಗವು ಯಾವುದೇ ಸವಾಲು ಹನ್ನೆರಡನೆ ಯೋಜನೆಯ ಪಥದಲ್ಲಿ ಬಿಟ್ಟು ಹೋಗದ ಹಾಗೆ ಅಳವಡಿಸಲು ಕ್ರಮ ಕೈಕೊಂಡಿದೆ.

ಯೋಜನಾ ಆಯೋಗವು ಸಮಾಲೋಚನಾ ಸಮಾವೇಶ ವನ್ನು ಕರ್ನಾಟಕ ರಾಜ್ಯವು ಏರ್ಪಡಿಸಿ ವಿವಿಧ ಸಂಘಟನೆ ಗಳೊಂದಿಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿರು ವುದಕ್ಕೆ ತನ್ನ ತೃಪ್ತಿಯನ್ನು ವ್ಯಕ್ತಪಡಿಸಿದೆ. ಈ ಚರ್ಚೆಯಿಂದ ಹೊರಹೊಮ್ಮಿದ ವಿಷಯಗಳು ಯೋಜನಾ ಪಥದಲ್ಲಿ ಸೇರಲಿವೆ. ಅಲ್ಲದೆ ಈ ಅಂಶಗಳು ಹನ್ನೆರಡನೆಯ ಯೋಜನೆಯಲ್ಲಿ ಅಳವಡಿಸಲ್ಪಟ್ಟು ವೇಗದ, ಹೆಚ್ಚು ಒಳಗೊಳ್ಳುವ ಮತ್ತು ಪರಿಸರ ಸ್ನೇಹಿ ಸುಸ್ಥಿರ ಬೆಳವಣಿಗೆಗೆ ದಾರಿ ಮಾಡಿಕೊಡಲಿವೆ.

❑

ಚಿಂತನೆ



ಪ್ರೊ. ಎ.ಎಚ್. ಮಾಸಾಪತಿ *
ಮೊಬೈಲ್ : 93435 35229

# ಗ್ರಾಮೀಣ ರಸ್ತೆಗಳು ಮತ್ತು ಅಭಿವೃದ್ಧಿ

ಪ್ರಾಥಮಿಕ ಸೌಕರ್ಯಗಳು ಸಾರ್ವಜನಿಕ ಜೀವನದ ಮಟ್ಟವನ್ನು ಪ್ರತಿಬಿಂಬಿಸುತ್ತವೆ. ಕಳೆದು 60 ವರ್ಷಗಳ ಅವಧಿಯಲ್ಲಿ, ಇಂತಹ ಸೌಕರ್ಯಗಳನ್ನು ಸಾರ್ವಜನಿಕರಿಗೆ ನೀಡಲು ವಿವಿಧ ಪಕ್ಷಗಳ ಸರ್ಕಾರಗಳು ಕ್ರಮಗಳನ್ನು ಕೈಕೊಂಡಿದ್ದರೂ ಸಹ, ನಿರೀಕ್ಷಿತವಾದ ಫಲಿತಾಂಶ ದೊರೆತಿಲ್ಲ. ಲಕ್ಷಾಂತರ ಕಿ.ಮೀ. ಗ್ರಾಮೀಣ ರಸ್ತೆಗಳು ದುರ್ಗತಿಯ ಶಾಪದಿಂದ ವಿಮೋಚನೆಗೊಳಿಸಲು ಸಾಧ್ಯವಾಗಿಲ್ಲ. ರಾಷ್ಟ್ರದ ವಿಕಾಸಪಥ ಮತ್ತು ಅಭಿವೃದ್ಧಿಯ ವೇಗವನ್ನು ಗುರುತಿಸಲು ಮೂಲಭೂತ ಸೌಕರ್ಯಗಳು (ರಸ್ತೆ, ರೈಲು, ವಾಯು ಹಾಗೂ ಜಲ ಸಾರಿಗೆ) ಎಷ್ಟರಮಟ್ಟಿಗೆ ಬೆಳವಣಿಗೆ ಹೊಂದಿವೆ ಎಂಬುದನ್ನು ಪರಿಶೀಲಿಸಬೇಕು. ಮೂಲಭೂತ ಸೌಕರ್ಯಗಳು ಭಾರತದ ಸಾಮಾಜಿಕ/ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತವೆ. ವಾರ್ಷಿಕ ಶೇಕಡಾ 8 ರಿಂದ 9ರಷ್ಟು ಬೆಳವಣಿಗೆಯ ದರ ರಕ್ಷಣೆ ಮತ್ತು ಮುನ್ನಡೆಗಾಗಿ, ಜನತೆಯ ಜೀವನಮಟ್ಟದ ಸುಧಾರಣೆ ಹಾಗೂ ಜಾಗತಿಕ ಗುಣಮಟ್ಟದ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ರಸ್ತೆ ಸಾರಿಗೆ/ಸಂಚಾರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು.

ಮೂಲಭೂತ ಸೌಕರ್ಯಗಳ ಬಗೆಗಿನ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸಲು ಸುಲಭವಾದ ಮಾರ್ಗೋಪಾಯ ಶೋಧನೆಯು ಕಠಿಣವಾದ ಕಾರ್ಯವಾಗಿದೆ. ಭವಿಷ್ಯತ್ತಿನ ವರ್ಷಗಳಲ್ಲಿ ಆರ್ಥಿಕ ಪ್ರಗತಿಗಾಗಿ ರಸ್ತೆಗಳ ವ್ಯಾಪಕ ಸ್ವರೂಪದ ಅಭಿವೃದ್ಧಿಯೆಡೆಗೆ ಲಕ್ಷ್ಯವನ್ನು ಕೇಂದ್ರೀಕರಿಸಬೇಕು.

ರಸ್ತೆಗಳ ನಿರ್ಮಾಣ ಮತ್ತು ಅಭಿವೃದ್ಧಿಯ ನಡುವೆ ನೇರವಾದ ಸಂಬಂಧವಿದೆ. ಅತ್ಯುತ್ತಮವಾದ ರಸ್ತೆ ಸಂಪರ್ಕ ಹೊಂದಿರುವ ಪ್ರದೇಶಗಳ ಸಾಮಾಜಿಕ/ಆರ್ಥಿಕ ಸೂಚ್ಯಂಕಗಳು ಉನ್ನತಮಟ್ಟ ಸಾಧಿಸಿವೆ.



* ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ, ಸುಲ್ತಾನ್‌ಪಾಳ್ಯ, ಬೆಂಗಳೂರು-560 032.



ವಿಕಾಸ ಪಥದಲ್ಲಿ ಉನ್ನತ ಸ್ಥಾನ ಸಂಪಾದನೆ ಗಾಗಿ ಅಗತ್ಯವಾದ ಪರಿಸರ ನಿರ್ಮಿಸಲು ರೂಪಿಸಿದಂತಹ ಧೋರಣೆಯನ್ನು ಕಾರ್ಯಾಚರಣೆಗೆ ತರಬೇಕು. ಗ್ರಾಮೀಣಾಭಿವೃದ್ಧಿ ಲಘು ಕೈಗಾರಿಕೆಗಳು ಮತ್ತು ಬೇಸಾಯ ಕ್ಷೇತ್ರದ ಮೂಲ ಸೌಕರ್ಯಗಳ ಬಗೆಗಿನ ಅಡ್ಡಿ-ಆತಂಕಗಳ ನಿವಾರಣೆಗಾಗಿ ಹೆಚ್ಚಿನ ಆದ್ಯತೆ ನೀಡಲು ಭಾರತದ ಪ್ರಧಾನಮಂತ್ರಿ ಗಮನ ಸೆಳೆದಿದ್ದಾರೆ.

ಗ್ರಾಮೀಣ ರಸ್ತೆಗಳ ಸ್ಥಿತಿ ಗತಿಗಳನ್ನು ಕುರಿತು ವ್ಯವಸ್ಥಿತವಾದ ನಿಷ್ಪಕ್ಷಪಾತ ಸಮೀಕ್ಷೆಗಳನ್ನು ಕೈಕೊಳ್ಳುವ ಅಗತ್ಯವಿದೆ. ಗ್ರಾಮಾಂತರ ರಸ್ತೆಗಳ ಅಭಿವೃದ್ಧಿ, ಹೊಸ ರಸ್ತೆಗಳ ನಿರ್ಮಾಣ ಹಾಗೂ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರ 2002-03ನೇ ವರ್ಷದ ಲೋಕೋಪ ಯೋಗಿ ಇಲಾಖೆಯ ವಾರ್ಷಿಕ ವರದಿಯಲ್ಲಿ ವಿವರಿಸಿದ ಪ್ರಕಾರ ರಾಜ್ಯ ಹೆದ್ದಾರಿ (9829 ಕಿ.ಮೀ.) ಅಭಿವೃದ್ಧಿಗಾಗಿ ಹಣಕಾಸಿನ ಕೊರತೆ ಇರುವುದರಿಂದ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಯನ್ನು ವಿಶ್ವಬ್ಯಾಂಕಿನ ಆರ್ಥಿಕ ನೆರವಿನಿಂದ ಕೈಗೊಳ್ಳಲು ಯೋಚಿಸಲಾಗಿತ್ತು. ಆದರೆ ರಸ್ತೆಗಳ ಅಭಿವೃದ್ಧಿಯು ಕೇವಲ ನಗರ/ ಮಹಾನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಬಾರದು. ರಾಜ್ಯದ ಲಕ್ಷಾಂತರ ಗ್ರಾಮೀಣ ರಸ್ತೆಗಳ ದುರ್ಗತಿಯನ್ನು ಕುರಿತು ಗಂಭೀರ ವಾಗಿ ಚಿಂತನೆ ಮಾಡಬೇಕು. ರಸ್ತೆ ಸಾರಿಗೆ/ಸಂಚಾರ ವ್ಯವಸ್ಥೆಯ ಅಭಿವೃದ್ಧಿಯು ಸಾಮಾಜಿಕ ನ್ಯಾಯದೊಂದಿಗೆ ಆಗಬೇಕು.

## ಗ್ರಾಮೀಣ ರಸ್ತೆ ಸಂಚಾರ ವ್ಯವಸ್ಥೆ

ಭಾರತದಲ್ಲಿ ಗ್ರಾಮೀಣ ರಸ್ತೆಗಳು ಹದಗೆಟ್ಟಿವೆ. ಗ್ರಾಮೀಣ ರಸ್ತೆಗಳ ದುಸ್ಥಿತಿಯ ವರ್ಣನೆಯು ಕಷ್ಟಸಾಧ್ಯವಾಗಿದೆ. ಭಾರತದ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಸುಲಭ ಮತ್ತು ತ್ವರಿತವಾಗಿ ಪ್ರವೇಶಿಸಲು ಸೂಕ್ತವಾದ ರಸ್ತೆಗಳ ಕೊರತೆ ಇದೆ. ಪಂಚವಾರ್ಷಿಕ ಯೋಜನೆಯ ಆರಂಭದಿಂದ ಇತ್ತೀಚಿನವರೆಗೆ ರಸ್ತೆ ಸಾರಿಗೆಯ ಕಾರ್ಯಕ್ರಮಗಳಿಗಾಗಿ ಹಲವಾರು ಸಾವಿರ ಕೋಟಿ ರೂ.ಗಳನ್ನು ಖರ್ಚುಮಾಡಲಾಗಿದೆ. ವಿವಿಧ ಪಂಚವಾರ್ಷಿಕ ಯೋಜನೆಗಳ ದಸ್ತಾವೇಜುಗಳಲ್ಲಿ ದಾಖಲೆ ಹೊಂದಿದ ಅನೇಕ ಕೋಷ್ಟಕಗಳ ಮೂಲಕ 1951 ರಿಂದ 2010ರ ವರೆಗೆ ರಸ್ತೆಗಳ ನಿರ್ಮಾಣಕ್ಕಾಗಿ ಮಾಡಿದ ವೆಚ್ಚ ಮತ್ತು ಗ್ರಾಮೀಣ ರಸ್ತೆಗಳ ಸ್ಥಿತಿ/ಗತಿಯನ್ನು ವಿವರಿಸಲಾಗಿದೆ. ರಸ್ತೆ ನಿರ್ಮಾಣದ ವೆಚ್ಚವು 1ನೇ ಪಂಚವಾರ್ಷಿಕ ಯೋಜನೆಯಲ್ಲಿ 135 ಕೋಟಿ ರೂ.ಗಳಿಂದ ಆರಂಭವಾಗಿ 8ನೇ ಯೋಜನೆಯ ಅವಧಿಯಲ್ಲಿ 13210.04 ಕೋಟಿ ರೂ.ಗಳನ್ನು ತಲುಪಿದೆ. ಅದು 9 ಮತ್ತು 10ನೇ ಯೋಜನೆಗಳಲ್ಲಿ ಲಕ್ಷಾಂತರ ಕೋಟಿ ರೂ.ಗಳಿಗೆ ಏರಿದೆ. ಸುಮಾರು ಆರು ದಶಕಗಳಲ್ಲಿ ಬೃಹದ್ ಪ್ರಮಾಣದ ಸಂಪನ್ಮೂಲಗಳ ಹೂಡಿಕೆ ಮಾಡಿ, ಶ್ರೇಷ್ಠ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಲು ಸಾಧ್ಯವಾಗಿಲ್ಲ. ಆದರೆ ಅಪಾರ ಪ್ರಮಾಣದ ಹಣಕಾಸು ಎಲ್ಲಿಗೆ ಯಾರಿಗೆ ಹಸ್ತಾಂತರವಾಗಿದೆ ಎಂಬುದು ಸ್ಪಷ್ಟವಾಗಬೇಕು. ಭಾರತದ ಮಹಾಲೆಕ್ಕ ಪರಿಶೋಧಕರು ಇಂತಹ ಮಹತ್ವದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬೇಕು.

ರಸ್ತೆಗಳ ನಿರ್ಮಾಣ ಮತ್ತು ಅಭಿವೃದ್ಧಿಯ ನಡುವೆ ನೇರವಾದ ಸಂಬಂಧವಿದೆ. ಈ ವಿಷಯದಲ್ಲಿ ಕೈಕೊಂಡಿರುವ ಹಲವಾರು ಅಧ್ಯಯನಗಳು ಸತ್ಯಾಂಶವನ್ನು ದೃಢಪಡಿಸಿವೆ. ಅತ್ಯುತ್ತಮವಾದ ರಸ್ತೆ ಸಂಪರ್ಕ ಹೊಂದಿರುವ ಪ್ರದೇಶಗಳ ಸಾಮಾಜಿಕ/ಆರ್ಥಿಕ ಸೂಚ್ಯಂಕಗಳು ಉನ್ನತಮಟ್ಟ ಸಾಧಿಸಿವೆ. ಗ್ರಾಮಗಳೊಂದಿಗೆ ಮಾರುಕಟ್ಟೆ/ಸರಬರಾಜು ಮಳಿಗೆಗಳನ್ನು ಸಂಪರ್ಕಿಸುವಂತಹ ರಸ್ತೆ ಜಾಲಗಳನ್ನು ಹೊಂದಿರುವ ಪ್ರದೇಶಗಳಲ್ಲಿ, 'ಹಸಿರು ಕ್ರಾಂತಿ'ಯು ತ್ವರಿತವಾಗಿ ಸಂಭವಿಸಿದೆ. ಹಸಿರುಕ್ರಾಂತಿಯ ನಂತರ, 1970 ರಿಂದ 1995ರ ಅವಧಿಯಲ್ಲಿ ಪಂಜಾಬ್ ರಾಜ್ಯದ ರಸ್ತೆ ಜಾಲದಲ್ಲಿ ಶೇಕಡಾ 180 ಕ್ಕಿಂತಲೂ ಹೆಚ್ಚಿನ ಪ್ರಮಾಣದ ಬೆಳವಣಿಗೆಯನ್ನು ಸಾಧಿಸ ಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಂಚಾರಯೋಗ್ಯ ರಸ್ತೆಗಳು ಅದೇ ಅವಧಿಯಲ್ಲಿ ಸುಮಾರು 16000 ಕಿ.ಮೀ. ನಿಂದ 30,000 ಕಿ.ಮೀ. ನಷ್ಟು ಅಭಿವೃದ್ಧಿ ಸಾಧಿಸಿವೆ.

ಗ್ರಾಮೀಣ ರಸ್ತೆ ನಿರ್ಮಾಣದಿಂದ ಆರ್ಥಿಕಾಭಿವೃದ್ಧಿ ಸಾಧ್ಯವೆಂಬ ಸತ್ಯಾಂಶವನ್ನು ಶೋಧಿಸಲಾಗಿದೆ. ರಸ್ತೆ ಸಂಪರ್ಕ ಜಾಲದ ಸೌಲಭ್ಯ ಮತ್ತು ಆರ್ಥಿಕ ಪ್ರಗತಿಯ ನಡುವಿನ ಸಂಬಂಧವನ್ನು ಗ್ರಾಮಾಂತರ ಪ್ರದೇಶದಲ್ಲಿ ನಡೆಸಿದ ಸಮೀಕ್ಷೆಯು ದೃಢಪಡಿಸಿದೆ. ಕೃಷಿ/ ಕೃಷಿಯೇತರ ಉತ್ಪಾದನೆ (ವಿವಿಧ ಪ್ರಕಾರದ ಹಣ್ಣು, ತರಕಾರಿ) ಮತ್ತು ಹೈನುಗಾರಿಕೆಯ ಅಭಿವೃದ್ಧಿಯಲ್ಲಿ ಸಂಪರ್ಕ ರಸ್ತೆಗಳು

ಮಹತ್ವದ ಪಾತ್ರ ನಿರ್ವಹಿಸುತ್ತವೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಸಂಪರ್ಕ ರಸ್ತೆಗಳ ನಿರ್ಮಾಣದಿಂದ ದ್ವಿಚಕ್ರ/ತ್ರಿಚಕ್ರ ವಾಹನ, ಕುದುರೆಗಾಡಿ, ಬಸ್ಸು, ಖಾಸಗಿ ಟ್ರಕ್, ಟ್ರ್ಯಾಕ್ಟರ್, ಟೆಂಪೊ, ಟ್ಯಾಕ್ಸಿ ಮತ್ತು ಎತ್ತಿನ ಗಾಡಿಗಳ ಮೂಲಕ ಸಂಚಾರ/ಸಂಪರ್ಕ ಹಾಗೂ ಗ್ರಾಮೀಣ ಜನರ ಓಡಾಟ ಹೆಚ್ಚುವುದು. ಗ್ರಾಮೀಣ ಹಾಲು ಮಾರಾಟಗಾರರು ನಗರ ಪ್ರದೇಶದ ಸಹಕಾರಿ ಹಾಲು ಸಂಗ್ರಹಣಾ ಕೇಂದ್ರಗಳೊಂದಿಗೆ ಸುಲಭವಾಗಿ ಸಂಪರ್ಕ ಸಾಧಿಸಲು ಸಾಧ್ಯವಾಗುವುದು. ಸಾರಿಗೆ/ಸಂಚಾರ ಹಾಗೂ ರಸ್ತೆ ನಿರ್ಮಾಣ ಕ್ಷೇತ್ರದಲ್ಲಿ ಭೂರಹಿತ ಕೂಲಿಕಾರರು, ಬಡ ಕುಟುಂಬಗಳ ಸದಸ್ಯರು ಮತ್ತು ದಿನಗೂಲಿಗಳು ಉದ್ಯೋಗಾವಕಾಶ ಪಡೆಯುವರು. ರಸ್ತೆ ಸಾರಿಗೆ ಕ್ಷೇತ್ರಕ್ಕೆ ಪೂರಕವಾದ ಸಹಾಯಕ ಸಂಸ್ಥೆಗಳು ಸ್ಥಾಪನೆಗೊಂಡು ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಕೃಷಿ ಸಂಸ್ಕರಣಾ ಘಟಕಗಳಿಗೆ ಅಗತ್ಯವಾದ ಕಚ್ಚಾಪದಾರ್ಥಗಳನ್ನು ಪೂರೈಸುವ ಗ್ರಾಮಗಳೊಂದಿಗೆ ರಸ್ತೆ ಸಂಪರ್ಕ ಏರ್ಪಡುವುದರಿಂದ ಸಂಸ್ಕರಣಾ ಘಟಕಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಿದೆ.

ರಾಷ್ಟ್ರದ ಸಾಮಾಜಿಕ/ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮೀಣ ಸಂಪರ್ಕದ ಪ್ರಾಮುಖ್ಯತೆಯನ್ನು ಪರಿಗಣಿಸಿ 'ರಾಷ್ಟ್ರೀಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಮಿತಿ'ಯು (NRRDC) 2000ನೇ ಇಸವಿ ಮೇ ತಿಂಗಳಿನಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. ರಾಷ್ಟ್ರದ ಎಲ್ಲ ಗ್ರಾಮಗಳನ್ನು ರಸ್ತೆ ಸಂಪರ್ಕದ ಮೂಲಕ ಜೋಡಿಸುವಂತಹ ಕಾರ್ಯವು ಮಹಾನ್ ಉದ್ದೇಶಪೇರಿತವಾಗಿದೆ ಎಂದು ವಿವರಿಸಲಾಗಿದೆ. ದೀರ್ಘಕಾಲ ಬಾಳಿಕೆ ಬರುವ, ಹಲವಾರು ವರ್ಷಗಳವರೆಗೆ ಯಾವುದೇ ನಿರ್ವಹಣೆಯನ್ನು ಅಪೇಕ್ಷಿಸಲಾರದ ಕಾಲಮಿತಿಯ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ನಿರ್ಮಿಸಬೇಕೆಂದು ಪ್ರಸ್ತಾಪಿಸಲಾಗಿದೆ. ಈ ವರದಿಯ ಆರಂಭಿಕ ಪಂಕ್ತಿಗಳು ಗಮನಾರ್ಹವಾಗಿವೆ. ದೇಶದ ಪ್ರತಿಯೊಂದು ಗ್ರಾಮವನ್ನು ಅಡ್ಡಿ-ಆತಂಕ ಮತ್ತು ಸೌಲಭ್ಯ ವಂಚನೆಯಿಂದ ಮುಕ್ತಗೊಳಿಸಲು ಎಲ್ಲ ಗ್ರಾಮೀಣ ಜನತೆಗೆ ಶಿಕ್ಷಣ, ಆರೋಗ್ಯ ಸೇವೆ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲು, ಆದ್ಯತೆಯ ಮೇರೆಗೆ, ಉತ್ತಮ ಹಾಗೂ ಸರ್ವಋತು ರಸ್ತೆಗಳನ್ನು ಪ್ರತಿಯೊಂದು ಗ್ರಾಮಕ್ಕೂ ಸಹ ಸರ್ಕಾರವು ಒದಗಿಸುವ ಪ್ರಯತ್ನ ಮಾಡಬೇಕು.

## ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆ (NHDP)

1998ರ ಅಕ್ಟೋಬರ್‌ನಲ್ಲಿ ರಾಷ್ಟ್ರಾದ್ಯಂತ ಹೆದ್ದಾರಿ ನಿರ್ಮಾಣಕ್ಕಾಗಿ 54000 ಕೋಟಿ ರೂ.ಗಳ ಬೃಹದ್ ಯೋಜನೆಯನ್ನು ಘೋಷಿಸಲಾಗಿದೆ. ಸ್ವತಂತ್ರ ಭಾರತದಲ್ಲಿ ಪ್ರಥಮ ಸಲ ಕೈಕೊಳ್ಳಲಾದ ಇಂತಹ ವಿಶಾಲ ಸ್ವರೂಪದ ಯೋಜನೆಯಿಂದ ರಾಷ್ಟ್ರೀಯ ಹೆದ್ದಾರಿಗಳ ಪರಿಮಾಣಾತ್ಮಕ ಮತ್ತು ಗಣಾತ್ಮಕ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. 1998-99ರ ಬೆಲೆಗಳಿಗೆ ಅನುಸಾರವಾಗಿ ಅದು (54,000 ಕೋಟಿ ರೂ.ಗಳ ಸುಮಾರು 13,150 ಕಿ.ಮೀ. ದೂರದ 4/6 ಪಥಗಳನ್ನು ಹೊಂದಿರುವಂತಹ) ಬೃಹದ್ ಹೆದ್ದಾರಿ ಯೋಜನೆಯಾಗಿದೆ. ಜಾಗತಿಕ ಗುಣಮಟ್ಟದ ಹೆದ್ದಾರಿಯಿಂದ ರಾಷ್ಟ್ರೀಯ ಐಕ್ಯತೆಯ ವಿಕಾಸದೊಂದಿಗೆ, ರಾಷ್ಟ್ರದ ಸಾಮಾಜಿಕ/ಆರ್ಥಿಕಾಭಿವೃದ್ಧಿಯ ವೇಗ ಹೆಚ್ಚುವುದು.

ಅದು ರಾಷ್ಟ್ರದ ನಾಲ್ಕು ಮಹಾನಗರಳನ್ನು (ದೆಹಲಿ, ಕೊಲ್ಕತ್ತಾ, ಚೆನ್ನೈ ಹಾಗೂ ಮುಂಬೈ) ಸಂಪರ್ಕಿಸುವಂತಹ ಸುವರ್ಣ ಚತುಷ್ಕೋನವಾಗಿದೆ. ಅದರಲ್ಲಿ 4 ಅಥವಾ 6 ಸಂಖ್ಯೆಯ ವೇಗದ ಮಾರ್ಗಗಳಿರುತ್ತವೆ. ಯೋಜನೆಯ ದ್ವಿತೀಯ ಹಂತದಲ್ಲಿ, ಕನ್ಯಾಕುಮಾರಿ-ಶ್ರೀನಗರ ಮತ್ತು ಸಿಲ್ಚಾರ್-ಪೋರ್‌ಬಂದರ್ ನಗರಗಳಿಗೆ 4 ಅಥವಾ 6 ಸಂಖ್ಯೆಯ ವೇಗ ಮಾರ್ಗಗಳ ಮೂಲಕ ಭೂ-ಸಂಪರ್ಕ ಕಲ್ಪಿಸುತ್ತದೆ. ಈ ಯೋಜನೆಯ ಜೊತೆಗೆ 1000 ಕಿ.ಮೀ. ಪ್ರಮಾಣದ 8 ದೊಡ್ಡ ಬಂದರುಗಳನ್ನು ಜೋಡಿಸುವ ಯೋಜನೆ ಸಾಗಿದೆ. ಇಂತಹ ಬೃಹದ್ ಕಾರ್ಯವನ್ನು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಒಪ್ಪಿಸಲಾಗಿದೆ. ಸುವರ್ಣ ಚತುಷ್ಕೋನ ಪಥವನ್ನು 2004ನೇ ಇಸ್ವಿಯೊಳಗಾಗಿ ಪೂರ್ಣಗೊಳಿಸಬೇಕಾಗಿತ್ತು. ಈ ಎಲ್ಲ ಯೋಜನೆಗಳನ್ನು 2009 ರೊಳಗಾಗಿ ಮುಕ್ತಾಯಗೊಳಿಸಲು ಸೂಚಿಸಲಾಗಿದ್ದರೂ ಸಹ ಕಾಲಾವಧಿಯನ್ನು ಪರಿಷ್ಕರಿಸಿ 2007ನೇ ಇಸ್ವಿಯೊಳಗಾಗಿ ಪೂರ್ಣಗೊಳಿಸಲು ತಿಳಿಸಲಾಗಿತ್ತು. ಆದರೆ, ನಿಗದಿತ ಅವಧಿಯಲ್ಲಿ ಈ ಕಾರ್ಯಕ್ರಮ ಪೂರ್ಣವಾಗಿಲ್ಲ. ಆನಂತರದ ಸಮಯದಲ್ಲಿ ಪೂರ್ಣಗೊಳಿಸುವ ಭರವಸೆ ನೀಡಲಾಗಿದೆ. ದಸ್ತಾವೇಜಿನ ಆದರ್ಶ



ಮತ್ತು ಕ್ಷೇತ್ರ ಕಾರ್ಯದ ಕಠೋರವಾದ ವಾಸ್ತವಿಕತೆಯ ನಡುವೆ ಅಪಾರ ಅಂತರವಿದೆ. ಎನ್.ಡಿ.ಎ. ಸರ್ಕಾರ ಪತನವಾದ ನಂತರ ಅದರ ಮಹತ್ವಾಕಾಂಕ್ಷಿ ಹೆದ್ದಾರಿ ಯೋಜನೆಗಳ ಭವ್ಯವಾದ ಕನಸು ಭಗ್ನವಾಗುವಂತೆ ಕಾಣುತ್ತದೆ.

## ಪ್ರಧಾನ ಧ್ಯೇಯಗಳು

1) ಅಂತರರಾಷ್ಟ್ರೀಯ ಗುಣಮಟ್ಟದ ರಸ್ತೆಗಳ ನಿರ್ಮಾಣ
   - ಅ) ಶ್ರೇಷ್ಠಮಟ್ಟದ ಪ್ರಯಾಣ ಯೋಗ್ಯವಾದ ಮೇಲ್ಮೈ
   - ಬ) ಸಮರ್ಪಕವಾದ ರಸ್ತೆ ರಚನೆ
   - ಕ) ಸಮರ್ಥವಾದ ಸಂಚಾರ ನಿರ್ವಹಣೆ
   - ಡ) ಸೂಕ್ತವಾದ ಗುರುತುಪಟ್ಟಿ ಅಗತ್ಯ ಪ್ರಮಾಣದ ಸಂಕೇತಗಳು ಮತ್ತು ಸುರಕ್ಷತಾ ಸೌಕರ್ಯಗಳು.
2) ಪ್ರತ್ಯೇಕವಾದ ಕಿರುದಾರಿಗಳು
3) ಮೇಲ್ಸೇತುವೆ, ಕೆಳಮಾರ್ಗ ಹಾಗೂ ರಸ್ತೆ ವಿಭಜಕಗಳು
4) ಪಕ್ಕದ ದಾರಿಗಳು/ಬೈಪಾಸ್ ಮಾರ್ಗಗಳು
5) ಮಾರ್ಗ ಪಕ್ಕದ ಸೌಲಭ್ಯ ಮತ್ತು ಸೇವೆಗಳು

(ಉದಾ : ರೋಗಿಗಳು/ಗಾಯಾಳುಗಳ ಸಂಚಾರಿ ವಾಹನ, ಭಾರವಾಹಕ ಯಂತ್ರ, ಇತ್ಯಾದಿ).

## ಪ್ರಯೋಜನಗಳು

1) ಗ್ರಾಮೀಣ ಅರ್ಥವ್ಯವಸ್ಥೆಗೆ ಹೆಚ್ಚಿನ ಪ್ರೋತ್ಸಾಹನೆ
2) ರಸ್ತೆ ನಿರ್ಮಾಣ ಉದ್ದಿಮೆಗೆ ಬೆಂಬಲ
3) ರಸ್ತೆ ನಿರ್ಮಾಣ ಉದ್ದಿಮೆ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ
4) ಉದ್ದಿಮೆ/ಕೈಗಾರಿಕೆಗಳಿಗೆ ಉತ್ತೇಜನ
5) ಖಾಸಗಿ ಬಂಡವಾಳ ಕ್ಷೇತ್ರಕ್ಕೆ ಅವಕಾಶ
6) ಉದ್ಯೋಗ ಸೃಷ್ಟಿ/ಉದ್ಯೋಗಾವಕಾಶ ಹೆಚ್ಚಳ
7) ಗುಣಮಟ್ಟ ಹೆಚ್ಚಳದ ಕಾರ್ಯಕ್ರಮ
8) ರಾಷ್ಟ್ರೀಯ ಉಳಿತಾಯದ ಏರಿಕೆ
9) ಪುನರ್ ರಚಿತ ಕೇಂದ್ರಿಯ ರಸ್ತೆ ನಿಧಿ
10) ರಾಷ್ಟ್ರೀಯ ಹೆದ್ದಾರಿ ನಿಯಂತ್ರಣ ಶಾಸನ, 2003ರ ಪ್ರಗತಿಪರ ಅನುಷ್ಠಾನ
11) ರಸ್ತೆ ಒತ್ತುವರಿ/ಸಂಚಾರ ನಿಯಂತ್ರಣ
12) ರಸ್ತೆ ಅಪಘಾತಗಳ ಇಳಿತಾಯ

1998ರ ಕೇಂದ್ರ ಸರ್ಕಾರ ರಸ್ತೆ ಸಾರಿಗೆಗೆ ಹೆಚ್ಚಿನ ಆದ್ಯತೆ ನೀಡಿದಂತಹ ವಾಸ್ತವಿಕಾಂಶ ಸ್ಪಷ್ಟವಾಗಿದೆ. ದೂರದೃಷ್ಟಿ ಹೊಂದಿದ ಎರಡು ಮಹತ್ವಾಕಾಂಕ್ಷಿ ರಸ್ತೆ ನಿರ್ಮಾಣ ಯೋಜನೆಗಳು [(1) ಸುವರ್ಣ ಚತುಷ್ಪಥ, (2) ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣ ಕಾರಿಡಾರ್], ಅಕ್ಟೋಬರ್ 31, 2003ರವರೆಗೆ ನಿಗದಿಪಡಿಸಿದಂತೆ ನಡೆದಿರುವಂತೆ ಕಾಣುತ್ತದೆ.

ಈ ಬೃಹದ್ ಯೋಜನೆಗಳನ್ನು ಘೋಷಿಸಿದ ಸಂದರ್ಭದಲ್ಲಿ, ಹಲವಾರು ಟೀಕೆ/ಟಿಪ್ಪಣಿಗಳನ್ನು ಮಾಡಲಾಗಿದೆ. ಆದರೆ 1998 ರಿಂದ 2003ರವರೆಗಿನ ಕಾರ್ಯಾನುಭವದಿಂದ ಉಪಯುಕ್ತವಾದ ಪಾಠಗಳನ್ನು ಕಲಿತು ಅತ್ಯುತ್ತಮವಾದ ಹೆದ್ದಾರಿಗಳನ್ನು ನಿರ್ಮಿಸಲು ಪ್ರಾಮಾಣಿಕವಾಗಿ ಶ್ರಮಿಸಬೇಕಾಗಿದೆ.

ಅಭಿವೃದ್ಧಿ ಪ್ರಕ್ರಿಯೆಯು ಗತಿಶೀಲವಾಗಲು ರಸ್ತೆ ಸಂಚಾರ ವ್ಯವಸ್ಥೆಯ ಪಾತ್ರ ವಿಶಿಷ್ಟವಾಗಿದೆ. ಒಳನಾಡಿನಲ್ಲಿ ಸಂಪರ್ಕ ರಸ್ತೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಶ್ರೇಷ್ಠಮಟ್ಟದ ಅತ್ಯಾಧುನಿಕ ರಸ್ತೆಗಳು, ಆರ್ಥಿಕ ಪುರುಷನ ಶಕ್ತಿ–ಸಂಪನ್ನವಾದ ನರ ಮಂಡಲಗಳಾಗಿವೆ. ಪ್ರತಿ ದಿನ ರಾಷ್ಟ್ರಾದ್ಯಂತ ಬೃಹದ್ ಪ್ರಮಾಣದ ಮಾನವ/ಮಾನವೇತರ ಸಂಚಾರ ಮತ್ತು ಸರಕು ಸಾಗಾಣಿಕೆಯು ನಿರಂತರವಾಗಿ ನಡೆಯುವುದರಿಂದ ಸಾಮಾಜಿಕ/ಆರ್ಥಿಕ ಚಟುವಟಿಕೆಗಳು ತ್ವರಿತಗತಿಯಿಂದ ಸಾಗುತ್ತವೆ.

## ರಸ್ತೆ ಸಾರಿಗೆ/ಸಂಚಾರ ಸಮಸ್ಯೆ

ಸಮಗ್ರ ಜಗತ್ತಿನಲ್ಲಿ ಬೃಹದ್ ರಸ್ತೆ ಜಾಲ ಹೊಂದಿರುವ ಅಮೇರಿಕಾದ ನಂತರ ಭಾರತಕ್ಕೆ ದ್ವಿತೀಯ ಸ್ಥಾನವಿದೆ. ಭಾರತವು ಸುಮಾರು 30 ಲಕ್ಷ ಕಿ.ಮೀ.ಗಳಷ್ಟು ಉದ್ದವಾದ ರಸ್ತೆ ಜಾಲವನ್ನು ಹೊಂದಿದೆ.

1) ಪ್ರಥಮ ರಸ್ತೆ ವ್ಯವಸ್ಥೆಯು, ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದೆ. (58, 112 ಕಿ.ಮೀ.)
2) ದ್ವಿತೀಯ ರಸ್ತೆ ವ್ಯವಸ್ಥೆಯು, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆಗಳಿಂದ ಕೂಡಿದೆ. (6,07,119 ಕಿ.ಮೀ.)
3) ತೃತೀಯ ರಸ್ತೆ ವ್ಯವಸ್ಥೆಯು ಗ್ರಾಮೀಣ ರಸ್ತೆಗಳನ್ನು ಹೊಂದಿದೆ. (26,50,000 ಕಿ.ಮೀ.)

### 1. ವಿಳಂಬ ನೀತಿ ಹಾಗೂ ನಿರ್ಲಕ್ಷ್ಯ

ರಾಜ್ಯದ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಗಲೀಕರಣ, ಡಾಂಬರೀಕರಣ ಹಾಗೂ ಉನ್ನತೀಕರಣವಾಗಬೇಕು. ಆದರೆ, ಇಂತಹ ಉಪಯುಕ್ತ ಕಾರ್ಯಗಳು ವಿಳಂಬನೀತಿ ಮತ್ತು ನಿರ್ಲಕ್ಷ್ಯಕ್ಕೆ

ಗುರಿಯಾಗಿವೆ. ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ 141 ಕಿ.ಮೀ. ಉದ್ದವಿದೆ. ಈ ದ್ವಿಪಥ ದೆಸೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಗಲೀಕರಣ ಮಾಡುವ ನಿರ್ಧಾರ ಬೆಂಗಳೂರಿನಿಂದ ಮದ್ದೂರಿನವರೆಗಿನ ಪ್ರಥಮ ಹಂತದ ಯೋಜನೆಯ (ಡಿಸೆಂಬರ್ 2003) ಶಂಕು ಸ್ಥಾಪನೆ, ಬೆಂಗಳೂರು–ಬಾಗೇಪಲ್ಲಿ 100 ಕಿ.ಮೀ. ಉದ್ದದ ರಸ್ತೆಯನ್ನು (ಉತ್ತರ–ದಕ್ಷಿಣ ಕಾರಿಡಾರ್ ಯೋಜನೆಯಲ್ಲಿ) ಆರು ಪಥದ ರಸ್ತೆಯಾಗಿ ಅಭಿವೃದ್ಧಿಪಡಿಸಲು ಸುಮಾರು 500 ಕೋಟಿ ರೂ.ಗಳಷ್ಟು ವೆಚ್ಚ ಮಾಡಿ 2002ನೇ ಇಸ್ವಿಯಲ್ಲಿ ಪೂರ್ಣಗೊಳಿಸುವಂತಹ ಗುರಿಯನ್ನು ಹೊಂದಲಾಗಿತ್ತು. ಬಳ್ಳಾರಿ ಜಿಲ್ಲೆಯ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ 100 ಕೋಟಿ ರೂ.ಗಳ ವಿಶೇಷ ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರು–ಮೈಸೂರು ನಡುವಿನ ರಸ್ತೆ ನಿರ್ಮಾಣದ ಕಾರ್ಯ ಹಲವಾರು ವರ್ಷಗಳಿಂದ ವಿವಾದಗ್ರಸ್ತ ವಾಗಿದ್ದು, ಮಂದಗತಿಯಿಂದ ಸಾಗುತ್ತಿದೆ.

## 2. ಹಣಕಾಸಿನ ಕೊರತೆ ಮತ್ತು ಲಭ್ಯವಾದ ಸಂಪನ್ಮೂಲಗಳ ದುರ್ಬಳಕೆ

1951 ರಿಂದ 1998ರ ಸೆಪ್ಟೆಂಬರ್‌ವರೆಗೆ ರಸ್ತೆ ಕಾಮಗಾರಿಗಳಿಗಾಗಿ ಲಭ್ಯವಾದ ಸಂಪನ್ಮೂಲಗಳು ಅತಿ ವಿರಳವಾಗಿವೆ. ರಸ್ತೆ ನಿರ್ಮಾಣಕ್ಕಾಗಿ ಅಗತ್ಯವಾದ ಸಂಪನ್ಮೂಲಗಳನ್ನು ನಿಗದಿಪಡಿಸದಿರುವುದರಿಂದ, ಇಂತಹ ಕಾರ್ಯಕ್ರಮಗಳು ಹಿನ್ನಡೆ ಹೊಂದಿವೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ರಸ್ತೆ ನಿರ್ಮಾಣಕ್ಕಾಗಿ ಸಾಕಷ್ಟು ಹಣಕಾಸಿನ ಸೌಲಭ್ಯ ನೀಡಿದ್ದರೂ ಸಹ ಅದರ ಸದ್ಬಳಕೆ ಆಗಿರುವುದಿಲ್ಲ.

## 3. ಲೋಕೋಪಯೋಗಿ ಇಲಾಖೆಯ ಕಾರ್ಯವಿಧಾನ (Modus Operandi)

ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದನಂತರ ಲೋಕೋಪಯೋಗಿ ಇಲಾಖೆಯ ಕಾರ್ಯವಿಧಾನದ ನಿಷ್ಪಕ್ಷಪಾತವಾದ ಮೌಲ್ಯಮಾಪನ ಪಕ್ಷಾತೀತ ಮತ್ತು ಪಾರದರ್ಶಕ ವ್ಯಕ್ತಿಗಳಿಂದ ನಡೆದಿಲ್ಲ. ಈ ದಿಶೆಯಲ್ಲಿ ಪ್ರಜ್ಞಾವಂತ ನಾಗರಿಕರು ಗಂಭೀರವಾಗಿ ಚಿಂತನೆ ಮಾಡಬೇಕು. ಅದಲ್ಲದೆ, ಸಾರ್ವಜನಿಕ ದಾಖಲೆಗಳ ಪ್ರಕಾರ ಕರ್ನಾಟಕ ರಾಜ್ಯದ ಕೆಲವು ಮಾಜೀ ಲೋಕೋಪಯೋಗಿ ಸಚಿವರು ಕರ್ನಾಟಕದ ಮುಖ್ಯಮಂತ್ರಿಗಳೂ ಸಹ ಆಗಿ ಕಾರ್ಯನಿರ್ವಹಿಸಿದ್ದಾರೆ. ಇಂತಹ ವ್ಯಕ್ತಿಗಳಿಗೆ ಲೋಕೋಪಯೋಗಿ ಇಲಾಖೆಯ ಕಾರ್ಯವಿಧಾನದ ಅನುಭವವಿದೆ.

ರಾಷ್ಟ್ರದ ವಿವಿಧ ರಾಜ್ಯಗಳ ಲೋಕೋಪಯೋಗಿ ಇಲಾಖೆಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವುದಿಲ್ಲ. ಈ ಇಲಾಖೆಗಳು ಅಧಿಕಾರಶಾಹಿಗಳ ಪಟ್ಟಭದ್ರ ಹಿತಾಸಕ್ತಿಯ ಒತ್ತಡಕ್ಕೆ ಸಿಲುಕಿ ದುರ್ಬಲವಾಗಿವೆ. ಅಧಿಕಾರಿಗಳ ವಿಳಂಬ ನೀತಿ ಮತ್ತು ಅಸಮರ್ಪಕ ರಸ್ತೆ ಕಾಮಗಾರಿ ನಿರ್ವಹಣೆಯಿಂದ ರಸ್ತೆ ನಿರ್ಮಾಣ ಯೋಜನೆಗಳ ವೆಚ್ಚ ಮಿತಿ ಮೀರುತ್ತದೆ.

## 4. ನಾಗರಿಕ ಇಂಜಿನೀಯರರ ಸಾಮಾಜಿಕ ಹೊಣೆಗಾರಿಕೆ

ರಸ್ತೆ ನಿರ್ಮಾಣ ಕಾಮಗಾರಿಗಳಲ್ಲಿ ನಾಗರಿಕ ಇಂಜಿನೀಯರರು ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಲಭ್ಯವಿರುವ ಸಂಪನ್ಮೂಲಗಳನ್ನು ಸಕಾಲದಲ್ಲಿ ಸೂಕ್ತವಾಗಿ ಬಳಸಿದರೆ ರಸ್ತೆ ಕಾಮಗಾರಿಗಳ ಗುಣಮಟ್ಟ ಹೆಚ್ಚುವ ಸಾಧ್ಯತೆ ಇದೆ. ಜಾತಿ/ಧರ್ಮಾಂಧರು ಮತ್ತು ಭ್ರಷ್ಟ ಇಂಜಿನೀಯರರ ಕಾನೂನುಬಾಹಿರ ವ್ಯವಹಾರದಿಂದ ರಸ್ತೆ ಕಾಮಗಾರಿಗಳು ಅಧೋಗತಿ ತಲುಪಿವೆ. ದಿ. ಸರ್. ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರದ ಔಪಚಾರಿಕ ಪೂಜೆ ಮಾಡಿದರೆ ಸಾಲದು. ಅಂತಹ ಆದರ್ಶವ್ಯಕ್ತಿಗಳ ಕೆಲವೊಂದು ಮಾರ್ಗದರ್ಶಕ ತತ್ವಗಳನ್ನು ಅನುಷ್ಠಾನಗೊಳಿಸಬೇಕು.

## 5. ರಾಷ್ಟ್ರೀಯ ಹೆದ್ದಾರಿಗಳ ಸಾಮರ್ಥ್ಯವಿಹೀನತೆ

ಭಾರತದ ಭೂ ಸಾರಿಗೆಯು ಬೃಹದ್ ಪ್ರಮಾಣದ ರಸ್ತೆ ಜಾಲ ಹೊಂದಿದ್ದರೂ ಸಹ ರಾಷ್ಟ್ರೀಯ ಹೆದ್ದಾರಿಗಳ ಗಾತ್ರ ಮತ್ತು ಹೆದ್ದಾರಿಗಳು ಒಟ್ಟು ಭೂ ಸಾರಿಗೆಯ ಶೇಕಡಾ 2ಕ್ಕಿಂತ ಕಡಿಮೆ ಪ್ರಮಾಣದಲ್ಲಿವೆ. ರಾಷ್ಟ್ರೀಯ ಹೆದ್ದಾರಿಗಳ ಉದ್ದ 58 ಸಾವಿರ ಕಿ.ಮೀ. ನಷ್ಟಿದ್ದು ದೇಶದ ಒಟ್ಟು ಸಾರಿಗೆಯ ಶೇಕಡಾ 40ರಷ್ಟು ಬೇಡಿಕೆಯನ್ನು ಪೂರೈಸುತ್ತದೆ. 30 ಲಕ್ಷ ಕಿ.ಮೀ. ದಷ್ಟು ವಿಶಾಲವಾದ ರಸ್ತೆ ಜಾಲ ಹೊಂದಿರುವ ಭಾರತದಲ್ಲಿ ರಸ್ತೆಗಳ ಗುಣಮಟ್ಟ ಯೋಗ್ಯವಾಗಿಲ್ಲ. ಶ್ರೇಷ್ಠ ಮತ್ತು ಗತಿಶೀಲವಾದ ಸಾರಿಗೆ ವ್ಯವಸ್ಥೆಯನ್ನು ರೂಪಿಸಲು ಇಂತಹ ರಸ್ತೆಗಳು ಸೂಕ್ತವಾಗಿಲ್ಲ. ಶೇಕಡಾ 15 ರಷ್ಟು ರಾಷ್ಟ್ರೀಯ ಹೆದ್ದಾರಿಗಳು ಒಂದೇ ಲೇನ್/ಕಿರುದಾರಿ ಹೊಂದಿದ್ದು ಬಹುತೇಕ ಹೆದ್ದಾರಿಗಳು ಎರಡು ಲೇನ್ ಹೊಂದಿದ್ದರೂ ಸಹ ಸಂಚಾರಕ್ಕೆ ಅಡ್ಡಿ/ಆತಂಕ ಉಂಟಾಗುವುದು. ಅದರಿಂದ ಸಾರಿಗೆ/ಸಾಗಾಣಿಕೆಯ ವೆಚ್ಚ ಅಧಿಕವಾಗಿ ಸರಕುಗಳ ಬೆಲೆ ದುಬಾರಿ ಆಗುವುದು.

## 6. ಗ್ರಾಮೀಣ ರಸ್ತೆಗಳ ದುಸ್ಥಿತಿ

ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಸಾಗಾಣಿಕೆಯ ಪದ್ಧತಿಯನ್ನು ಹೆಚ್ಚಾಗಿ ಅನುಸರಿಸಲಾಗುತ್ತದೆ. ಗ್ರಾಮೀಣ ರಸ್ತೆಗಳ ಮೇಲೆ ಎತ್ತಿನ ಗಾಡಿಗಳು ಮತ್ತು ಸರಕು ಹೊರುವ ಪ್ರಾಣಿಗಳನ್ನು ಕಾಣಬಹುದಾಗಿದೆ. ಇಂತಹ ಪುರಾತನ ಸಾರಿಗೆ ವ್ಯವಸ್ಥೆಯಲ್ಲಿ ಹಲವಾರು ಲೋಪದೋಷಗಳಿವೆ.

ಅ) ಗ್ರಾಮೀಣ ಪ್ರದೇಶಗಳಲ್ಲಿ ಸರ್ವಋತು ರಸ್ತೆಗಳು 'ಅಸ್ತಿತ್ವದಲ್ಲಿ ಇರುವುದಿಲ್ಲ.

ಬ) ನಗರದ ಅಥವಾ ವ್ಯಾಪಾರಿ ಕೇಂದ್ರ /ಮಾರುಕಟ್ಟೆಗಳಿಗೆ ರಸ್ತೆ ಸಂಪರ್ಕ ಹೊಂದಿರುವುದಿಲ್ಲ.

ಕ) ಗ್ರಾಮೀಣ ರಸ್ತೆ ನಿರ್ಮಾಣ ಹಾಗೂ ನಿರ್ವಹಣೆಯು ನಿರ್ಲಕ್ಷಿತವಾಗಿದೆ.

ಡ) ಗ್ರಾಮೀಣ ಪ್ರದೇಶದಲ್ಲಿ ಸಾರಿಗೆಯ ವೆಚ್ಚ ಅತಿ ದುಬಾರಿ ಮತ್ತು ಅನಿಯಂತ್ರಿತ

ಇ) ಬಹುಸಂಖ್ಯಾತ ಗ್ರಾಮೀಣ ಬಡ ರೈತರು ಎತ್ತಿನಗಾಡಿ ಹಾಗೂ ಸೈಕಲ್ ಹೊಂದಿದ್ದಾರೆ. ಆದರೆ ಶ್ರೀಮಂತ ರೈತರು ಮತ್ತು ಪ್ರಭಾವಿ ಕುಶಲ ಕರ್ಮಿಗಳು ಮಾತ್ರ ಮೋಟಾರು–ವಾಹನ ಹೊಂದಿದ್ದಾರೆ. ಗ್ರಾಮೀಣ ರಸ್ತೆಗಳ ಮೇಲೆ ಖಾಸಗಿ ವಾಹನಗಳ ಸಂಚಾರ ಹೆಚ್ಚಾಗಿದೆ.

## 7. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ತಿಕ್ಕಾಟ

ಫೆಡರಲ್ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳು ಸುಮಧುರ ಹಾಗೂ ಪ್ರಬುದ್ಧವಿದ್ದರೆ ಮಾತ್ರ ಯಾವುದೇ ಪ್ರಕಾರದ ಅಭಿವೃದ್ಧಿ ಸಾಧ್ಯವಾಗುವುದು. ಸಮಕಾಲೀನ ತಿಕ್ಕಾಟದಿಂದ ಯಾವ ಪ್ರಯೋಜನವೂ ದೊರೆಯಲು ಸಾಧ್ಯವಿಲ್ಲ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣದಲ್ಲಿ ಪರಸ್ಪರ ತಿಳುವಳಿಕೆ/ಸಹಕಾರದ ಅಗತ್ಯವಿದೆ.

## 8. ರಸ್ತೆ ಅಪಘಾತಗಳು

ರಸ್ತೆ ಸಂಚಾರ ವ್ಯವಸ್ಥೆಯಲ್ಲಿ ಹಲವಾರು ಸಂಕೀರ್ಣ ಸಮಸ್ಯೆಗಳಿವೆ. ಇಂತಹ ಸಮಸ್ಯೆಗಳಲ್ಲಿ ರಸ್ತೆ ಅಪಘಾತಗಳು ಪ್ರಧಾನ ಸಮಸ್ಯೆಗಳಾಗಿವೆ. ಇತ್ತೀಚಿಗಿನ ವರ್ಷಗಳಲ್ಲಿ ಭೀಕರವಾದ ರಸ್ತೆ ಅಪಘಾತಗಳು ಸಂಭವಿಸಿ ಪ್ರತಿದಿನ ಕರ್ನಾಟಕ ರಾಜ್ಯದಲ್ಲಿ ನೂರಾರು ಜನರು ಅಕಾಲಿಕ ಮೃತ್ಯುವಿಗೆ ಬಲಿಯಾಗುತ್ತಾರೆ. ಹಲವಾರು ರಸ್ತೆ ಸಂಚಾರ ವ್ಯವಸ್ಥೆಯ ತಜ್ಞರು ಮತ್ತು ಸಾಮಾಜಿಕ ವಿಜ್ಞಾನಿಗಳು ರಸ್ತೆ ಅಪಘಾತಗಳ ಕಾರಣ ಸ್ವರೂಪ ದುಷ್ಪರಿಣಾಮ ಹಾಗೂ ಪರಿಹಾರೋಪಾಯಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಈ ವಿಷಯ ಮತ್ತು ವಿವಾದಾಂಶಗಳ ಬಗೆಗೆ ಪ್ರತ್ಯೇಕವಾದ ವ್ಯಾಪಕ ಸ್ವರೂಪದ ವಿವರಣೆಗಳ ಅಗತ್ಯವಿದೆ.

ಕರ್ನಾಟಕ ರಾಜ್ಯದ ಮೈಸೂರು, ಮಂಡ್ಯ, ಹಾಸನ, ಮಂಗಳೂರು, ಬೀದರ್, ಬಾಗಲಕೋಟೆ, ಬಿಜಾಪೂರ ಇತ್ಯಾದಿ ಜಿಲ್ಲೆಗಳಲ್ಲಿ ಸಂಭವಿಸಿದಂತಹ ಭಯಾನಕ ಅಪಘಾತಗಳು ಅನೇಕ ಕುಟುಂಬಗಳನ್ನು ನಾಶಮಾಡಿ ಜೀವನೋತ್ಸಾಹವನ್ನು ಧ್ವಂಸಗೊಳಿಸಿವೆ. ಮೈಸೂರು–ನಂಜನಗೂಡಿನ ರಸ್ತೆಯು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 212) ಹೃದಯವಿದ್ರಾವಕ ದುರ್ಘಟನೆಗೆ ಮೂಕ ಸಾಕ್ಷಿಯಾಗಿದೆ.

## 9. ಸಂಚಾರಿ ನಿಯಮಗಳ ಅನುಷ್ಠಾನ

ಭಾರತದಲ್ಲಿ ರಸ್ತೆಗಳ ಕಾನೂನು ಪರಿಪಾಲನೆಯು ದುಸ್ಥಿತಿಯಲ್ಲಿದೆ. ಮೋಟಾರು ವಾಹನ ಕಾಯ್ದೆಗೆ ಎರಡು ಧ್ಯೇಯಗಳಿವೆ : (ಅ) ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡುವುದು. (ಬ) ರಸ್ತೆ ಅಪಘಾತದಲ್ಲಿ ಸಂತ್ರಸ್ತರಾದವರಿಗೆ ಪರಿಹಾರ ನೀಡುವುದು. ಸಾಮಾಜಿಕ ಹಿತಾಸಕ್ತಿಯಿಂದ ಪ್ರೇರಿತವಾದ ಇಂತಹ ಕಾನೂನನ್ನು 'ಕಲ್ಯಾಣ ಶಾಸನ' ಎಂದು ಗುರುತಿಸಲಾಗಿದೆ. ಹೆಚ್ಚುತ್ತಿರುವ ಅಪಘಾತಗಳನ್ನು ನಿಯಂತ್ರಿಸಲು ಮತ್ತು ಅಪಘಾತರಹಿತ ಪರಿಸ್ಥಿತಿಯನ್ನು ನಿರ್ಮಿಸಲು ಸಾರಿಗೆ ನಿಯಮಗಳ ಕಟ್ಟುನಿಟ್ಟಾದ ಪಾಲನೆಯು ಅಗತ್ಯವಾಗಿದೆ.

## 10. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ನಿಯಮಿತ) [KRDCL] ದ ಸಕ್ರಿಯ ಪಾತ್ರ

1999ರಲ್ಲಿ ಸ್ಥಾಪನೆಗೊಂಡು ಕರ್ನಾಟಕ ರಾಜ್ಯದಲ್ಲಿ ರಸ್ತೆ ನಿರ್ಮಾಣ ಮತ್ತು ನಿರ್ವಹಣಾ ಕಾರ್ಯಗಳನ್ನು ಕೈಕೊಳ್ಳುತ್ತದೆ. ಅದರ ಕಾರ್ಯವೈಖರಿಯನ್ನು ಸಂಶೋಧನೆಗೆ ಗುರಿಪಡಿಸಬೇಕು.

## ವ್ಯವಸ್ಥೆಯ ಸುಧಾರಣೆ

ರಸ್ತೆ ಸಂಪರ್ಕ ಸಾಧನಗಳು, ಆಧುನಿಕತೆ ಮತ್ತು ಅಭಿವೃದ್ಧಿಯ ಸಂಕೇತಗಳಾಗಿವೆ. ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವಂತಹ ಮುಖ್ಯ ರಸ್ತೆಯ ಮಹತ್ವದ ಪಾತ್ರವನ್ನು ಗುರುತಿಸಲಾಗಿದೆ. ಕೃಷಿ ಉತ್ಪನ್ನ/ವ್ಯಾಪಾರ ಇತ್ಯಾದಿ ಆರ್ಥಿಕ ಚಟುವಟಿಕೆಗಳಲ್ಲಿ ನಿರಂತರವಾದ ಗ್ರಾಮಸ್ಥರು ಉದ್ಯೋಗ ಮತ್ತು ವರಮಾನ ಹೆಚ್ಚಿಸಿಕೊಳ್ಳಲು ರಸ್ತೆ ಸಂಪರ್ಕ ಅತ್ಯವಶ್ಯಕವಾಗಿದೆ. ಈ ದಿಶೆಯಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ವಿಶೇಷವಾದ ಒತ್ತು ನೀಡಲಾಗಿದೆ. ಆದರೆ 1991–92ರಲ್ಲಿ 1500 ಕ್ಕಿಂತಲೂ ಅಧಿಕ ಜನಸಂಖ್ಯೆ ಹೊಂದಿರುವ ಗ್ರಾಮಗಳಲ್ಲಿ ರಸ್ತೆ ಸಂಪರ್ಕದ ಸ್ಥಿತಿ/ಗತಿಯನ್ನು ಸಮೀಕ್ಷಿಸಿದಾಗ ಕಂಡುಬಂದಿರುವ ಅಂಕಿ/ಅಂಶಗಳನ್ನು 2009–10ರ ವಾಸ್ತವಿಕ ಸಂಗತಿಯೊಂದಿಗೆ ಜೊತೆಗೂಡಿಸಿ ತುಲನಾತ್ಮಕ ಅಧ್ಯಯನ ಕೈಕೊಳ್ಳಬೇಕು.

ಸಾರಿಗೆ ವ್ಯವಸ್ಥೆಯ ಸುಧಾರಣೆಯನ್ನು ಕುರಿತು ಆಗಾಗ ಚರ್ಚೆ/ವಿಚಾರ ಸಂಕಿರಣಗಳು ನಡೆಯುತ್ತವೆ. ರಾಷ್ಟ್ರೀಯ/ರಾಜ್ಯ ಹೆದ್ದಾರಿ ಮತ್ತು ಗ್ರಾಮೀಣ ರಸ್ತೆಗಳ ಪ್ರಾಮುಖ್ಯತೆಯನ್ನು ಪರಿಗಣಿಸಲಾಗಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಉದ್ಭವಿಸುವಂತಹ ಅನಿಯಂತ್ರಿತ ಸಂದರ್ಭಗಳಿಂದ ಸಾರಿಗೆ ವ್ಯವಸ್ಥೆಯು ಹಿನ್ನಡೆಯನ್ನು ಅನುಭವಿಸುತ್ತದೆ. ಕೆಟ್ಟ ರಸ್ತೆ ವ್ಯವಸ್ಥೆಯಿಂದ ಭಾರತಕ್ಕೆ ಪ್ರತಿ ವರ್ಷ 2 ರಿಂದ 3 ನೂರು ಕೋಟಿ ರೂ.ಗಳಷ್ಟು ನಷ್ಟ ಸಂಭವಿಸುತ್ತದೆ. ಇಂತಹ ಬೃಹದ್ ಪ್ರಮಾಣದ ಹಾನಿಯನ್ನು ಪ್ರತಿಬಂಧಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಕೊಳ್ಳಬೇಕು.

## ರಸ್ತೆ ಸಂಚಾರ ವ್ಯವಸ್ಥೆಯ ಸುಧಾರಣೆಗೆ ಕ್ರಮಗಳನ್ನು ಸೂಚಿಸಲಾಗಿದೆ

1) ನೂತನ ಉಪಕ್ರಮ
2) ಅತ್ಯಾಧುನಿಕ ತಂತ್ರಜ್ಞಾನ
3) ಸಿಬ್ಬಂದಿ ತರಬೇತಿ ಯೋಜನೆ
4) ಖಾಸಗಿ ಬಂಡವಾಳ
5) ವಿದೇಶೀ ಬಂಡವಾಳದ ಪ್ರಮಾಣ
6) ಖಾಸಗಿ ಕ್ಷೇತ್ರಕ್ಕೆ ರಿಯಾಯತಿ
7) ಆದಾಯದ ಸದ್ಬಳಕೆ
8) ರಸ್ತೆ ತೆರಿಗೆ ಸುಧಾರಣೆ
9) ಮಿತವ್ಯಯ ಸಾಧನೆ
10) ಆಮದು ತೆರಿಗೆ ವಿನಾಯತಿ

1. 'ರಿ ಸೈಕ್ಲಿಂಗ್' ಯಂತ್ರೋಪಕರಣದ ಬಳಕೆಯಿಂದ ರಸ್ತೆ ನಿರ್ಮಾಣದಲ್ಲಿ ವೆಚ್ಚ ಮತ್ತು ಸಮಯದ ಉಳಿತಾಯ ಸಾಧ್ಯವಾಗಿದೆ. ಸಂಚಾರಿ ರಸ್ತೆ ಉಸ್ತುವಾರಿ ಘಟಕಗಳನ್ನು ಅಸ್ತಿತ್ವಕ್ಕೆ ತರುವುದರಿಂದ ರಸ್ತೆಗಳಲ್ಲಿ ಉಂಟಾದ ಹಳ್ಳ/ತಗ್ಗುಗಳನ್ನು ತ್ವರಿತವಾಗಿ ರಿಪೇರಿ ಮಾಡಲು ಸಾಧ್ಯವಾಗಿದೆ.
2. ರಸ್ತೆ ನಿರ್ಮಾಣದಲ್ಲಿ ಆಧುನಿಕ ತಂತ್ರಜ್ಞಾನ ಮತ್ತು ನವೀನ ಸಾಮಗ್ರಿ ಬಳಸಲಾಗುತ್ತದೆ. ರಸ್ತೆ ಉಸ್ತುವಾರಿ ಕಾರ್ಯಗಳನ್ನು ಯಾಂತ್ರೀಕರಣಗೊಳಿಸಲಾಗಿದೆ. ಗಣಕೀಕೃತ ಉಸ್ತುವಾರಿ ಮೇಲ್ವಿಚಾರಣಾ ಪದ್ಧತಿಯನ್ನು ಸರ್ಕಾರ ಯೋಜಿಸಿದೆ.
3. ರಸ್ತೆ ಅಭಿವೃದ್ಧಿಗಾಗಿ ಸಿಬ್ಬಂದಿ ತರಬೇತಿ ಯೋಜನೆಯನ್ನು ಸರ್ಕಾರ ಪ್ರಾರಂಭಿಸಿದೆ. ಹೊಸ ಸಿಬ್ಬಂದಿಗೆ 'ತಳಹದಿ ತರಬೇತಿ' ಮತ್ತು ಅನುಭವಿಕ ಸಿಬ್ಬಂದಿಗೆ 'ವಿಶೇಷ ಪುನರ್ಮನನ ಕಾರ್ಯಕ್ರಮ' ಏರ್ಪಡಿಸಲಾಗುತ್ತದೆ.
4. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಮತ್ತು ಉಸ್ತುವಾರಿ ಕಾರ್ಯಗಳಲ್ಲಿ ಖಾಸಗಿ ಬಂಡವಾಳದಾರರಿಗೆ ಉತ್ತೇಜನ ನೀಡಲು ಭಾರತ ಸರ್ಕಾರ ಅಪೇಕ್ಷಿಸುತ್ತದೆ.
5. ವಿದೇಶೀ ಬಂಡವಾಳವನ್ನು ಆಕರ್ಷಿಸುವ ದಿಶೆಯಲ್ಲಿ ನೇರ ವಿದೇಶೀ ಬಂಡವಾಳದ ಮಿತಿಯನ್ನು ಶೇಕಡಾ 51 ರಿಂದ ಶೇಕಡಾ 74ಕ್ಕೆ ಏರಿಸಲಾಗಿದೆ. ರಸ್ತೆ ನಿರ್ಮಾಣ ಯೋಜನೆಯ ವೆಚ್ಚದ ಶೇಕಡಾ 35ರಷ್ಟು ಭಾಗವನ್ನು ವಿದೇಶೀ ವಾಣಿಜ್ಯ ಸಾಲದ ರೂಪದಲ್ಲಿ ಪಡೆಯಲು ಅನುಮತಿಸಲಾಗಿದೆ.
6. ರಸ್ತೆ ನಿರ್ಮಾಣದಲ್ಲಿ ಖಾಸಗಿ ಕ್ಷೇತ್ರದ ವ್ಯಕ್ತಿಗಳು ಹಣಕಾಸು ಹೂಡಲು ಅನುಕೂಲವಾಗುವಂತೆ ರಸ್ತೆ ನಿರ್ಮಾಣ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಗೃಹ ನಿರ್ಮಾಣ ಯೋಜನೆಯಲ್ಲಿ ತೊಡಗಿಸಿದ ಬಂಡವಾಳಕ್ಕೆ ತೆರಿಗೆ ವಿನಾಯಿತಿ ನೀಡಲು ಸರ್ಕಾರ ಆಸಕ್ತಿ ಹೊಂದಿರುವಂತೆ ಕಾಣುತ್ತದೆ.
7. ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ರಸ್ತೆ ಅಪಘಾತಗಳ ಸಾಮಾಜಿಕ ವೆಚ್ಚವನ್ನು ಭರಿಸಲು ಸಂಗ್ರಹಿತವಾದ ಆದಾಯವನ್ನು ಉಪಯೋಗಿಸಬೇಕು.
8. ರಾಷ್ಟ್ರೀಯ ಹೆದ್ದಾರಿ/ರಸ್ತೆ ಬಳಕೆ ಮಾಡುವ ವಾಹನಗಳ ಮಾಲೀಕರಿಂದ ಕಟ್ಟುನಿಟ್ಟಾಗಿ ಹೆಚ್ಚು ತೆರಿಗೆ ಸಂಗ್ರಹಿಸಬೇಕು.
9. ಹೊಸ ತಂತ್ರಜ್ಞಾನದ ಸಹಾಯದಿಂದ ಯೋಗ್ಯವಾದ ಕ್ರಮಗಳನ್ನು ಕೈಕೊಂಡು ರಸ್ತೆ ನಿರ್ಮಾಣದ ವೆಚ್ಚವನ್ನು ಕಡಿಮೆ ಮಾಡಬೇಕು.
10. ಶ್ರೇಷ್ಠ ದರ್ಜೆಯ ಕೆಲವು ನಿರ್ಮಾಣ ಸ್ಥಾವರ ಹಾಗೂ ಉಪಕರಣಗಳ ಮೇಲಿನ ಆಮದು ತೆರಿಗೆಯನ್ನು ತೆಗೆದು ಹಾಕಲಾಗಿದೆ. ಪ್ರಕರಣಗಳನ್ನು ಆಧರಿಸಿ, ಸಂಚಾರ ಅಪಘಾತ/ಅಪಾಯದ ವೆಚ್ಚವನ್ನು ಹಂಚಿಕೊಳ್ಳಲು ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ.

ರಸ್ತೆ ನಿರ್ಮಾಣ ಮತ್ತು ಉಸ್ತುವಾರಿಗೆ ಸಂಬಂಧಿಸಿದ ಮಹತ್ವದ ಕಾರ್ಯಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ 'ಸಂಯುಕ್ತ ಹೊಣೆಗಾರಿಕೆ'ಯ ವ್ಯಾಪ್ತಿಯಲ್ಲಿವೆ. ಖಾಸಗಿ/ಸಾರ್ವಜನಿಕ ಸಹಭಾಗಿತ್ವದ ಮಾದರಿ (PPP-Model) ಅಡಿಯಲ್ಲಿ ಸಮರ್ಪಕವಾದ ಮಾರ್ಗದರ್ಶಿ ಸೂತ್ರಗಳ ಕರಡು ತಯಾರಿಸಿ, ಗಂಭೀರವಾಗಿ ಕ್ರಮಕೈಗೊಳ್ಳಬೇಕು.

❑

# ಗ್ರಾಮ ಸಭೆ

– ಜಿ. ವೆಂಕಟೇಶ್ *

ಗ್ರಾಮ ಸಭೆ ಇದು ಗ್ರಾಮ ಸಭೆ
ಪ್ರಜಾಧಿಕಾರದ ಪರಮ ಸಭೆ
ಪಂಚಾಯ್ತಿಗೆ ಇದುವೆ ಪ್ರಧಾನ ಸಭೆ
ಹಳ್ಳಿಯ ಜನತೆಯ ವಿಧಾನಸಭೆ ॥ ಪ ॥

ಫಲಾನುಭವಿಗಳ ಅರ್ಜಿಗಳ ಸ್ವೀಕರಿಸಿ
ಕಾಮಗಾರಿಗಳ ಆಯ್ಕೆಯ ಬಗ್ಗೆ
ವಾರ್ಡ್ ಸಭೆಗಳ ವಿಷಯಗಳ ಚರ್ಚಿಸಿ
ಆಯ್ಕೆ ಮಾಡುವ ಅಧಿಕಾರ ಸಭೆ ॥ ಗ್ರಾಮ ಸಭೆ ॥

ವಿವಿಧ ಇಲಾಖೆಗಳ ಅಧಿಕಾರಿಗಳ ಕರೆಸಿ
ವಿವಿಧ ಸೌಲಭ್ಯಗಳ ಬಗ್ಗೆ ತಿಳಿದು
ನಮ್ಮ ಕುಂದುಕೊರತೆಗಳ ನೇರ ಚರ್ಚಿಸಿ
ಸರ್ಕಾರದ ಸೌಲಭ್ಯಗಳ ಪಡೆಯಲು ಸಹಕಾರ ಸಭೆ ॥ ಗ್ರಾಮ ಸಭೆ ॥

ಊರಿನ ಸ್ವಚ್ಛತೆಯ ಕಾಪಾಡಲು ನಾವು
ಬಯಲು ಮಲ ವಿಸರ್ಜನೆಯ ತ್ಯಜಿಸಿ
ಮನೆಗೊಂದು ಶೌಚಾಲಯವ ನಿರ್ಮಿಸಿ
ನಮ್ಮ ಪಂಚಾಯ್ತಿಗೆ ನೈರ್ಮಲ್ಯ ಪುರಸ್ಕಾರವ
ತರಲು ನಿರ್ಣಯ ಕೈಗೊಳ್ಳುವ ಪ್ರಮುಖ ಸಭೆ ॥ ಗ್ರಾಮ ಸಭೆ ॥

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿಯು ಬಂದು
ಹಳ್ಳಿಯ ಜನತೆಯ ಗುಳೆಯ ತಪ್ಪಿಸಿ
ಬಸವ–ಇಂದಿರಾ ವಸತಿ ಯೋಜನೆ ಬಂದು
ಗುಡಿಸಲು ವಾಸವ ತಪ್ಪಿಸಿ, ಸೂರಿನ ಕನಸನು
ಸಾಕಾರಗೊಳಿಸಿದ ಪಂಚಾಯ್ತಿ ಸಭೆ ॥ ಗ್ರಾಮ ಸಭೆ ॥

❑

* ಕಂಪ್ಯೂಟರ್ ಆಪರೇಟರ್, ಅಗರ ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.

ಬದುಕುವ ಮಾತು



ಡಾ. ಪಾಟೀಲ ಪುಟ್ಟಪ್ಪ

# ಸೋಲಿನಲ್ಲಿ ಗೆಲುವು ಇದೆ, ಪ್ರಯತ್ನ ಮಾತ್ರ ಬೇಕು

ಈಗ ಗೆದ್ದಿರುವವರೆಲ್ಲರೂ ಜೀವನದಲ್ಲಿ ಒಂದಲ್ಲ ಒಂದು ಸಲ ಸೋತಿದ್ದಾರೆ. ಸೋಲದೇ ಯಾವನೊಬ್ಬನೂ ಗೆದ್ದಿಲ್ಲ. ನಮ್ಮಲ್ಲಿ ಶ್ರೇಷ್ಠರೆನ್ನುವವರು ಕೂಡ, ತಮ್ಮ ಜೀವನದಲ್ಲಿ ಗೆಲುವಿನ ಕಟ್ಟೆ ಏರಿದ್ದಾರೆ.

ಒಬ್ಬ ಮನುಷ್ಯನಿಗೆ ಸೋಲು ಉಂಟಾದರೆ ಅದು ಒಂದೇ ಒಂದು ಸಂಗತಿಯನ್ನು ಸ್ಥಾಪಿಸಿರುತ್ತದೆ. ಗೆಲ್ಲುವುದಕ್ಕೆ ಬೇಕಾದ ಗಟ್ಟಿ ನಿರ್ಧಾರ ಅವರಲ್ಲಿ ಇರಲಿಲ್ಲವೆನ್ನುವುದೇ ಅದು.

ಸೋಲಬಾರದೆನ್ನುವವನ ಜೀವನದಲ್ಲಿ ಪ್ರಯತ್ನ ಇದ್ದೇ ಇರಬೇಕು. ಪ್ರಯತ್ನ ಮಾಡಿಯೂ ಯಶಸ್ಸನ್ನು ಸಂಪಾದಿಸದಿದ್ದರೆ, ತನ್ನ ಪ್ರಯತ್ನ ಸಾಲದಾಯಿತೆಂದು ತಿಳಿಯಬೇಕಲ್ಲದೆ, ತಾನು ಸೋಲುವುದಕ್ಕಾಗಿಯೇ ಜನ್ಮವೆತ್ತಿ ಬಂದವನೆಂದು ತಿಳಿಯಬಾರದು.

ಮನುಷ್ಯ ಪ್ರಯತ್ನವು ಯಶಸ್ಸಿಗೆ ಜಿಗಿದು ಹೋಗುವ ಸೋಪಾನವಾಗಿದೆ. ಮೆಟ್ಟಿಲು ಏರಿಕೊಂಡು ಮೇಲಕ್ಕೆ ಹೋಗಬೇಕೆನ್ನುವ ಪ್ರಯತ್ನ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಸದಾ ಇದ್ದೇ ಇರಬೇಕು.

ಸೋಲು ನಮಗೆ ಬಹಳಷ್ಟನ್ನು ಕಲಿಸಿಕೊಡುತ್ತದೆ. ಅದರಂಥ ಪಾಠಶಾಲೆ ಇನ್ನೊಂದಿಲ್ಲ, ಮನುಷ್ಯನು ತನ್ನ ಯಶಸ್ಸಿನಿಂದ ಕಲಿಯುವುದಕ್ಕಿಂತಲೂ, ತನ್ನ ಸೋಲಿನಿಂದ ಹೆಚ್ಚು ಕಲಿಯುತ್ತಾನೆ. ಘನತೆವೆತ್ತ ಯಶಸ್ಸಿನ ಉದಾತ್ತವಾದ ಸೋಲನ್ನು ಕೂಡ, ಜಗತ್ತು ಅಷ್ಟೇ ಪ್ರೀತಿಯಿಂದ ಮೆಚ್ಚಿಕೊಳ್ಳುತ್ತದೆ.

> ಮನುಷ್ಯನು ತನ್ನ ಯಶಸ್ಸಿನಿಂದ ಕಲಿಯುವುದಕ್ಕಿಂತಲೂ, ತನ್ನ ಸೋಲಿನಿಂದ ಹೆಚ್ಚು ಕಲಿಯುತ್ತಾನೆ.

ತನ್ನ ತತ್ತ್ವ, ಗುರಿ, ಆದರ್ಶಗಳನ್ನು ಅನುಸರಿಸಿ ಹೋಗುವ ಮನುಷ್ಯನಿಗೆ ಸೋಲು ಇಲ್ಲ. ಆದರೆ, ಅವುಗಳಿಂದ ಚ್ಯುತನಾದ ಮನುಷ್ಯನನ್ನು ಸೋಲು ಹಿಂಬಾಲಿಸಿಕೊಂಡು ಹೋಗಿರುತ್ತದೆ.

ಮನುಷ್ಯನು ಜೀವನದಲ್ಲಿ ತಪ್ಪು ಮಾಡುವುದು ಸಹಜ. ತಪ್ಪು ಮಾಡಿದವನು, ತನಗೆ ಅವಕಾಶವೇ ಇಲ್ಲವೆಂದು ತಿಳಿದುಕೊಳ್ಳಬಾರದು. ಪ್ರಯತ್ನ ಮಾಡುವ ಪ್ರತಿಯೊಬ್ಬನೂ ತನ್ನ ಪ್ರಯತ್ನದಲ್ಲಿ ಸೋಲಬಹುದು. ಸೋತರೇನಂತೆ? ಹೊಸ ಪ್ರಯತ್ನಕ್ಕೆ ಇನ್ನೊಮ್ಮೆ ತೊಡಗುವುದು ಸಾಧ್ಯ ಇದ್ದೇ ಇದೆ.

ಬೀಳುವುದು ಸೋಲಲ್ಲ. ಬಿದ್ದಂತೆಯೇ ಇರುವುದು ಮಾತ್ರ ಸೋಲು. ಬಿದ್ದಿರುವ ಪ್ರತಿಯೊಬ್ಬ ಮನುಷ್ಯನಿಗೂ ಏಳುವ ಅವಕಾಶ ಇದ್ದೇ ಇದೆ. ಏಳುವ ಪ್ರಯತ್ನವನ್ನು ಅವನು ಬಿಡಬಾರದು. ಏಳುವ ಪ್ರಯತ್ನ ಮಾಡದೇ ಇದ್ದವನು ಮಾತ್ರ ಸೋತಿದ್ದಾನೆ ಎಂದು ಹೇಳಬಹುದು.

ಮನುಸ್ಯನು ತನಗೆ ಮೆಚ್ಚುಗೆ ಎನಿಸುವ ಕೆಲಸವನ್ನು ಕೈಗೆತ್ತಿಕೊಂಡು, ಅದನ್ನು ಸಾಧಿಸಲು ಮುಂದಾದರೆ, ಅವನಿಗೆ ಸೋಲೆನ್ನುವುದೇ ಇಲ್ಲ.

❑

# ಕೃಷಿ ಕ್ಷೇತ್ರದ ಕಡೆಗಣನೆ, ಭಿಕಾರಿ ಭಾರತ ಎನ್ನಿಸಿಕೊಳ್ಳಬೇಕೇ?

ಭಾರತ ದೇಶದಲ್ಲಿ ಈಗಿರುವ ಜನಸಂಖ್ಯೆಯು ಏನೂ ಶ್ರಮ ಪಡದೆ ಬರೀ 70 ದಿವಸ ಕೂತು ಉಂಡರೆ ನಮ್ಮಲ್ಲಿರುವ ಆಹಾರ ದಾಸ್ತಾನು ಎಲ್ಲಾ ಖಾಲಿಯಾಗುತ್ತದೆಯಂತೆ, ಈ ಎಚ್ಚರಿಕೆಯನ್ನು ವಿಶ್ವಸಂಸ್ಥೆ 2010ರ ಡಿಸೆಂಬರ್‌ನಲ್ಲಿ ತಿಳಿಸಿದೆ. ಇದಕ್ಕೆ ಅಕ್ಷರಸ್ಥರು ಕೃಷಿ ಕ್ಷೇತ್ರವನ್ನು ಕಡೆಗಣಿಸಿರುವುದೆ ಅಲ್ಲದೆ ವ್ಯವಸಾಯ ಲಾಭದಾಯಕವಲ್ಲವೆಂದು ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಹೋಗುವುದು, ಬೇರೆ ಉದ್ಯೋಗದಲ್ಲಿ ತೊಡಗಿಕೊಳ್ಳುವುದು ಇರಬಹುದು. ಹಾಗಾಗಿ ಮುಂದೊಂದು ದಿನ ವಿಶ್ವದ ಇತರೇ ರಾಷ್ಟ್ರಗಳ ಮುಂದೆ ಭಾರತ ಆಹಾರಕ್ಕಾಗಿ ಭಿಕಾರಿಯಾಗಿ ನಿಲ್ಲದೆ ಸ್ವಂತ ಶಕ್ತಿ ವೃದ್ಧಿಸಿಕೊಳ್ಳಬೇಕಾಗಿದೆಯಲ್ಲವೆ?




**ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು**

1. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು ಎಂಬುದನ್ನು ಅರಿತು ಕೃಷಿಯಲ್ಲಿಯೇ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಮುಂದೆ ಉದ್ಭವಿಸಬಹುದಾದ ಆಹಾರ ಸಮಸ್ಯೆಯನ್ನು ನೀಗಿಸಬೇಕಲ್ಲವೆ?
2. ಕೃಷಿಯನ್ನು ವೈಜ್ಞಾನಿಕ ರೀತಿಯಲ್ಲಿ ಕೈಗೊಂಡು ಅಧಿಕ ಲಾಭ ಪಡೆಯುವ ಮೂಲಕ ಲಾಭದಾಯಕ ಉದ್ಯಮವೆಂದು ಇತರರಿಗೆ ತೋರಿಸಬೇಕಲ್ಲವೆ?
3. ಸರ್ಕಾರಗಳು ಕೃಷಿ ಉತ್ತೇಜನಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಅವುಗಳ ಸದುಪಯೋಗ ಮಾಡಿಕೊಂಡು ಅಧಿಕ ಇಳುವರಿ ಪಡೆದು ಆಹಾರ ಕೊರತೆ ನೀಗಿಸಬಹುದಲ್ಲವೆ?
4. ದೇಶಕ್ಕೆ ಅನ್ನ ಹಾಕುವ ಭಾಗ್ಯ ಕೃಷಿಕರಿಗಲ್ಲದೆ ಬೇರೆಯವರಿಗೆ ಉಂಟೆ?
5. ವಿಶ್ವದ ಇತರೇ ರಾಷ್ಟ್ರಗಳ ಮುಂದೆ ಭಿಕಾರಿ ಭಾರತ ಎನ್ನಿಸಿಕೊಳ್ಳಬೇಕೆ?


**– ಎಂ. ಚಿದಾನಂದಪ್ಪ**

6ನೇ ವಾರ್ಡ್, ಮ್ಯಾದಾರ ಓಣಿ, ಹೂವಿನ ಹಡಗಲಿ,

ಬಳ್ಳಾರಿ ಜಿಲ್ಲೆ. ಮೊಬೈಲ್ : 9980720926


ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/- ಬಹುಮಾನ ನೀಡಲಾಗುವುದು.

## ನಿರ್ಮಲ

**ಸಂಪೂರ್ಣ ಸ್ವಚ್ಛತಾ ಆಂದೋಲನ**

**ಸ್ವಚ್ಛ ಕರ್ನಾಟಕ**

### ನುಡಿ ನಿರ್ಮಲ

ಗ್ರಾಮೀಣ ಪ್ರದೇಶಗಳಲ್ಲಿ ಗೃಹ ಶೌಚಾಲಯ, ಶಾಲಾ ಶೌಚಾಲಯ, ಅಂಗನವಾಡಿ ಶೌಚಾಲಯ, ಗ್ರಾಮ ಸ್ವಚ್ಛತೆ, ಘನ ಹಾಗೂ ದ್ರವ ತ್ಯಾಜ್ಯಗಳ ವಿಲೇವಾರಿ ಮುಂತಾದ ನೈರ್ಮಲ್ಯದ ಎಲ್ಲ ಘಟಕಾಂಶಗಳನ್ನು ಸಂಪೂರ್ಣ ಸ್ವಚ್ಛತಾ ಆಂದೋಲನದ ಅಡಿಯಲ್ಲಿ ಅನುಷ್ಠಾನಗೊಳಿಸಬೇಕಿರುತ್ತದೆ. ಗ್ರಾಮೀಣ ನೈರ್ಮಲ್ಯದ ಅನುಷ್ಠಾನದಲ್ಲಿ ಹಲವಾರು ಸವಾಲುಗಳಿವೆ. ಒಂದೆಡೆ ಗ್ರಾಮೀಣ ಜನರಲ್ಲಿನ ಮನೋಸ್ಥಿತಿ, ರೂಢಿಗತ ಅಭ್ಯಾಸಗಳು, ಆಚರಣೆಗಳು, ನಂಬಿಕೆಗಳು, ಮೌಢ್ಯತೆ ಮುಂತಾದ ಸವಾಲುಗಳು. ಇನ್ನೊಂದೆಡೆ ಈಗಾಗಲೇ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸಿದ ಹಾಗೂ ಕೇಂದ್ರ ಸರ್ಕಾರದಿಂದ ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಗ್ರಾಮ ಪಂಚಾಯಿತಿಗಳಲ್ಲಿ ಸುಸ್ಥಿರತೆಯನ್ನು ಸಾಧಿಸುವುದು. ಮತ್ತೊಂದೆಡೆ ನೈರ್ಮಲ್ಯದ ಕೆಲಸಗಳು ಆರಂಭವೇ ಆಗಿಲ್ಲದ ಕಡೆಗಳಲ್ಲಿ, ಪ್ರಗತಿ ಅತ್ಯಂತ ಕೆಳಮಟ್ಟದಲ್ಲಿ ಇರುವ ಕಡೆಗಳಲ್ಲಿ ನೈರ್ಮಲ್ಯದ ಅನುಷ್ಠಾನವನ್ನು ತ್ವರಿತಗೊಳಿಸಬೇಕಿದೆ.

ವಿಜ್ಞಾನ ತಂತ್ರಜ್ಞಾನಗಳು ಅತ್ಯಂತ ಅಭಿವೃದ್ಧಿ ಹೊಂದಿರುವ ಆಧುನಿಕ ಸಹಸ್ರಮಾನದಲ್ಲಿ ನಾವು ಬದುಕುತ್ತಿದ್ದರೂ ಸಹ ನಮ್ಮ ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಶೌಚಾಲಯಗಳಿಲ್ಲದೆ ತೊಂದರೆ ಅನುಭವಿಸುತ್ತಿರುವುದು ನಡೆದೇ ಇದೆ. ಹೆಣ್ಣು ಮಕ್ಕಳು ತಮ್ಮ ನಿತ್ಯಕರ್ಮಗಳಾದ ಮಲ–ಮೂತ್ರಗಳ ವಿಸರ್ಜನೆಗಾಗಿ ಬಯಲನ್ನೇ ಆಶ್ರಯಿಸಿರುವುದು ನಾಗರೀಕ ಸಮಾಜದ ಲಕ್ಷಣವಾಗಲಾರದು. ನಮ್ಮ ಮಹಿಳೆಯರಿಗಾಗಿ, ಅವರ ಸುರಕ್ಷತೆ ಹಾಗೂ ಸ್ವಾಭಿಮಾನಕ್ಕಾಗಿ ಮನೆಗೊಂದು ಶೌಚಾಲಯ ಅತ್ಯಂತ ಅವಶ್ಯಕ ಎಂಬುದನ್ನು ಗ್ರಾಮೀಣ ಜನಸಮುದಾಯಕ್ಕೆ ಮನವರಿಕೆ ಮಾಡಿಕೊಡಬೇಕಾದ ಬಹುದೊಡ್ಡ ಸವಾಲು ನಮ್ಮ ಮುಂದಿದೆ. ಶೌಚಾಲಯ ನಿರ್ಮಿಸಿಕೊಳ್ಳಲು ಗ್ರಾಮೀಣ ಜನರು ನೂರೆಂಟು ಕಾರಣಗಳನ್ನು ಹೇಳಬಹುದು. ಆದರೆ ಇದಕ್ಕೆ ಹಣದ ತೊಂದರೆಗಿಂತ ಮನೋಸ್ಥಿತಿಯ ತೊಂದರೆ ಹೆಚ್ಚಾಗಿರುವುದನ್ನು ನಾವು ನೋಡಿದ್ದೇವೆ. ಈ ಹಿನ್ನೆಲೆಯಲ್ಲಿ ಜನರ ಮನಪರಿವರ್ತನೆಯ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿದೆ.

ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನದಲ್ಲಿ ಉತ್ತರ ಕರ್ನಾಟಕ ಭಾಗದ ಹಲವು ಜಿಲ್ಲೆಗಳು ಅತ್ಯಂತ ಹಿಂದೆ ಬಿದ್ದಿವೆ. ಮನುಷ್ಯನ ಅತ್ಯಂತ ಮೂಲಭೂತ ಸೌಲಭ್ಯವಾದ ಶೌಚಾಲಯದ ನಿರ್ಮಾಣ, ಬಳಕೆ ಹಾಗೂ ಉತ್ತಮ ನೈರ್ಮಲ್ಯದ ಅಭ್ಯಾಸಗಳಲ್ಲಿ ಹಿಂದೆಬಿದ್ದಿರುವುದು ನಾವೆಲ್ಲರೂ ಗಂಭೀರವಾಗಿ ಯೋಚಿಸಬೇಕಾದ ಸಂಗತಿಯಾಗಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ನೈರ್ಮಲ್ಯ ಪ್ರಗತಿ ಹಿಂದುಳಿದಿರುವ ಕಡೆಗಳಲ್ಲಿ ನೈರ್ಮಲ್ಯದ ಕೆಲಸಕ್ಕೆ ತೀವ್ರಗತಿ ನೀಡುವುದು. ಹಾಗೂ ಈಗಾಗಲೇ ಸಂಪೂರ್ಣ ನೈರ್ಮಲ್ಯ ಸಾಧಿಸಿರುವ ಗ್ರಾಮಗಳಲ್ಲಿ ಸುಸ್ಥಿರತೆಯನ್ನು ಕಾಪಾಡಲು ಕ್ರಮವಹಿಸುವುದು ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ, ಸಮುದಾಯ, ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಎಲ್ಲ ಹಂತಗಳ ಪಂಚಾಯತ್ ಸಂಸ್ಥೆಗಳು ಹೀಗೆ ಎಲ್ಲರೂ ಹೊಣೆಗಾರಿಗೆ ವಹಿಸಿಕೊಂಡು ಗ್ರಾಮೀಣ ನೈರ್ಮಲ್ಯ ಸಾಧನೆಗೆ ಕಾರ್ಯೋನ್ಮುಖರಾಗಲಿ ಎಂಬ ಆಶಯ ನನ್ನದು.

**– ಪಿ.ಎ. ಮೇಘಣ್ಣವರ**

ನಿರ್ದೇಶಕರು, ಕ.ಗ್ರಾ.ನೀ.ಸ. ಮತ್ತು ನೈ. ಸಂಸ್ಥೆ,

ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ.

# ಹೈದರಾಬಾದ್ ಕರ್ನಾಟಕ ಭಾಗದ ಗ್ರಾಮೀಣ ನೈರ್ಮಲ್ಯದ ಕಿರು ನೋಟ



ರಾಜ್ಯದ ಒಟ್ಟಾರೆ ಗ್ರಾಮೀಣ ನೈರ್ಮಲ್ಯ ಸ್ಥಿತಿಗತಿಗಳನ್ನು ಅವಲೋಕಿಸುವುದಾದರೆ ನೈರ್ಮಲ್ಯದ ಅಭ್ಯಾಸಗಳಲ್ಲಿಯೂ ಸಹ ಪ್ರಾದೇಶಿಕ ಅಸಮಾನತೆಗಳು ಇದ್ದೇ ಇವೆ. ರಾಜ್ಯದ ಮಲೆನಾಡು ಹಾಗೂ ಕರಾವಳಿಯ ಭಾಗದ ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಹಾಸನ ಮುಂತಾದ ಜಿಲ್ಲೆಗಳ ಗ್ರಾಮೀಣ ನೈರ್ಮಲ್ಯ ಚಿತ್ರಣ ಬೇರೆ ಭಾಗಗಳ ಜಿಲ್ಲೆಗಳಿಗಿಂತ ನೈರ್ಮಲ್ಯ ಸ್ಥಿತಿಗತಿಗಳಿಗಿಂತ ಭಿನ್ನವಾಗಿದೆ. ಯಾಕೆಂದರೆ ಆ ಭಾಗದ ಜನರು ಕೇವಲ ಸಾಕ್ಷರತೆಯಲ್ಲಿ ಅಷ್ಟೇ ಅಲ್ಲದೆ, ಸ್ವಚ್ಛತೆ ಅಥವಾ ನೈರ್ಮಲ್ಯದ ಅಭ್ಯಾಸಗಳಲ್ಲೂ ಮುಂದುವರೆದಿದ್ದಾರೆ. ಸುತ್ತಲಿನ ಪರಿಸರ, ಮನೆ, ವೈಯಕ್ತಿಕ ನೈರ್ಮಲ್ಯ ಮುಂತಾದ ವಿಷಯಗಳಲ್ಲಿ ಉತ್ತಮ ಅಭ್ಯಾಸಗಳನ್ನು ಹೊಂದಿರುವುದನ್ನು ನಾವು ಕಾಣಬಹುದಾಗಿದೆ. ಹಾಗೆಯೇ ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಸ್ವಲ್ಪ ಮಟ್ಟಿಗಿನ ನೈರ್ಮಲ್ಯ ಸಾಧನೆಯನ್ನು ಕಾಣಬಹುದಾಗಿದೆ. ಆದರೆ ಉತ್ತರ ಕರ್ನಾಟಕ ಭಾಗದ ಅದರಲ್ಲೂ ಹೈದರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಗ್ರಾಮೀಣ ನೈರ್ಮಲ್ಯ ಸ್ಥಿತಿಗತಿಗಳು ತುಂಬಾ ಹಿಂದೆಬಿದ್ದಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳ ಗ್ರಾಮೀಣ ನೈರ್ಮಲ್ಯ ಸ್ಥಿತಿಗತಿಗಳನ್ನು ಸುಧಾರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಹಲವಾರು ಪ್ರಯತ್ನಗಳನ್ನು ಮಾಡಿದೆ. ಆ ಭಾಗದಲ್ಲಿ ನೈರ್ಮಲ್ಯ ಉತ್ತೇಜನಕ್ಕಾಗಿ ಪ್ರಾಂತೀಯ ಸಿ.ಸಿ.ಡಿ.ಯು ಘಟಕವನ್ನು ಸ್ಥಾಪಿಸಲಾಗಿದೆ. ವಿಭಾಗವಾರು ಹಾಗೂ ಜಿಲ್ಲಾವಾರು ಕಾರ್ಯಾಗಾರಗಳನ್ನು ನಡೆಸುವ ಮೂಲಕ, ಸಮುದಾಯದ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ಹೈದರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಗ್ರಾಮೀಣ ನೈರ್ಮಲ್ಯವನ್ನು ಉತ್ತೇಜಿಸಲಾಗುತ್ತಿದೆ.



ಕೊಪ್ಪಳ, ಗುಲ್ಬರ್ಗ, ರಾಯಚೂರು, ಯಾದಗಿರಿ ಮುಂತಾದ ಜಿಲ್ಲೆಗಳಲ್ಲಿ ಗ್ರಾಮೀಣ ನೈರ್ಮಲ್ಯ ಸಾಧನೆಯ ಪ್ರಯತ್ನಗಳು ನಡೆಯಲಾರಂಭಿಸಿವೆ. ಇದರ ಫಲಶೃತಿಯಾಗಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕೊಪ್ಪಳ ಜಿಲ್ಲೆಯ 21 ಗ್ರಾಮ ಪಂಚಾಯಿತಿಗಳು, ಗುಲ್ಬರ್ಗ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಒಂದೊಂದು ಗ್ರಾಮ ಪಂಚಾಯಿತಿಗಳು ಕೇಂದ್ರ ಸರ್ಕಾರದ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿವೆ.

ಜಿಲ್ಲೆಯ 21 ಗ್ರಾಮ ಪಂಚಾಯಿತಿಗಳು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗುವ ಮೂಲಕ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ನೈರ್ಮಲ್ಯ ಸಾಧನೆಯ ಕೀರ್ತಿಯನ್ನು ಹೆಚ್ಚಿಸಿರುವ ಹಿರಿಮೆ ಕೊಪ್ಪಳ ಜಿಲ್ಲೆಯದ್ದಾಗಿದೆ. ಜಿಲ್ಲಾ ಕೇಂದ್ರಕ್ಕೆ ಕೂಗಳತೆಯ ದೂರದಲ್ಲಿ ತುಂಗಾಭದ್ರ ಜಲಾಶಯವಿದೆ. ಇದರ ಪ್ರಯೋಜನವನ್ನು ಜಿಲ್ಲೆಯ ಗಂಗಾವತಿ ಮತ್ತು ಕೊಪ್ಪಳ ತಾಲೂಕುಗಳು ಪಡೆದುಕೊಂಡಿವೆ. ಅಲ್ಲದೇ ಈ ಭಾಗದಲ್ಲಿ ನೈರ್ಮಲ್ಯದ ಅಭ್ಯಾಸಗಳು ತ್ವರಿತ ಗತಿಯಲ್ಲಿ ಸಾಗಲು ಇದೂ ಒಂದು ಕಾರಣವಾಗಿದೆ. "ಪಾಯಿಖಾನೆ ಅವಶ್ಯಕತೆ ಗಂಡಸರಿಗೆ ಅಷ್ಟೊಂದಿಲ್ಲಾ. ಅದರ ಸಂಕಟ ಅವಮಾನ ಎಷ್ಟೆಂಬುದು ಗೊತ್ತಿಲ್ಲ. ಸೂರ್ಯನಿರದ ಸಮಯದಲ್ಲಿ ಮಾತ್ರ ರಸ್ತೆ ಬದಿಯಲ್ಲಿ ಬಹಿರ್ದೆಸೆಗೆ ತೆರಳುವ ನಿಮಗೆ ಮಾತ್ರ ಗೊತ್ತು ಅದರ ಪಡಿಪಾಟಲು! ಹೆಣ್ಣು ಮಕ್ಕಳೇ, ಹಾಗಂತ ಸುಮ್ನೆ ಕೂಡ್ಬೇಡಿ ಗಂಡ್ಸರನ್ನ ನಂಬಬೇಡಿ ಶೌಚಾಲಯ ಕಟ್ಸು ಅಂತ ಹಿಡಿರಿ ಪಟ್ಟು" ಹೀಗೆ ಕಳೆದ ಒಂದುವರೆ ವರ್ಷದ ಹಿಂದೆ ಮಹಿಳಾ ಜನಸ್ತೋಮವನ್ನು ಉದ್ದೇಶಿಸಿ ಶೌಚಾಲಯದ ಮಹತ್ವವನ್ನು ಸಾರಿದ ಆ ಹಿಂದಿನ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಆ್ಯಂಟನಿ ಮೆಂಡೋನ್ಸಾ ಅವರ ಸಂದೇಶ ಹಾಗೂ ಪರಿಶ್ರಮ ಇಂದು ಸಾರ್ಥಕವಾಗಿದೆ. ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ಅನುಷ್ಠಾನದಲ್ಲಿ ಕೊಪ್ಪಳ ಮುಂಚೂಣಿಯಲ್ಲಿರುವ ಜಿಲ್ಲೆ, ಅಕ್ಟೋಬರ್ 2ರಂದು ಗಾಂಧಿ ಜಯಂತಿಯ ದಿನ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ ಪಡೆದುಕೊಂಡ ಈ ಆಂದೋಲನ ಜಿಲ್ಲೆಯ ಎಲ್ಲಾ 134 ಗ್ರಾಮ ಪಂಚಾಯಿತಿಗಳಲ್ಲೂ ಅನುಷ್ಠಾನವಾಗುತ್ತಿದೆ. ಕಳೆದ 2009ರಲ್ಲಿ ಜಿಲ್ಲೆಯ ಗಂಗಾವತಿ ತಾಲೂಕಿನ ವಡ್ರಹಟ್ಟಿ ಗ್ರಾಮ ಪಂಚಾಯಿತಿಯು ನಿರ್ಮಲ ಗ್ರಾಮ ಪುರಸ್ಕಾರ





ಪಡೆಯುವುದರೊಂದಿಗೆ ಈ ಭಾಗದಲ್ಲಿ ನೈರ್ಮಲ್ಯ ಪುರಸ್ಕಾರದ ಖಾತೆ ಆರಂಭವಾಯಿತು. 2009-10ನೇ ಸಾಲಿನಲ್ಲಿಯೂ ಕೂಡ 21 ಗ್ರಾಮ ಪಂಚಾಯಿತಿಗಳು ನಿರ್ಮಲ ಗ್ರಾಮ ಪುರಸ್ಕಾರವನ್ನು ಪಡೆಯುವ ಮೂಲಕ ಜಿಲ್ಲೆಯ ಹಿರಿಮೆಯನ್ನು ಹೆಚ್ಚಿಸಿವೆ. ಈ ಪುರಸ್ಕಾರ ಪಡೆದ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲೂ ವೈಯಕ್ತಿಕ ಶೌಚಾಯ, ಅಂಗನವಾಡಿ, ಶಾಲಾ ಶೌಚಾಲಯಗಳು ಹಾಗೂ ಸಾಮೂಹಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿ ಶೇ 100ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ. ಈ ಸಾಧನೆಯ ಹಿಂದೆ ಗ್ರಾಮೀಣ ಜನಸಮುದಾಯ, ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಪಾತ್ರವಿದೆ.

ಶೌಚಕ್ಕಾಗಿ ಬಯಲನ್ನೇ ಆಶ್ರಯಸಿದ್ದ ಕೊಪ್ಪಳ ಜಿಲ್ಲೆಯಲ್ಲಿನ ಹಲವಾರು ಗ್ರಾಮ ಪಂಚಾಯಿತಿಗಳ ಜನರು ಇಂದು ಶೌಚಾಲಯ ಉಪಯೋಗಿಸಿ ಸ್ವಾಭಿಮಾನ ಮತ್ತು ಮಾನ ಮರ್ಯಾದೆಯನ್ನು ಕಾಪಾಡಿಕೊಳ್ಳುವುದರ ಜತೆಗೆ ಜಿಲ್ಲೆಯ ಹಿರಿಮೆಯನ್ನು ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಮೆರಗು ಆಗುವಂತೆ ಮಾಡಿದ್ದಾರೆ. ಆರಂಭದಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡು ಬಳಸಲು ಹಿಂಜರಿಯುತ್ತಿದ್ದ ಈ ಭಾಗದ ಜನತೆಗೆ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಪದೇ ಪದೇ ಶೌಚಾಲಯದ ಮಹತ್ವ ಸಾರಿ ಹೌದಪ್ಪ ನಾವೂ ಸಹ ಶೌಚಾಲಯ ಕಟ್ಟಿಕೊಂಡು ನಮ್ಮ ಮನೆ ಹೆಣ್ಣು ಮಕ್ಕಳ ಮಾನ ಮರ್ಯಾದೆ ಕಾಪಾಡಬೇಕು ನಮ್ಮ ಮಕ್ಕಳ ಮುಂದಿನ ಭವಿಷ್ಯ ಉತ್ತಮ ಪಡಿಸಬೇಕು ಎಂಬ ಧೈಯದೊಂದಿಗೆ ಸರ್ಕಾರ ನೀಡುವ ಪ್ರೋತ್ಸಹ ಧನವನ್ನು ನಂಬದೇ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡು ಬಳಸಲು ಪ್ರಯತ್ನ ಮಾಡಿದರು.



ತಮ್ಮ ನೆರೆ ಹೊರೆಯ ಗ್ರಾಮಗಳ ಜನರು ಶೌಚಾಲಯ ನಿರ್ಮಾಣ ಮಾಡಿಕೊಂಡು ಬಳಸುವುದನ್ನು ನೋಡಿದ ಇತರೆ ಗ್ರಾಮಗಳ ಜನರು ಆರೋಗ್ಯಕರ ಸಮಾಜ ನಿರ್ಮಾಣವಾಗಬೇಕಾದರೆ ಮೊದಲು ನಮ್ಮ ಸುತ್ತ ಮುತ್ತಲಿನ ಪರಿಸರ ಸ್ವಚ್ಛವಾಗಿರಬೇಕು ಈ ಕಾರ್ಯದಲ್ಲಿ ಸಮುದಾಯ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಹೀಗಾದಾಗ ಮಾತ್ರ ನಮ್ಮ ಗ್ರಾಮ ಸ್ವಚ್ಛ ಮತ್ತು ಆರೋಗ್ಯವಾಗಿರಲು ಸಾಧ್ಯವಾಗುತ್ತದೆ.

ನಮ್ಮ ಗ್ರಾಮ ಪಂಚಾಯಿತಿಯನ್ನು ನಾವೇ ಶುಚಿಯಾಗಿಡಬೇಕು ಎಂಬ ಮಹಾದಾಸೆಯಿಂದ ಪಂಚಾಯಿತಿ ಜನಪ್ರತಿನಿಧಿಗಳು, ಇಲ್ಲಿನ ಸಮುದಾಯ, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಅಂಗನವಾಡಿ ಆಶಾ ಕಾರ್ಯಕರ್ತೆಯರು, ಯುವ ಸಮುದಾಯ ಮತ್ತು ಸ್ವಯಂ ಸೇವಾ ಸಂಘಗಳು, ಸ್ತ್ರೀಶಕ್ತಿ, ಸ್ವಸಹಾಯ ಸಂಘಗಳು ಪಣತೊಟ್ಟು ಹಗಲಿರುಳು ಕಾಳಜಿ ವಹಿಸಿ ಇಡೀ ಗ್ರಾಮ ಪಂಚಾಯಿತಿಗಳನ್ನು ಸಂಪೂರ್ಣ ನೈರ್ಮಲ್ಯದೆಡೆಗೆ ಕೊಂಡ್ಯೊಯ್ದಿದ್ದಾರೆ.

ಇಡೀ ಗ್ರಾಮವನ್ನು ಸಂಪೂರ್ಣ ನೈರ್ಮಲ್ಯದೆಡೆಗೆ ತರಲು ಇಲ್ಲಿನ ಜನ ಸಮುದಾಯ, ಸ್ಥಳೀಯ ಸರ್ಕಾರದ ಪ್ರತಿನಿಧಿಗಳು, ಶಾಲಾ-ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಸ್ತ್ರೀಶಕ್ತಿ ಸಂಘದ ಸದಸ್ಯರು ತಮ್ಮದೇ ಆದ ಪಾತ್ರವಹಿಸಿ ಕಾರ್ಯ ನಿರ್ವಹಿಸಿವೆ. ಆರಂಭದಲ್ಲಿ ಜಿಲ್ಲೆಯಲ್ಲಿ ಶೌಚಾಲಯವಿಲ್ಲದ ಅಂಗನವಾಡಿ ಮತ್ತು ಶಾಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಲು ಜಿಲ್ಲಾ ಪಂಚಾಯಿತಿವತಿಯಿಂದ ಅನುದಾನ ಬಿಡುಗಡೆಗೊಳಿಸಲಾಯಿತು. ಈ ದಿಸೆಯಲ್ಲಿ ಶೌಚಾಲಯ ಕಾರ್ಯ ಹಮ್ಮಿಕೊಂಡು ಶಾಲೆಗಳಲ್ಲಿ ಬಾಲಕರಿಗೆ ಹಾಗೂ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲಾಯಿತು. ಮೊದಲ ಹಂತದಲ್ಲಿ ಆಯ್ದುಕೊಂಡ ಗ್ರಾಮ ಪಂಚಾಯಿತಿಗಳಲ್ಲಿ ಮನೆ ನಿರ್ಮಾಣ ಮಾಡುವಾಗ ಆರಂಭದಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ, ಲಂಬಾಣಿ ತಾಂಡ, ಕಾಲೋನಿಗಳಲ್ಲಿ ಸಂಪೂರ್ಣ ಸ್ವಚ್ಛತೆಯ ಉದ್ದೇಶಗಳನ್ನು ಮನದಟ್ಟು ಮಾಡಲಾಯಿತು ಹಾಗೂ ಬಯಲು ಮಲವಿಸರ್ಜನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಲಾಯಿತು.





ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನಕ್ಕಾಗಿ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ದಿನ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಜೊತೆಗೆ ಸ್ತ್ರೀ ಶಕ್ತಿ ಸಂಘಗಳ ವತಿಯಿಂದ ಆಯ್ದ ಗ್ರಾಮಗಳಲ್ಲಿ ಕೌಟುಂಬಿಕ ಶೌಚಾಲಯ ನಿರ್ಮಾಣ ಮತ್ತು ಅದರ ಮಹತ್ವದ ಬಗ್ಗೆ ಜನರಿಗೆ ತರಬೇತಿಯನ್ನು ನೀಡಲಾಯಿತು. ಜಿಲ್ಲಾ ನೆರವು ಘಟಕ ಹಾಗೂ ಸ್ವಯಂ ಸೇವಾ ಸಂಘಗಳ ಮೂಲಕ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಜನರಲ್ಲಿ ಬಯಲು ಶೌಚ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಜಿಲ್ಲೆಯ ವಿಧಾನ ಸಭಾ ಸದಸ್ಯರು, ಎಲ್ಲಾ ಗ್ರಾಮ/ತಾಲೂಕು/ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಸಂಘ ಸಂಸ್ಥೆಗಳು, ಸ್ವಯಂಸೇವಾ ಕಾರ್ಯಕರ್ತರು ಹಾಗೂ ಸಾರ್ವಜನಿಕರ ಸಹಭಾಗಿತ್ವವನ್ನು ಪಡೆದು ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಮತ್ತಷ್ಟು ಯಶಸ್ವಿಯಾಗಿ ಮುಂದೆ ಸಾಗಲು ಸಹಕಾರಿಯಾಯಿತು.

ಸದಾ ಒಂದಿಲ್ಲೊಂದು ಸುದ್ದಿಯಲ್ಲಿರುವ ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗ ತಾಲೂಕುಗಳಲ್ಲಿ ನೈರ್ಮಲ್ಯ ಸಾಧನೆಯಲ್ಲಿ ಮುಂಚೂಣಿಯಲ್ಲಿದೆ ಈ ಭಾರಿ ಗಂಗಾವತಿ ತಾಲೂಕಿನಲ್ಲಿ ಶ್ರೀರಾಮನಗರ, ಢಾಣಾಪುರ, ಕಾರಟಗಿ, ಚೇಳೂರು, ಚಿಕ್ಕಜಂತಕಲ್, ಮರಹಳ್ಳಿ, ಕೊಪ್ಪಳ ತಾಲೂಕಿನಲ್ಲಿ ಬಂಡಿ ಹರ್ಲಾಪುರ, ಅಳವಂಡಿ, ಹುಲಗಿ ಗ್ರಾಮ ಪಂಚಾಯಿತಿಗಳು, ಯಲಬುರ್ಗ ತಾಲೂಕಿನಲ್ಲಿ ಗುನ್ನಾಳ, ಬೇಣಕಲ್, ಬಂಡಿ, ಗಾಣದಾಳ, ಹಿರೇಬಿಡನಾಳ, ಮುದೋಳ, ಮಂಗಳೂರು ಹಾಗೂ ಯಲಬುರ್ಗಾ ತಾಲೂಕಿನಲ್ಲಿ ಹನುಮಸಾಗರ, ಹನುಮನಾಳ, ದೋಟಿಹಾಳ, ಜಾಗೀರಗುಡದೂರ ಮತ್ತು ತಾವರಗೇರಾ ಗ್ರಾಮ ಪಂಚಾಯಿತಿಗಳು ನಿರ್ಮಲ ಗ್ರಾಮ ರಾಷ್ಟ್ರೀಯ ಪುರಸ್ಕಾರವನ್ನು ಪಡೆದಿವೆ. ಈ ಪಂಚಾಯಿತಿಗಳಲ್ಲೀಗ ಬಯಲು ಶೌಚಕ್ಕೆ ಬ್ರೇಕ್ ಹಾಕುವ ಮೂಲಕ ಪರಿಸರ ಸ್ನೇಹಿಯಾಗಿ ಜನಜನಿತವಾಗಿವೆ. ಇಲ್ಲಿಗ ಪ್ರತಿ ಮನೆಯಲ್ಲೂ ಶೌಚಾಲಯಗಳಿವೆ. ಗಾಂಧೀಜಿಯ ಗ್ರಾಮ ಸುಧಾರಣೆ ಕನಸು ಇಲ್ಲಿ ನನಸಾಗಿದೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಸ್ಥರು ಪರಿಸರ ಕಾಳಜಿಯಿಂದ ಬಯಲು ಶೌಚವನ್ನು ತೊರೆದಿದ್ದಾರೆ. ಪ್ರತಿ ಮನೆ ಮುಂದೆಯು ಶೌಚಾಲಯಗಳು ಕಂಡುಬರುತ್ತಿವೆ.



ಕಳೆದ ಮೂರು ವರ್ಷಗಳಿಂದ ಈ ಪಂಚಾಯಿತಿಗಳು ಅತ್ಯಂತ ಕಾಳಜಿವಹಿಸಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಜಾರಿಗೊಳಿಸಿವೆ, ಪ್ರತಿವಾರ ಪಂಚಾಯಿತಿಯಲ್ಲಿ ಗ್ರಾಮ ಸಭೆಗಳನ್ನು ನಡೆಸುವ ಮೂಲಕ ಪ್ರತಿ ಪಂಚಾಯಿತಿ ಸದಸ್ಯರಿಗೆ ಈ ಬಗ್ಗೆ ಅರಿವು ಮೂಡಿಸುವುದರ ಜತೆಗೆ ಅವರುಗಳು ಆಯ್ಕೆಯಾಗಿರುವ ವಾರ್ಡ್‌ನ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಬಯಲು ಮಲವಿಸರ್ಜನೆಯನ್ನು ತಡೆಗಟ್ಟುವ ಕಾಯಕದಲ್ಲಿ ತೊಡಗಿದರು. ಹೀಗಾಗಿಯೇ ಇಂದು ಕೊಪ್ಪಳ ಜಿಲ್ಲೆಯಲ್ಲಿ 21 ಗ್ರಾಮ ಪಂಚಾತಿಯಿಗಳು ಬಯಲು ಶೌಚದಿಂದ ಮುಕ್ತಿ ಹೊಂದಿವೆ. ವೈಯಕ್ತಿಕ ಶೌಚಾಲಯವನ್ನು ಹೊಂದಿರದ ಕುಟುಂಬಗಳನ್ನು ಗುರುತಿಸಿ ಪಂಚಾಯಿತಿ ಸದಸ್ಯರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಗ್ರಾಮದ ಸ್ತ್ರೀಶಕ್ತಿ, ಸ್ವ-ಸಹಾಯ ಸಂಘದ ಸದಸ್ಯರು ಈ ಆಂದೋಲನ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮನೆ-ಮನೆಗೆ ಮುತ್ತಿಗೆ ಹಾಕಿ ಪ್ರತಿಯೊಬ್ಬರು ಶೌಚಾಲಯ ನಿರ್ಮಾಣ ಮಾಡಿಕೊಂಡು ಪ್ರತಿನಿತ್ಯ ಬಳಸುವಂತೆ ಮಾಡಿದ್ದಾರೆ.

ಇವರ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ಗ್ರಾಮ ಪಂಚಾಯಿತಿಗಳು, ವೈಯಕ್ತಿಕ ಶೌಚಾಲಯವನ್ನು ನಿರ್ಮಾಣ ಮಾಡಿಕೊಳ್ಳಲು ಮುಂದೆ ಬಂದ ಫಲಾನುಭವಿಗಳಿಗೆ ಅವರ ಮನೆಯ ಬಳಿಗೆ ಅಗತ್ಯವಿರುವ ಸಲಕರಣೆ ಮತ್ತು ಉಪಕರಣಗಳನ್ನು ಒದಗಿಸಿ ಪ್ರೋತ್ಸಾಹ ನೀಡಿದವು. ಇದರ ಜೊತೆಗೆ ಆರ್ಥಿಕವಾಗಿ ಹಿಂದುಳಿದಿರುವ ಎಪಿಎಲ್ ಕುಟುಂಬಗಳಿಗೂ ತನ್ನ ಅನುದಾನದಿಂದ ಸಹಾಯಧನವನ್ನು ನೀಡಿ ಪ್ರತಿಯೊಬ್ಬರು ಶೌಚಾಲಯವನ್ನು ನಿರ್ಮಾಣ ಮಾಡಿಕೊಳ್ಳುವಂತೆ ನೆರವು ನೀಡಿದ ಈ ಗ್ರಾಮ ಪಂಚಾಯಿತಿಗಳು ಸಂಪೂರ್ಣ ನೈರ್ಮಲ್ಯವನ್ನು ಉತ್ತೇಜಿಸುವ ಮೂಲಕ ಗ್ರಾಮೀಣ ಸ್ವಚ್ಛತೆಯ ಸಾಧನೆಗೆ ಕಾರಣವಾಗಿವೆ.

❑

ಸಂವಹನ ಮತ್ತು ಸಾಮರ್ಥ್ಯಾಭಿವೃದ್ಧಿ ಘಟಕ, ಕ. ಗ್ರಾ. ನೀ. ಸ. ನೈ. ಸಂಸ್ಥೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು - ೫೬೦ ೦೦೯.

# ಆರೋಗ್ಯವಂತರಾಗಿ ದೀರ್ಘಕಾಲ ಬಾಳಿ



ಡಾ. ಬಿ. ರಮಣರಾವ್ *

ಇಲ್ಲಿ ನೀಡಿರುವ ಕೆಲ ಸುಲಭ ಸಲಹೆಗಳನ್ನು ದಿನ ನಿತ್ಯದ ಜೀವನದಲ್ಲಿ ಅಳವಡಿಸಿಕೊಂಡರೆ ನೀವು ಆರೋಗ್ಯವಂತರಾಗಿ, ನಿಮ್ಮ ದೈಹಿಕ ಹಾಗೂ ಮಾನಸಿಕ ಚುರುಕುತನ ಉತ್ತಮ ಮಟ್ಟದಲ್ಲಿರುವುದಕ್ಕೆ ಸಹಾಯಕ.

ಸಾಕಷ್ಟು ನಿದ್ದೆ ದೊರಕಿಸಿಕೊಳ್ಳಿ, ಎಷ್ಟು ಅವಧಿಯವರೆಗೆ ನಿದ್ರಿಸುತ್ತೀರೆಂಬುದೂ ಮುಖ್ಯ. ಪುರುಷರಿಗೆ ಸಾಮಾನ್ಯವಾಗಿ ಎಂಟು ಗಂಟೆ ಹಾಗೂ ಮಹಿಳೆಯರಿಗೆ ಏಳು ಗಂಟೆಗಳ ನಿದ್ದೆ ಅಗತ್ಯ. ಮಲಗುವಾಗ ಕೆಲಸದ ಅಥವಾ ವಯಕ್ತಿಕ ಸಮಸ್ಯೆಗಳನ್ನು ನಿಮ್ಮೊಂದಿಗೆ ಕರೆದೊಯ್ಯಬೇಡಿ. ನಿದ್ದೆ ಬರದಿದ್ದರೆ ಇನ್ನೊಂದು ಕೋಣೆಗೆ ಹೋಗಿ ಏನಾದರೂ ಉಪಯುಕ್ತ ಕೆಲಸದಲ್ಲಿ ತೊಡಗಿಸಿಕೊಳ್ಳಿ.

ನಿಯಮಿತ ವೇಳೆಗಳಲ್ಲಿ ಆಹಾರ ಸೇವನೆಯ ರೂಢಿ ಇಟ್ಟುಕೊಳ್ಳಿ. ಬೆಳಗಿನ ಉಪಹಾರವನ್ನು ತಪ್ಪಿಸಬೇಡಿ. ಊಟದ ವೇಳೆಗಿಂತ ಮುಂಚೆ ಹಸಿವುಂಟಾದರೆ ಕರಿದ, ಉಪ್ಪು ಜಾಸ್ತಿ ಇರುವ ಅಥವಾ ಸಿಹಿಯಾಗಿರುವ ತಿಂಡಿಗಳನ್ನು ತಿನ್ನದೇ, ಹಸಿ ತರಕಾರಿ, ಹಣ್ಣು ಹೆಚ್ಚು ನಾರಿನಂಶವಿರುವ ಆಹಾರ ಮುಂತಾದವುಗಳ ಸೇವನೆ ಒಳ್ಳೆಯದು.

ತರಕಾರಿ ಮತ್ತು ಹಣ್ಣುಗಳ ಸೇವನೆಯಿಂದ, ಶರೀರಕ್ಕೆ ಹೆಚ್ಚಿನ ಪ್ರಮಾಣದ ಸಂಯುಕ್ತ ಘಟಕಗಳು ಒದಗುತ್ತವೆ. ಇವುಗಳಿಂದ ಶರೀರದಲ್ಲಿ ಚಯಾಪಚಯ ಕ್ರಿಯೆಯಿಂದ ಉತ್ಪನ್ನವಾಗುವ ಜೀವ ವಿಷಗಳು ಉಂಟು ಮಾಡುವ ಹಾನಿಯಿಂದ ರಕ್ಷಣೆ ಸಿಗುತ್ತದೆ.

> ತರಕಾರಿ ಮತ್ತು ಹಣ್ಣುಗಳ ಸೇವನೆಯಿಂದ, ಶರೀರಕ್ಕೆ ಹೆಚ್ಚಿನ ಪ್ರಮಾಣದ ಸಂಯುಕ್ತ ಘಟಕಗಳು ಒದಗುತ್ತವೆ.

ದೇಹ ತೂಕದ ಕಡೆಗೆ ಗಮನವಿರಲಿ, ಅಧಿಕ ದೇಹ ತೂಕ ಆಯುಸ್ಸನ್ನು ಕಡಿಮೆ ಮಾಡುತ್ತದೆ. ಅತಿಯಾದ ಸ್ಥೂಲಕಾಯ ಅನೇಕ ಶಾರೀರಿಕ ಮತ್ತು ಮಾನಸಿಕ ತೊಂದರೆಗಳಿಗೆ ಕಾರಣವಾಗುತ್ತದೆ. ನಿಮ್ಮ ದೈಹಿಕ ತೂಕ ಸರಿಯಾಗಿದ್ದರೆ ಅದೇ ಮಟ್ಟವನ್ನು ಉಳಿಸಿಕೊಳ್ಳಿ. ನಿಯಮಿತವಾಗಿ ವ್ಯಾಯಾಮ ಮಾಡುವುದರಿಂದ ಆರೋಗ್ಯ ಉತ್ತಮಗೊಳ್ಳುತ್ತದೆ.

ಅಧಿಕ ರಕ್ತದೊತ್ತಡ, ನಿದ್ರಾ ಹೀನತೆ, ಖಿನ್ನತೆ, ಆತಂಕ, ಮಧುಮೇಹ ಮುಂತಾದ ವೈದ್ಯಕೀಯ ಸಮಸ್ಯೆಗಳ ಪರಿಹಾರಕ್ಕೆ ವ್ಯಾಯಾಮ ಬಹು ಮುಖ್ಯ ಸೂತ್ರವಾಗಿದೆ. ತೂಕ ಇಳಿಸಲು, ಹೃದಯ ಸಂಬಂಧಿ ಕಾಯಿಲೆಗಳಿಂದ ರಕ್ಷಿಸಿಕೊಳ್ಳಲು ವ್ಯಾಯಾಮ ಅಗತ್ಯ.

ವೇಗದ ನಡಿಗೆ, ಈಜು, ಸೈಕಲ್ ಸವಾರಿ ಮುಂತಾದ ಚಟುವಟಿಕೆಗಳನ್ನು ದಿನವೂ 30 ನಿಮಿಷಗಳ ಕಾಲ ಮಾಡಿರಿ.

ಬೀಡಿ ಸಿಗರೇಟುಗಳ ಸೇವನೆ ನಿಲ್ಲಿಸಿ, ಅವು ನಿಮ್ಮ ಶರೀರಕ್ಕೆ ಹಾನಿಕರ. ಆಯುಸ್ಸನ್ನು ಕಡಿತಮಾಡುತ್ತವೆ. ರಕ್ತನಾಳಗಳು ಬಿರುಸಾಗಿ ಹೃದಯಾಘಾತಕ್ಕೆ ದಾರಿ ಮಾಡಿಕೊಡುತ್ತವೆ. ಪುಪ್ಪುಸದ ಕ್ಯಾನ್ಸರಿಗೂ ಇದೇ ಕಾರಣ. ಸಿಗರೇಟು ಸೇದುವವರ ಪಕ್ಕದಲ್ಲಿರುವುದೂ ಅಪಾಯಕಾರಿ.

ಸ್ನೇಹಿತರನ್ನು, ಸಂಬಂಧಿಗಳನ್ನು ಆಗಾಗ ಭೇಟಿ ಮಾಡಿ ಅವರ ಸಂಪರ್ಕ ಬೆಳೆಸಿ. ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಹಸನ್ಮುಖಿಯಾಗಿರಿ. ಇವೆಲ್ಲ ದೀರ್ಘಕಾಲ ಆರೋಗ್ಯವಂತರಾಗಿ ಬಾಳಲು ರಹದಾರಿ.

❑

* ಕನ್ಸಲ್ಟಿಂಗ್ ಫಿಸಿಷಿಯನ್ ಅಂಡ್ ಕಾರ್ಡಿಯಾಲಾಜಿಸ್ಟ್, ನಂ. 94 /ಹೆಚ್. 9ನೇ ಕ್ರಾಸ್, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು – 80.

# ಪರಿಸರ ನಿರ್ವಹಣ ಮಾರ್ಗಸೂಚಿ

*(ಜೂನ್ 2011ರ ಸಂಚಿಕೆಯಿಂದ ಮುಂದುವರೆದಿದೆ)*

## VI ಕೊಳವೆ – ಬಾವಿಗಳು – ನೀರಾವರಿ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
| --- | --- |
| • ಅಂತರ್ಜಲದ ಮಟ್ಟ ಕಡಿಮೆಯಾಗುವುದು. | • ಯಂತ್ರೋಪಕರಣಗಳಿಂದ ಕೊಳವೆ ಬಾವಿಗಳನ್ನು ಕೊರೆಯುವುದು ಮತ್ತು ಗಣಿ ಮತ್ತು ಭೂ- ವಿಜ್ಞಾನ ಇಲಾಖೆಯಿಂದ ಅನುಮತಿ ಮತ್ತು ಮಾರ್ಗದರ್ಶನ ಪಡೆಯುವುದು.<br>• ಎರಡು ಕೊಳವೆ ಬಾವಿಗಳ ನಡುವಿನ ಅಂತರ ಕನಿಷ್ಟ 200 ಮೀಟರ್‌ಗಳಿಗಿಂತ ಹೆಚ್ಚಾಗಿರಬೇಕು.<br>• ಉತ್ಕೃಷ್ಟ ನೀರಾವರಿ ತಂತ್ರಜ್ಞಾನವನ್ನು ಬಳಸಿ ಕೊಳ್ಳಲು (ಉದಾ: Sprinkler or Drip irrigation ಅಥವಾ ಹನಿ ನೀರಾವರಿ) ಕೃಷಿ ಇಲಾಖೆ ಅಥವಾ ಕೃಷಿ ವಿಜ್ಞಾನ ಕೇಂದ್ರಗಳಿಂದ ತಾಂತ್ರಿಕ ಸಹಾಯವನ್ನು ಪಡೆಯುವುದು. |
| • ಭೂಮಿಯ ಅವಶ್ಯಕತೆ. | • ಭೂಮಿಯು ಸಾಧ್ಯವಾದ ಮಟ್ಟಿಗೆ ಸಮುದಾಯ, ಸರ್ಕಾರ ಮತ್ತು ಗ್ರಾಮ ಪಂಚಾಯತಿಗಳ ಪ್ರತಿಬಂಧಕ ಅಥವಾ ಯಾವುದೇ ಅಡಚಣೆಗಳಿಂದ ಮುಕ್ತವಾಗಿರಬೇಕು. ಇಲ್ಲವಾದಲ್ಲಿ ಯೋಗ್ಯ ದರದಲ್ಲಿ ಭೂಮಿಯನ್ನು ಕೊಂಡುಕೊಳ್ಳಬೇಕು. ಸ್ವಯಂಪ್ರೇರಣೆಯ (ಸೂಕ್ತ ಸುರಕ್ಷತೆಯುಳ್ಳ ಸ್ಥಳವಾಗಿರಬೇಕು) ಮೂಲಕ ಪಡೆಯಬಹುದು ಅಥವಾ ನೈಜವಾಗಿ ದೊರಕುವ ಲಾಭದ ಹಂಚಿಕೆಯನ್ನು ಖಾಸಗಿ ಒಡೆತನ ಹೊಂದಿರುವವರ ಜೊತೆ ಮಾಡಿಕೊಳ್ಳಬಹುದು. |

* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಎಂ.ಎಸ್.ಐ.ಎಲ್. ಕಟ್ಟಡ, 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

## VII ಶೌಚಾಲಯಗಳು – ನಿರ್ಮಾಣ, ರಿಪೇರಿ ಮತ್ತು ನಿರ್ವಹಣೆ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ಅಸಮರ್ಪಕ ಪ್ರದೇಶದ ಆಯ್ಕೆಯಿಂದಾಗಿ ಸಮೀಪದ ನೀರಿನ ಮೂಲಗಳು ಕಲುಷಿತ ಗೊಳೊಳಿಸುವುದು / ಮಾಲಿನ್ಯಗೊಳಿಸುವುದು. | • ನೀರಿನ ಮೂಲಗಳಿಂದ ಕನಿಷ್ಟ 15 ಮೀಟರ್ ದೂರದಲ್ಲಿರುವ ಪ್ರದೇಶದಲ್ಲಿ ಶೌಚಾಲಯಗಳನ್ನು ನಿರ್ಮಿಸಬೇಕು. ನಿವೇಶನದ ಕಾರಣದಿಂದಾಗಿ ಇದು ಸಾಧ್ಯವಾಗದಿದ್ದಲ್ಲಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗಳಿಂದ ತಾಂತ್ರಿಕ ಸಹಾಯವನ್ನು ಪಡೆದು, ಸ್ಥಳವನ್ನು ಗುರುತಿಸುವುದು ಮತ್ತು ಅವಶ್ಯಕ ರಕ್ಷಣೋಪಾಯಗಳನ್ನು ಒದಗಿಸಬೇಕು.<br>• ಒಂದು ವೇಳೆ ಶೌಚ ಗುಂಡಿಗಳು ಕಾಲುದಾರಿ / ರಸ್ತೆಯ ಕೆಳಗೆ ಆಥವಾ ನೀರು ಸರಬರಾಜಿನ ಮುಖ್ಯ ಪೈಪಿನ 3 ಮೀಟರ್‌ನೊಳಗಿದ್ದರೆ, ಒಳಹರಿವಿನ ಪೈಪು ಮತ್ತು ಗುಂಡಿಗೆ ಸಂಪರ್ಕಿಸುವ ಪೈಪಿನ ಮಟ್ಟವು ಭೂಮಿಯ ಮೇಲ್ಮೈಯಿಂದ 1 ಮೀಟರ್ ಗಿಂತ ಕೆಳಗಿರಬೇಕು. |
| • ಶೌಚಾಲಯದ ಹೊರಗೆ ಅಥವಾ ಒಳಗೆ ನೀರಿನ ಕೊರತೆಯಿಂದಾಗಿ ಸೌಲಭ್ಯದ ಬಳಕೆಯು ಅತ್ಯಂತ ಕಡಿಮೆಯಾಗಿರುವುದು. | • ಶೌಚಾಲಯ ಸೌಲಭ್ಯವಿರುವ ಸ್ಥಳದಲ್ಲಿ ನೀರು ದೊರಕುವ ಬಗ್ಗೆ ದೃಢಪಡಿಸಿಕೊಳ್ಳುವುದು.<br>• ಶೌಚಾಲಯಗಳ ಬಳಕೆಗಳನ್ನು ಉತ್ತೇಜಿಸುವುದು. |
| • ಭೂ ಸ್ವಾಧೀನದ ಅವಶ್ಯಕತೆ. | • ಸಾಧ್ಯವಾದ ಮಟ್ಟಿಗೆ ಗ್ರಾಮ ಪಂಚಾಯತಿ ಭೂಮಿ/ಸಮುದಾಯದ ಪ್ರತಿಬಂಧಕವಿಲ್ಲದ ಅಥವಾ ಯಾವುದೇ ಅಡಚಣೆ ಇಲ್ಲದ ಪ್ರದೇಶದಲ್ಲಿ ಈ ಸೌಲಭ್ಯವನ್ನು ಒದಗಿಸಬೇಕು. ಸ್ವಯಂ ಪ್ರೇರಣೆಯ ಮೂಲಕ ಸ್ಥಳವನ್ನು ಪಡೆದುಕೊಂಡಿದ್ದಲ್ಲಿ ಅದು ಸೂಕ್ತ ಸುರಕ್ಷಿತ ಸ್ಥಳವಾಗಿರಬೇಕು.ಆಥವಾ ಆ ಸ್ಥಳವನ್ನು ಯೋಗ್ಯ ಬೆಲೆಯಲ್ಲಿ ಖರೀದಿಸಬೇಕು. |
| • ಬಾಲ ಕಾರ್ಮಿಕರ ಪಾಲುಗೊಳ್ಳುವಿಕೆ. | • ಬಾಲ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳಬಾರದು. |

| | |
|---|---|
| • ಸ್ಥಳದ ಆಯ್ಕೆಯು ಸಮುದಾಯದ ಗುಂಪುಗಳಲ್ಲಿ ವಿವಾದಕ್ಕೆ ಕಾರಣವಾಗಬಹುದು. | • ಸಮಾನತೆ ತತ್ವವನ್ನು ಆಧಾರಿಸಿ ಕಡು ಬಡವರು ಮತ್ತು ಬುಡಕಟ್ಟುಗಳ ಜನರು ವಾಸಿಸುವ ಜನವಸತಿಗಳಿಗೆ (hamlets) ಆದ್ಯತೆಯ ಆಧಾರದ ಮೇಲೆ ಹೊಸ ಮೂಲಭೂತ ಸೌಲಭ್ಯಗಳುಳ್ಳ ಅವಕಾಶಗಳನ್ನು ಒದಗಿಸಿಕೊಡುವುದು. |

## VIII ಭೂಮಿಯ ಅಭಿವೃದ್ಧಿ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • 1. ತಾಂತ್ರಿಕ ಸೌಲಭ್ಯದ ಕೊರತೆಯು ಕಳಪೆ ಮಟ್ಟದ ಯೋಜನೆ ಮತ್ತು ಕಾರ್ಯಾಚರಣೆಗೆ ಎಡೆಮಾಡುವುದು. | • ಕೆಳ ದರ್ಜೆಯ ಭೂಮಿಯ ವಿಧಗಳಿಗೆ ಸೂಕ್ತವಾದ ಭೂಮಿಯ ಉಪಚಾರದ ಕ್ರಮಗಳನ್ನು ಆಯ್ದುಕೊಳ್ಳಬೇಕು.<br>• ಕೃಷಿ ಮತ್ತು ಅರಣ್ಯ ಇಲಾಖೆಯಿಂದ ತಾಂತ್ರಿಕ ಸಹಾಯವನ್ನು ಪಡೆಯಬೇಕು. |

## IX ಕೃಷಿ, ಸಾಮಾಜಿಕ ಅರಣ್ಯ ಮತ್ತು ನರ್ಸರಿ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • 1. ಸಂಕಿರಣ ತಳಿಗಳ ಒಂದೇ ಜಾತಿಯ ಸಸಿಗಳನ್ನು ಬೆಳೆಸುವುದು. | • ಕೃಷಿ ವಿಜ್ಞಾನ ಕೇಂದ್ರ, ಜಿಲ್ಲಾ ತೋಟಗಾರಿಕಾ ಅಧಿಕಾರಿ ಆಥವಾ ವಿಭಾಗೀಯ ಅರಣ್ಯ ಅದಿಕಾರಿಗಳಿಂದ ತಾಂತ್ರಿಕ ಸಹಾಯವನ್ನು ಪಡೆದುಕೊಂಡು ಸೂಕ್ತ ಸಸ್ಯವರ್ಗಗಳನ್ನು ಆಯ್ಕೆ ಮಾಡುವುದು. |
| • ಮಿತಿಮೀರಿದ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಾಲಿನ್ಯಕ್ಕೆ ಕಾರಣವಾಗುವುದು. | • ರಾಸಾಯನಿಕ ಗೊಬ್ಬರಗಳನ್ನು ಸಮಯಕ್ಕೆ ಸರಿಯಾಗಿ ಬಳಸುವುದು. ಕೀಟಗಳ ನಿಯಂತ್ರಣಕ್ಕೆ ಸಮಗ್ರವಾಗಿ ಕೀಟಗಳ ನಿರ್ವಹಣ ತಂತ್ರ ಬಳಸಬೇಕು. |
| • .ಅಪಾಯಕಾರಿಯಾದ ರಾಸಾಯನಿಕ ಕೀಟ ನಾಶಕಗಳ ಬಳಕೆಯಿಂದಾಗಿ ಮಾನವ ಮತ್ತು ಪರಿಸರದ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗುವುದು. | • ಅಪಾಯಕಾರಿಯಾದ ಕೀಟ ನಾಶಕಗಳ ಬಳಕೆಯನ್ನು ತಪ್ಪಿಸುವುದು (WHO classes 1a, 1b, and 11)<br>• ಕೀಟನಾಶಕಗಳನ್ನು ಬಳಸುವಂತಹ ಸಂದರ್ಭದಲ್ಲಿ ಸುರಕ್ಷಿತವಾದ ಉಪಕರಣಗಳನ್ನು ಬಳಸುವುದು. |

(ಮುಂದುವರೆಯುತ್ತದೆ)

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/83/ಗ್ರಾಪಂಕಾ/2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 07–06–2011

## ಸುತ್ತೋಲೆ

**ವಿಷಯ :** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಒಂದು ಗ್ರಾಮ ಪಂಚಾಯತಿಯಿಂದ ಮತ್ತೊಂದು ಗ್ರಾಮ ಪಂಚಾಯತಿಗೆ ವರ್ಗಾವಣೆ/ನಿಯೋಜನೆ/ಅನ್ಯ ಕಾರ್ಯನಿಮಿತ್ತದ ಆಧಾರದ ಮೇಲೆ ನೇಮಿಸುತ್ತಿರುವ ಬಗ್ಗೆ.

**ಉಲ್ಲೇಖ :**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/395/ ಗ್ರಾಪಂಕಾ/2008, ದಿನಾಂಕ: 21–11–2008.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/338/ ಗ್ರಾಪಂಕಾ/2010, ದಿನಾಂಕ: 14–12–2010.

* * *

ರಾಜ್ಯದ ಗ್ರಾಮ ಪಂಚಾಯಿತಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಹಾಗೂ ಆರ್ಥಿಕ ಹೊಣೆಗಾರಿಕೆ ನಿಭಾಯಿಸುವ ಸಲುವಾಗಿ ಸೂಕ್ತ ಆಡಳಿತಾತ್ಮಕ ಸಾಮರ್ಥ್ಯ ಒದಗಿಸುವ ಸಲುವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಸೃಜಿಸಲಾಗಿದ್ದು, 2009–10ನೇ ಸಾಲಿನಲ್ಲಿ 2500 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲಾಗಿದೆ. ಇದಲ್ಲದೇ 453 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಗಳನ್ನು ಸಹ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲಾಗಿದೆ.

2. ಸರ್ಕಾರಿ ನೌಕರರ ವರ್ಗಾವಣಾ ಮಾರ್ಗಸೂಚಿಗಳ ಅನುಸಾರ ಗ್ರೂಪ್ ಸಿ ನೌಕರರು ಒಂದು ಸ್ಥಳದಲ್ಲಿ ಕನಿಷ್ಟ 5 ವರ್ಷಗಳ ಸೇವೆ ಸಲ್ಲಿಸಬೇಕೆಂಬ ನಿಬಂಧನೆಯಿರುತ್ತದೆ. 2009–10ನೇ ಸಾಲಿನಲ್ಲಿ ನೇಮಕಗೊಂಡ 2500 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಆದೇಶದಲ್ಲಿ ಅವರು ನೇಮಕಾತಿ ಹೊಂದಿದ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಟ 3 ವರ್ಷಗಳ ಸೇವೆ ಸಲ್ಲಿಸಬೇಕೆಂಬ ನಿಬಂಧನೆ ವಿಧಿಸಲಾಗಿದೆ. ಮತ್ತು ಕೌನ್ಸೆಲಿಂಗ್ ಮುಖಾಂತರ ಅವರು ಆಯ್ಕೆ ಮಾಡಿದ ಗ್ರಾಮ ಪಂಚಾಯಿತಿಗಳಿಗೇ ಅವರುಗಳ ನೇಮಕಾತಿ ಮಾಡಲಾಗಿದೆ.

3. ಹೀಗಿದ್ದರೂ ಸಹ ಹಲವಾರು ಜಿಲ್ಲಾ ಪಂಚಾಯಿತಿಗಳಲ್ಲಿ ಈ ನೌಕರರನ್ನು ಹಲವಾರು ಕಾರಣ ನೀಡಿ ಒಂದು ಗ್ರಾಮ ಪಂಚಾಯಿತಿಯಿಂದ ಮತ್ತೊಂದು ಗ್ರಾಮ ಪಂಚಾಯಿತಿಗೆ ಅಥವಾ ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳಲ್ಲಿನ ಇತರೆ ಹುದ್ದೆಗಳಿಗೆ ಹಾಗೂ ಇತರೆ ಯೋಜನೆಗಳ ಹುದ್ದೆಗಳಿಗೆ ಆಂತರಿಕವಾಗಿ ನಿಯೋಜನೆ/ಅನ್ಯ ಸೇವೆ/ಕಾರ್ಯ ವ್ಯವಸ್ಥೆ ಇತ್ಯಾದಿ ನಾಮಾಂಕಿತದ ಅಡಿಯಲ್ಲಿ ಅವರುಗಳನ್ನು ನೇಮಕಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಇಂತಹ ಕ್ರಮವು ಸರ್ಕಾರದ ವರ್ಗಾವಣಾ ನೀತಿಗೆ ವಿರುದ್ಧವಾಗಿರುವುದರಿಂದ ದಿನಾಂಕ : 14–12–2010 ರ ಸರ್ಕಾರದ ಸುತ್ತೋಲೆಯಲ್ಲಿ ಇಂತಹ ನಿಯೋಜನೆಗಳನ್ನು ರದ್ದುಪಡಿಸುವಂತೆ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹಾಗಿದ್ದರೂ ಸಹ ಹಲವಾರು ಜಿಲ್ಲಾ ಪಂಚಾಯಿತಿಗಳಲ್ಲಿ ಈ ನಿಯೋಜನೆಗಳನ್ನು ರದ್ದುಪಡಿಸದೆ ಈಗಲೂ ಸಹ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿಯೂ ಸಹ ಮತ್ತಷ್ಟು ನಿಯೋಜನೆಗಳನ್ನು ಮಾಡುತ್ತಿರುವುದು ಕಂಡು ಬಂದಿರುತ್ತದೆ.

4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ನಿಯೋಜನೆ/ವರ್ಗಾವಣೆ ಮತ್ತು ಅಂತರ್ ಜಿಲ್ಲಾ ವರ್ಗಾವಣೆಗೆ ಜಿಲ್ಲಾ ಪಂಚಾಯತ್‌ನಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಮತ್ತು ಸರ್ಕಾರದ ಹಂತದಲ್ಲಿ ಸಲ್ಲಿಸಲಾದ ಮನವಿಗಳನ್ನು ಪರಿಗಣಿಸಲು ಅವಕಾಶವಿಲ್ಲದಿರುವುದರಿಂದ ಇಂತಹ ಎಲ್ಲಾ ಕೋರಿಕೆಗಳನ್ನು ಸರ್ಕಾರದ ಹಂತದಲ್ಲಿ ತಿರಸ್ಕರಿಸಲಾಗಿದೆ.

5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇರ ನೇಮಕಾತಿಗಾಗಿ ಕರೆದಿದ್ದ ಅರ್ಜಿ ನಮೂನೆಯಲ್ಲಿ ಅವರು ಆಯ್ಕೆ ಹೊಂದಲು ಬಯಸಿರುವ ಯಾವುದಾದರೂ ಒಂದು ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡಿ ಅರ್ಜಿ ಸಲ್ಲಿಸುವಂತೆ ಮತ್ತು ಆಯ್ಕೆಯು ಆ ಜಿಲ್ಲೆಗೆ ಮಾತ್ರ ಸೀಮಿತವಾಗಿರತಕ್ಕದ್ದೆಂದು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) ಪಂಚಾಯಿತಿ ಅಭಿವೃದ್ಧಿ

ಅಧಿಕಾರಿಗಳ ನೇಮಕಾತಿ (ವಿಶೇಷ) (ನೇಮಕಾತಿ) ನಿಯಮಗಳು, 2009 ರ ನಿಯಮ 5(4) ರಲ್ಲಿ ಸ್ಪಷ್ಟವಾಗಿ ನಿರ್ದಿಷ್ಟಪಡಿಸಿದೆ. ಅದರಂತೆ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ವರ್ಗಾಯಿಸಲು/ನಿಯೋಜಿಸಲು/ಕಾರ್ಯ ವ್ಯವಸ್ಥೆ ಮೇಲೆ ನೇಮಿಸಲು ಅವಕಾಶವಿರುವುದಿಲ್ಲ. ಮತ್ತು ಮೇಲೆ ಈಗಾಗಲೇ ತಿಳಿಸಿದಂತೆ ಅವರ ನೇಮಕಾತಿ ಆದೇಶದಲ್ಲಿ ಕೌನ್ಸೆಲಿಂಗ್ ಮುಖಾಂತರ ಆಯ್ಕೆಗೊಂಡು, ನೇಮಕಾತಿ ಹೊಂದಿದ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ 3 ವರ್ಷಗಳ ಸೇವೆ ಸಲ್ಲಿಸಬೇಕೆಂಬ ನಿಬಂಧನೆ ಇರುವುದರಿಂದ ಜಿಲ್ಲೆಯೊಳಗೂ ಸಹ ಅವರುಗಳ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ.

6. ಹೊಸದಾಗಿ ನೇರ ನೇಮಕಾತಿ ಹೊಂದಿದ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ನೇಮಕಾತಿ ಹೊಂದಿದ ಜಿಲ್ಲೆಯಲ್ಲಿಯೇ 2 ವರ್ಷಗಳ ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಘೋಷಣೆಯಾಗುವವರೆಗೆ ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆ ಹೊಂದಲು ಅವಕಾಶವಿರುವುದಿಲ್ಲ. ಅನಂತರ ಮಾತ್ರ ಅವರ ಅಂತರ ಜಿಲ್ಲಾ ವರ್ಗಾವಣೆ ಕೋರಿಕೆಯನ್ನು ನಿಯಮಗಳ ಅನುಸಾರ ಪರಿಶೀಲಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಈ ನೌಕರರನ್ನು ಸಹ ನಿಯೋಜನೆ/ಅನ್ಯ ಸೇವೆ/ಕಾರ್ಯ ವ್ಯವಸ್ಥೆಯ ಮೇಲೆ ಬೇರೆ ಜಿಲ್ಲೆಗಳಿಗೆ ನೇಮಿಸಲು ಅವಕಾಶವಿರುವುದಿಲ್ಲ.

7. ಹೀಗಿದ್ದರೂ ಸಹ ಹಲವಾರು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರದ ವರ್ಗಾವಣಾ ನೀತಿ ಹಾಗೂ ದಿನಾಂಕ : 14–12–2010 ರ ಸುತ್ತೋಲೆಯಲ್ಲಿನ ಸೂಚನೆಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ, ತಮ್ಮ ಮನಬಂದಂತೆ ನಿಯೋಜನೆ/ಅನ್ಯ ಕಾರ್ಯನಿಮಿತ್ತ, ಇತ್ಯಾದಿ ಹೆಸರಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಒಂದು ಗ್ರಾಮ ಪಂಚಾಯಿತಿಯಿಂದ ಮತ್ತೊಂದು ಗ್ರಾಮ ಪಂಚಾಯಿತಿಗೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಹುದ್ದೆಗಳಿಗೆ ಮತ್ತು ವಿವಿಧ ಯೋಜನೆಗಳ ಹುದ್ದೆಗಳಿಗೆ ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

8. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿಗಳ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ನೇಮಕಾತಿ ಮಾಡಲಾಗಿದ್ದು, ಈ ನೌಕರರನ್ನು ಹಲವಾರು ಕಾರಣಗಳ ನೆಪವೊಡ್ಡಿ ಅಂದರೆ 1. ಕರ್ತವ್ಯ ನಿರ್ವಹಿಸಲು ಅಸಮರ್ಥರು 2. ಕಛೇರಿ ಹುದ್ದೆ ಇಚ್ಛಿಸಿರುವುದು 3. ಸ್ಥಳೀಯ ಒತ್ತಡ 4. ಆಡಳಿತದ ಹಿತದೃಷ್ಟಿ ಇತ್ಯಾದಿ ಕಾರಣಗಳನ್ನು ತೋರಿಸಿ ಜಿಲ್ಲಾ/ತಾಲ್ಲೂಕು ಪಂಚಾಯಿತಿ ಪಂಚಾಯಿತಿಯ ವಿವಿಧ ಯೋಜನೆಗಳ ಹುದ್ದೆಗಳಿಗೆ ನೇಮಿಸಿದಲ್ಲಿ ಅವರನ್ನು ನೇಮಕಾತಿ ಮಾಡಿಕೊಂಡ ಉದ್ದೇಶ ವಿಫಲವಾಗುತ್ತದೆ.

9. ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ವರ್ಗಾವಣಾ ನೀತಿ ನಿಯಮಗಳನ್ನು ಉಲ್ಲಂಘಿಸಿ ಜಿಲ್ಲಾ ಪಂಚಾಯಿತಿ/ತಾಲ್ಲೂಕು ಪಂಚಾಯಿತಿಗಳ ಹಂತದಲ್ಲಿ ಮಾಡಲಾಗಿರುವ ನೇರ ನೇಮಕಾತಿ/ಬಡ್ತಿ ಮೂಲಕ ನೇಮಕ ಹೊಂದಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಎಲ್ಲಾ ರೀತಿಯ ವರ್ಗಾವಣೆ/ನಿಯೋಜನೆ/ಅನ್ಯ ಸೇವೆ/ಕಾರ್ಯ ವ್ಯವಸ್ಥೆಯ ನೇಮಕಾತಿಗಳನ್ನು ಕೂಡಲೇ ರದ್ದುಪಡಿಸಿ, ಅವರುಗಳು ಮೂಲತಃ ನೇಮಕ ಹೊಂದಿದ ಗ್ರಾಮ ಪಂಚಾಯಿತಿಗಳಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಗಳಿಗೆ ಮರು ನೇಮಿಸಿ ದಿನಾಂಕ : 30–06–2011 ರೊಳಗೆ ಸರ್ಕಾರಕ್ಕೆ ಪಾಲನ ವರದಿ ಸಲ್ಲಿಸುವಂತೆ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

10. ಈ ಸೂಚನೆಗಳನ್ನು ಉಲ್ಲಂಘಿಸಿ ಇನ್ನು ಮುಂದೆ ಇಂತಹ ಕಾನೂನು ಬಾಹಿರ ಆದೇಶ ಹೊರಡಿಸದಂತೆ ಮತ್ತು ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಸಂಬಂಧಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿಸಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದೆಂದೂ ಸಹ ಮತ್ತೊಮ್ಮೆ ಸೂಚಿಸಿದೆ.



(ಎಂ.ಎಸ್. ರವಿಶಂಕರ್)

ಸರ್ಕಾರದ ಕಾರ್ಯದರ್ಶಿ, (ಪಂ.ರಾಜ್)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ನಂ. ಗ್ರಾಅಪ/152/ಗ್ರಾಪಂಅ/2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 08-06-2011

## ಸುತ್ತೋಲೆ

**ವಿಷಯ** : ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಮಾನ್ಯ ಸೇವಾ ಕೇಂದ್ರ (Common Service Center) ಸ್ಥಾಪಿಸಲು 200 ಚದರ ಅಡಿಗಳ ಬಾಡಿಗೆ ರಹಿತ ನಿರ್ಮಿತ ಸ್ಥಳವಕಾಶವನ್ನು ಕಲ್ಪಿಸುವ ಬಗ್ಗೆ.

* * *

ನೆಮ್ಮದಿ ಯೋಜನೆಯ ಮಾದರಿಯಲ್ಲಿ ಭಾರತ ಸರ್ಕಾರದ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಮಾನ್ಯ ಸೇವಾ ಕೇಂದ್ರಗಳನ್ನು ಪ್ರಾರಂಭಿಸಿ ನಾಗರೀಕರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಉದ್ದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಸದರಿ ಸಾಮಾನ್ಯ ಸೇವಾ ಕೇಂದ್ರಗಳನ್ನು ಸ್ಥಾಪಿಸಲು, ಎಲ್ಲಾ ಗ್ರಾಮ ಪಂಚಾಯಿತಿ ಕಟ್ಟಡಗಳಲ್ಲಿ ಕನಿಷ್ಠ 200 ಚದರ ಅಡಿಗಳ ಬಾಡಿಗೆ ರಹಿತ ನಿರ್ಮಿತ ಸ್ಥಳವಕಾಶವನ್ನು ಒದಗಿಸಲು ಕ್ರಮ ವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

**(ಎಂ.ಎಸ್. ರವಿಶಂಕರ್)**
ಸರ್ಕಾರದ ಕಾರ್ಯದರ್ಶಿ, (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ : 080-22372738. E-mail:nrega-ka@nic.in

ಸಂಖ್ಯೆ : ಗ್ರಾಅಪ 140 ಉಖಾಯೋ 2011 ದಿನಾಂಕ : 26–05–2011

**ಗೆ,**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೆ,

**ವಿಷಯ** : 2010–11ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳಿಗೆ ಹಣ ಪಾವತಿ ಮಾಡಲು ಹಾಗೂ ಅನುದಾನ ಬಿಡುಗಡೆ ಮಾಡುವ ಕುರಿತು.

* * *

2010–11ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಬಿಲ್ಲುಗಳ ಹಣವನ್ನು ಪಾವತಿಸಲು ಅಂತಿಮ ಗಡುವನ್ನು ನೀಡಿದ್ದು ನಿಗಧಿತ ಅವಧಿಯಲ್ಲಿ ಕೆಲವು ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳ ಹಣವನ್ನು ಸಂದಾಯ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳ ಹಣವನ್ನು ಪಾವತಿಸುವ ಪೂರ್ವದಲ್ಲಿ ಈ ಕೆಳಗೆ ಸೂಚಿಸಲಾದ ಷರತ್ತುಗಳಿಗೆ ಒಳಪಟ್ಟು ಪಂಚಾಯಿತಿವಾರು ವಿವರಗಳ ಪ್ರಸ್ತಾವನೆಯನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಲು ಕೋರಿದೆ.

1. ಅಧಿನಿಯಮದನ್ವಯ ಹಾಗೂ ಯೋಜನೆಯ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಶೇಕಡಾ 10% ರಷ್ಟು ಕಾಮಗಾರಿಗಳನ್ನು ವೀಕ್ಷಣೆ ಮಾಡಿರುವುದರ ಬಗ್ಗೆ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಶೇಕಡಾ 100%ರಷ್ಟು ತಮ್ಮ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ವೀಕ್ಷಣೆ ಮಾಡಿರುವುದರ ಬಗ್ಗೆ ದೃಢೀಕರಣ ಪತ್ರ.

2. ಅನುಷ್ಠಾನಗೊಳಿಸಿದ ಅಪೂರ್ಣ/ಪೂರ್ಣಗೊಂಡಿರುವ ಕಾಮಗಾರಿಗಳು ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಪರಿಶೀಲನೆ ಮಾಡಿದ ಜಾಬ್ ಕಾರ್ಡ್ ವ್ಯಾಲಿಡೇಷನ್ ಮಿತಿಯಲ್ಲಿ ಇರುವುದರ ಬಗ್ಗೆ ದೃಢೀಕರಣ ಪತ್ರ.

3. ಅನುಷ್ಠಾನಗೊಳಿಸಿದ ಅಪೂರ್ಣ/ಪೂರ್ಣಗೊಂಡಿರುವ ಕಾಮಗಾರಿಗಳು 2010–11ನೇ ಸಾಲಿನಲ್ಲಿ ಆಯಾ ಗ್ರಾಮ ಪಂಚಾಯಿತಿಗಳಿಗೆ ಅನುಮೋದಿಸಲಾದ ಕಾರ್ಮಿಕ ಮುಂಗಡ ಪತ್ರ ಅನುದಾನದ ಮಿತಿ ಮತ್ತು ನಿಗಧಿಪಡಿಸಲಾದ ಮಾನವ ದಿನಗಳ ಮಿತಿಯೊಳಗೆ ಇರುವುದರ ಬಗ್ಗೆ ದೃಢೀಕರಿಸಬೇಕು.

4. 2010–11ನೇ ಸಾಲಿನಲ್ಲಿ ಎಂಜಿಎನ್‌ಆರ್‌ಇಜಿಎಸ್–ಎಂಐಎಸ್‌ನಲ್ಲಿ ದಾಖಲಿಸಲಾದ ಅಪೂರ್ಣ/ಪೂರ್ಣಗೊಂಡಿರುವ ಕಾಮಗಾರಿಗಳ ಮಾಹಿತಿಯ ವಾಸ್ತವಿಕವಾಗಿ ಸದರಿ ಸಾಲಿನಲ್ಲಿ ಆಯಾ ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಿಸಲಾದ ಮಾಹಿತಿಗೆ ಹೊಂದಾಣಿಕೆಯಾಗಿರುವುದರ ಬಗ್ಗೆ ದೃಢೀಕರಿಸಬೇಕು.

5. 2010–11ನೇ ಸಾಲಿನಲ್ಲಿ ನೋಂದಾಯಿತ ಕೂಲಿ ಕಾರ್ಮಿಕರು ಉದ್ಯೋಗಕ್ಕಾಗಿ ಸಲ್ಲಿಸಿದ ಬೇಡಿಕೆಗೆ ಅನುಗುಣವಾಗಿ ಉದ್ಯೋಗವನ್ನು ನೀಡಿ ಮಾರ್ಗಸೂಚಿಗಳನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದರ ಕುರಿತು ದೃಢೀಕರಣ ನೀಡುವುದು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪ್ರಕರಣ 14ರಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪೂರ್ಣ ಜವಾಬ್ದಾರಿಯನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ನೀಡಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೇಲೆ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಪರಿಪೂರ್ಣವಾದ ಪಂಚಾಯಿತಿವಾರು ಪ್ರಸ್ತಾವನೆಯನ್ನು ಮುಂದಿನ ಅಗತ್ಯ ಕ್ರಮ ಜರುಗಿಸಲು ಸರ್ಕಾರಕ್ಕೆ ಸಲ್ಲಿಸಲು ಮತ್ತೊಮ್ಮೆ ಕೋರಿದೆ.

ತಮ್ಮ ವಿಶ್ವಾಸಿ,

**(ಪಿ. ಶಿವಶಂಕರ್)**
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ನಮೂನೆ

**2010–11ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತರಿ ಯೋಜನೆಯಡಿ ................................ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳ ಹಣವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡುವ ವಿವರಗಳ ತಖ್ತೆ:**

| ಕ್ರ. ಸಂ. | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸಂಖ್ಯೆ | ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಪರಿವೀಕ್ಷಣೆ ಮಾಡಲಾದ ಕಾಮಗಾರಿಗಳ ಸಂಖ್ಯೆ | ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಪರಿವೀಕ್ಷಣೆ ಮಾಡಲಾದ ಕಾಮಗಾರಿಗಳ ಸಂಖ್ಯೆ | ಪಾವತಿಸಬೇಕಾದ ಅನುದಾನದ ಮೊತ್ತ | ಹಣದ ಪಾವತಿಗೆ ಜಿಲ್ಲಾ ಪಂಚಾಯಿತಿ ಯಿಂದ ಶಿಫಾರಸ್ಸು ಮಾಡಲಾದ ಮೊತ್ತ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯಿತಿ,
ಜಿಲ್ಲೆ ಹೆಸರು ................................

**ಕರ್ನಾಟಕ ಸರ್ಕಾರ**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ : 080-22372738, E-mail:nrega-ka@nic.in

ಸಂಖ್ಯೆ : ಗ್ರಾಅಪ 67 ಮಗಾಂಉಖಾಯೋ 2009 ದಿನಾಂಕ : 15–06–2011

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

**ವಿಷಯ** : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2011–12ನೇ ಸಾಲಿನ ಕ್ರಿಯಾ ಯೋಜನೆಯ ಮಾಹಿತಿಯನ್ನು MIS ನಲ್ಲಿ ಅಳವಡಿಸಿ ಇಂಧೀಕರಿಸುವ ಕುರಿತು.

* * *

2011–12ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಕಾರ್ಮಿಕ ಮುಂಗಡ ಪತ್ರದ ಆಯವ್ಯಯಕ್ಕೆ ಕೇಂದ್ರ ಸರ್ಕಾರವು ಅನುಮೋದಿಸಿದ್ದು ಅದರಂತೆಯೇ ತಮ್ಮೆಲ್ಲರಿಗೂ ಅನುಮೋದಿತ ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡಲಾಗಿರುತ್ತದೆ. ತಮ್ಮ ಜಿಲ್ಲೆಗೆ ಅನುಮೋದಿಸಿದ ಕಾರ್ಮಿಕ ಮುಂಗಡ ಪತ್ರದನ್ವಯ ಜಿಲ್ಲೆಯ ಕ್ರಿಯಾಯೋಜನೆಯನ್ನು ದಿನಾಂಕ : 30–06–2011ರೊಳಗೆ ಕಡ್ಡಾಯವಾಗಿ ಸಿದ್ಧಪಡಿಸಿ ಸದರಿ ಕ್ರಿಯಾಯೋಜನೆಯ ಮಾಹಿತಿಯನ್ನು ಕೇಂದ್ರ ಸರ್ಕಾರದ ಎಮ್.ಜಿ.ಎನ್.ಆರ್.ಇ.ಜಿ.ಎಸ್. ನಲ್ಲಿ ಅಂತಿಮವಾಗಿ ದಿನಾಂಕ : 31–07–2011ರೊಳಗೆ ದಾಖಲಿಸಲು ಕ್ರಮವಹಿಸತಕ್ಕದ್ದು. ನಿಗದಿಪಡಿಸಿದ ದಿನಾಂಕ : 31–07–2011 ಅಂತಿಮ ಗಡುವಾಗಿರುತ್ತದೆ. ನಿಗದಿಪಡಿಸಿದ ದಿನಾಂಕದ ತರುವಾಯ ಎಂ.ಐ.ಎಸ್. ನಲ್ಲಿ ಕ್ರಿಯಾ ಯೋಜನೆಯ ಮಾಹಿತಿಯನ್ನು ದಾಖಲಿಸುವ ಅವಕಾಶವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದುದರಿಂದ ತಾವುಗಳು ನಿಗದಿಪಡಿಸಿದ ದಿನಾಂಕದಲ್ಲಿ ಕ್ರಿಯಾ ಯೋಜನೆಯ ಮಾಹಿತಿಗಳನ್ನು ದಾಖಲಿಸಲು ಕ್ರಮವಹಿಸುವಂತೆ ಸಂಬಂಧಪಟ್ಟವರೆಲ್ಲರಿಗೂ ಸೂಚಿಸಬೇಕಾಗಿ ಕೋರಲಾಗಿದೆ. ಒಂದು ವೇಳೆ ನೀಡಿರುವ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಹಾಗೂ ಮುಂದೆ ಆಗುಹೋಗುವ ಅನಾಹುತಗಳಿಗೆ ತಮ್ಮನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಯುವುದು ಮತ್ತು ವಿಷಯವನ್ನು ಗಂಭೀರವಾಗಿ ಪರಿಗಣಿಸತಕ್ಕದ್ದು.

ತಮ್ಮ ವಿಶ್ವಾಸಿ,

**(ಪಿ. ಶಿವಶಂಕರ್)**
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ : 69 : ಉಖಾಯೋ : 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ–2,
ಬೆಂಗಳೂರು, ದಿನಾಂಕ : 05–04–2011

**ಇಂದ :**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ :**
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

**ವಿಷಯ** : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ದೇಶದ ರಾಷ್ಟ್ರೀಯ ಹೆದ್ದಾರಿ ರಸ್ತೆಗಳ ಬದಿಗಳಲ್ಲಿ ಗಿಡಗಳನ್ನು ನೆಡುವ ಬಗ್ಗೆ.

**ಉಲ್ಲೇಖ** : ನಿರ್ದೇಶಕರು (ಎಂಜಿಎನ್‌ಆರ್‌ಇಜಿಎಸ್) ಇವರ ಪತ್ರದ ಸಂ. ಹೆಚ್. 11014/6/2010/ ಎಂಜಿಎನ್‌ಆರ್‌ಇಜಿಎ ದಿನಾಂಕ : 7.2.2011

* * *

ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಹೆಸರಿನ ಪದರನ್ನು ಹೆಚ್ಚಿಸಲು, ಸುಡು ಬಿಸಿಲನ್ನು ತಡೆಯುವ ಸಲುವಾಗಿ, ನೆರಳನ್ನು ಕಲ್ಪಿಸಲು, ಪರಿಸರದಲ್ಲಿ ವಾಯುಮಾಲಿನ್ಯತೆಯನ್ನು ಕಾಪಾಡುವ ಸಲುವಾಗಿ, ಅರಣ್ಯೀಕರಣದ ಕಾಮಗಾರಿಗಳಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚು ಒತ್ತು ಕೊಡಲು ತಿಳಿಸಿರುತ್ತಾರೆ. ಅರಣ್ಯೀಕರಣದ ಕಾಮಗಾರಿಗಳಲ್ಲಿ ಮುಖ್ಯವಾಗಿ ಗಿಡಗಳನ್ನು ನೆಡುವ ಕಾಮಗಾರಿಗಳು, ಯೋಜನೆಯ ಎರಡನೇ ಆದ್ಯತೆಯ ಚಟುವಟಿಕೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ಕ್ರಿಯಾಯೋಜನೆಯಲ್ಲಿ ಸೇರಿಸಿಕೊಂಡು, ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು. ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ. ಸದರಿ ಪ್ರಸ್ತಾಪಿತ ಕಾಮಗಾರಿಯನ್ನು ಮತ್ತು ಅರಣ್ಯ ಇಲಾಖೆಯ ಇತರೆ ಕಾಮಗಾರಿಗಳನ್ನು convergence ಮೂಲಕ, ಯೋಜನೆಯ ಮಾರ್ಗಸೂಚಿಗಳನ್ನು ಅನುಸರಿಸಿ ಅನುಷ್ಠಾನಗೊಳಿಸಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

(ಎನ್.ಎಸ್. ಪ್ರಸನ್ನಕುಮಾರ್)
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

**No.H-11014/6/2010-MNREGA**
**Government of India**
**M/O Rural Development**
**(Mahatma Gandhi NREGA Division)**

Dated, the 7th February, 2011

To,
Principal Secretary/Secretary (RD)
All States/UTs

**Subject :** Launching an afforestation drive along National Highways in the country to increase the green cover.

Sir/Madam,

Suggestions have been received by the Government to take action for plantation of tree on a large scale on the sides of National Highways through out the country. The issue has also been raised by Members of Parliament during debates in the Lok Sabha. As India has vast tracts of land along the National Highways throughout the country this land can be utilized for planting trees of varying utility including minor economic uses, minor forest produces as well as for providing shelter against the scorching heat during the summer season. Afforestation and reafforestation can also be used to improve the quality of human life by soaking up pollution and dust from the air, re-building natural habitats and ecosystem, mitigate global warming and more particularly to get rain.

Afforestation and tree plantation is a permissible activity under Mahatma Gandhi NREGA. Operational Guidelines for MGNREGA provide for convergence of other rural development programmes with MGNREGA with in the parameters of the Act. Guidelines for convergence of rural development programmes of Ministry of Environment & Forests (MoE&F) with MGNREGA have already been issued. These guidelines provide for convergence of MGNREGA activities with similars works under National Afforestation Programmes (NAP) of MoE&F. Reforestation and tree plantation such as Avenue plantation, Shelter belt plantation and road, rail, canal and boundary plantation etc. are permissible activities under. NAP. Therefore, the State Government may consider the suggestion regarding launching and afforestation drive along the National Highways in the country. However, this should mandatorily be within the norms and processes of Mahatma Gandhi NREGA.

Yours faithfully,

**(Indu Sharma)**
**Director (MGNREGA)**

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳಿಗೆ ಗೌರವ ಧನ.

**ಓದಲಾಗಿದೆ** :
1. ಸರ್ಕಾರದ ಅಧಿಸೂಚನೆ ಸಂ. ಗ್ರಾಅಪ 94 ಗ್ರಾಪಸ 99, ದಿನಾಂಕ 28.11.2001.
2. ಸರ್ಕಾರದ ಆದೇಶ ಸಂ. ಗ್ರಾಅಪ 115 ಜಿಪಸ 97, ದಿನಾಂಕ 23.04.1998.
3. ಸರ್ಕಾರದ ಅಧಿಸೂಚನೆ ಸಂ. ಗ್ರಾಅಪ 905 ಜಿಪಸ 94, ದಿನಾಂಕ 13.12.1995.
4. ಸರ್ಕಾರದ ಅಧಿಸೂಚನೆ ಸಂ. ಗ್ರಾಅಪ 907 ಜಿಪಸ 99, ದಿನಾಂಕ 18.11.1995.
5. ಸರ್ಕಾರದ ಆದೇಶ ಸಂ. ಗ್ರಾಅಪ 155 ಜಿಪಸ 2003, ದಿನಾಂಕ 01.08.2003.

* * *

## ಪ್ರಸ್ತಾವನೆ

ಮೇಲೆ ಓದಲಾದ (1)ರ ಅಧಿಸೂಚನೆಯಲ್ಲಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಸದಸ್ಯರುಗಳ ಉಪವೇಶನ ಶುಲ್ಕವನ್ನು ಕ್ರಮವಾಗಿ ₹ 50 ಮತ್ತು 60 ಗಳಿಗೆ ನಿಗದಿಪಡಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರುಗಳ ಮಾಸಿಕ ಗೌರವ ಧನವನ್ನು ಕ್ರಮವಾಗಿ ₹ 1,000 ಮತ್ತು ₹ 500 ಗಳಿಗೆ ನಿಗದಿಪಡಿಸಲಾಗಿದೆ. ಮೇಲೆ ಓದಲಾದ (3)ರ ಅಧಿಸೂಚನೆಯಲ್ಲಿ ತಾಲ್ಲೂಕು ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷರ ಗೌರವ ಧನವನ್ನು ಕ್ರಮವಾಗಿ ಮಾಸಿಕ ₹ 1,500 ಮತ್ತು ₹ 1,000 ಗಳಿಗೆ ನಿಗದಿಪಡಿಸಲಾಗಿರುತ್ತದೆ. ಮೇಲೆ ಓದಲಾದ (4)ರ ಅಧಿಸೂಚನೆಯಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷರ ಮಾಸಿಕ ಗೌರವ ಧನವನ್ನು ಮಾಸಿಕ ₹ 2,500 ಮತ್ತು ₹ 1,750 ಗಳಿಗೆ ನಿಗದಿಪಡಿಸಲಾಗಿರುತ್ತದೆ. ಮೇಲೆ ಓದಲಾದ (5)ರ ಆದೇಶದಲ್ಲಿ ಎಲ್ಲಾ ಮೂರು ಹಂತದ ಪಂ.ರಾಜ್ ಸಂಸ್ಥೆಗಳ ಚುನಾಯಿತ ಸದಸ್ಯರ ಹಾಗು ಅಧ್ಯಕ್ಷ, ಉಪಾಧ್ಯಕ್ಷರ ಉಪವೇಶನ ಶುಲ್ಕ ಹಾಗು ಮಾಸಿಕ ಗೌರವ ಧನವನ್ನು ಪರಿಷ್ಕರಿಸಲಾಗಿರುತ್ತದೆ.

2011–12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಗೌರವ ಧನವನ್ನು ಹೆಚ್ಚಿಸುವ ಬಗ್ಗೆ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಸಂಸ್ಥೆಗಳ ಸದಸ್ಯರು ಹಾಗು ಅಧ್ಯಕ್ಷ/ಉಪಾಧ್ಯಕ್ಷರುಗಳ ಗೌರವ ಧನವನ್ನು ಪರಿಷ್ಕರಿಸಬೇಕಾಗಿರುವುದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

## ಸರ್ಕಾರಿ ಆದೇಶ ಸಂ.ಗ್ರಾಅಪ 123 ಜಿಪಸ 2011, ಬೆಂಗಳೂರು, ದಿನಾಂಕ 25.05.2011

2011–12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಕಟಿಸಲಾಗಿರುವ ಹಿನ್ನೆಲೆಯಲ್ಲಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಸದಸ್ಯರ ಮತ್ತು ಅಧ್ಯಕ್ಷ, ಉಪಾಧ್ಯಕ್ಷರ ಮಾಸಿಕ ಗೌರವ ಧನವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಗಿನಂತೆ ಪರಿಷ್ಕರಿಸಿ ನೀಡಲು ಆದೇಶಿಸಿದೆ.

(ರೂ. ಗಳಲ್ಲಿ)

| ಕ್ರ.ಸಂ. | ಗೌರವ ಧನ | ತಾಲ್ಲೂಕು ಪಂಚಾಯತಿ | ಜಿಲ್ಲಾ ಪಂಚಾಯತಿ |
|---|---|---|---|
| 1. | ಅಧ್ಯಕ್ಷ | 2,250 | 3,000 |
| 2. | ಉಪಾಧ್ಯಕ್ಷ | 1,500 | 2,250 |
| 3. | ಸದಸ್ಯ | 750 | 1,500 |

ಮಾಸಿಕ ಗೌರವ ಧನವನ್ನು ನೀಡಲು ಆಗುವ ವೆಚ್ಚವನ್ನು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಕೇಂದ್ರ ಸರ್ಕಾರದಿಂದ ನೀಡಲಾಗುವ 13ನೇ ಹಣಕಾಸು ಆಯೋಗದ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ 17.05.2011ರ ಟಿಪ್ಪಣಿ ಸಂ.ಆಇ 215 ವೆಚ್ಚ-6/2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

**(ಸ್ವರ್ಣಲತಾ ಎಂ ಭಂಡಾರೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ : 143 : ಜಿಪಸ : 2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 13–05–2011

## ಸುತ್ತೋಲೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಡಿಯಲ್ಲಿ ನಡೆಯುವ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಪಾರದರ್ಶಕವಾಗಿ ಹಾಗೂ ಪ್ರಾಮಾಣಿಕವಾಗಿ ನಡೆಯುವಂತಾಗಲು ಈ ಕೆಳಗೆ ಕೆಲವು ಸೂಚನೆಗಳನ್ನು ನೀಡಲಾಗಿದ್ದು, ಕಾರ್ಯಕ್ರಮ ಅನುಷ್ಠಾನ ಸಂದರ್ಭದಲ್ಲಿ ಅಳವಡಿಸಿಕೊಳ್ಳಲು ತಿಳಿಸಿದೆ.

1. ಯಾವುದೇ ವೈಯಕ್ತಿಕ ಸೌಲಭ್ಯವನ್ನು ನೀಡುವ ಪೂರ್ವದಲ್ಲಿ ಆ ಕಾರ್ಯಕ್ರಮದ ಫಲಾನುಭವಿಗಳ ಸಭೆ ಕರೆದು ಕಾರ್ಯಕ್ರಮದ ಸಂಪೂರ್ಣ ವಿವರವನ್ನು ನೀಡಬೇಕು ಹಾಗೂ ಫಲಾನುಭವಿಗಳು ಬಯಸಿದಲ್ಲಿ ತಾಂತ್ರಿಕ ಮಾಹಿತಿಯನ್ನು ಒದಗಿಸಬೇಕು.

2. ಅಭಿವೃದ್ಧಿ ಕಾಮಗಾರಿಗಳ ವಿವಿಧ ಹಂತಗಳಲ್ಲಿ ಫೋಟೋ ಚಿತ್ರೀಕರಣ ಕಡ್ಡಾಯವಾಗಿ ಮಾಡಬೇಕು ಹಾಗೂ ಸಂಬಂಧಿಸಿದ ಕಾಮಗಾರಿ ಕಡತದಲ್ಲಿ ಕಾಯ್ದಿರಿಸಬೇಕು.

3. ಕಾಮಗಾರಿಗಳ ಆದ್ಯತಾ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಕಡ್ಡಾಯವಾಗಿ ತಯಾರಿಸಬೇಕು ಹಾಗೂ ಕಾಮಗಾರಿ ಅನುಷ್ಠಾನ ಪೂರ್ಣಗೊಂಡಾಗ, ಬರುವ ಮುಂದಿನ ಗ್ರಾಮ ಸಭೆಯಲ್ಲಿ ಖರ್ಚು ವೆಚ್ಚದ ವಿವರಗಳನ್ನು ತಪ್ಪದೇ ಮಂಡಿಸಿ ಅನುಮೋದನೆ ಪಡೆಯಬೇಕು.

4. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನಡಿಯಲ್ಲಿ ಕೈಗೊಳ್ಳುವ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕೂಲಿಕಾರರು ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಫೋಟೋ ಚಿತ್ರೀಕರಣ ಕಡ್ಡಾಯವಾಗಿ ಆಗಲೇಬೇಕು ಹಾಗೂ ಕಾಮಗಾರಿಗಳ ವಿವರ ನಮೂದಿಸುವಾಗ ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಫೋಟೋ ಅಳವಡಿಸಬೇಕು.

(ಸ್ವರ್ಣಲತಾ ಎಂ. ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ : 143 : ಜಿಪಸ : 2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 15–06–2011

## ತಿದ್ದುಪಡಿ

ಸುತ್ತೋಲೆ ಸಂಖ್ಯೆ : ಗ್ರಾಅಪ : 143 : ಜಿಪಸ : 2011 ದಿನಾಂಕ : 13–05–2011ನ್ನು ಮಾರ್ಪಡಿಸಿ, ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.

1. ಯಾವುದೇ ವೈಯಕ್ತಿಕ **ಹಾಗೂ ಸಾರ್ವಜನಿಕರಿಗೆ** ಸೌಲಭ್ಯವನ್ನು ನೀಡುವ ಪೂರ್ವದಲ್ಲಿ ಆ ಕಾರ್ಯಕ್ರಮದ ಫಲಾನುಭವಿಗಳ ಸಭೆ ಕರೆದು ಕಾರ್ಯಕ್ರಮದ ಸಂಪೂರ್ಣ ವಿವರವನ್ನು ನೀಡಬೇಕು ಹಾಗೂ ಫಲಾನುಭವಿಗಳು ಬಯಸಿದಲ್ಲಿ ತಾಂತ್ರಿಕ ಮಾಹಿತಿಯನ್ನು ಒದಗಿಸಬೇಕು.

2. ಅಭಿವೃದ್ಧಿ ಕಾಮಗಾರಿಗಳ ವಿವಿಧ ಹಂತಗಳಲ್ಲಿ **ವಿಡಿಯೋ** ಚಿತ್ರೀಕರಣ ಕಡ್ಡಾಯವಾಗಿ ಮಾಡಬೇಕು ಹಾಗೂ ಸಂಬಂಧಿಸಿದ ಕಾಮಗಾರಿ ಕಡತದಲ್ಲಿ ಕಾಯ್ದಿರಿಸಬೇಕು.

3. ಕಾಮಗಾರಿಗಳ ಆದ್ಯತಾ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಕಡ್ಡಾಯವಾಗಿ ತಯಾರಿಸಬೇಕು ಹಾಗೂ ಕಾಮಗಾರಿ ಅನುಷ್ಠಾನ ಪೂರ್ಣಗೊಂಡಾಗ, ಬರುವ ಮುಂದಿನ ಗ್ರಾಮ ಸಭೆಯಲ್ಲಿ ಖರ್ಚು ವೆಚ್ಚದ ವಿವರಗಳನ್ನು ತಪ್ಪದೇ ಮಂಡಿಸಿ ಅನುಮೋದನೆ ಪಡೆಯಬೇಕು.

4. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನಡಿಯಲ್ಲಿ ಕೈಗೊಳ್ಳುವ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕೂಲಿಕಾರರು ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ **ವಿಡಿಯೋ** ಚಿತ್ರೀಕರಣ ಕಡ್ಡಾಯವಾಗಿ ಆಗಲೇಬೇಕು ಹಾಗೂ ಕಾಮಗಾರಿಗಳ ವಿವರ ನಮೂದಿಸುವಾಗ ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಘೋಟೋ ಅಳವಡಿಸಬೇಕು.

**(ಸ್ವರ್ಣಲತಾ ಎಂ. ಭಂಡಾರೆ)**
ಸರ್ಕಾರದ ಅಧೀನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಹನ್ನೆರಡನೆ ಪಂಚವಾರ್ಷಿಕ ಯೋಜನೆ



ಚರ್ಚೆಯಲ್ಲಿ ಹಿರಿಯ ಅಧಿಕಾರಿ ವೃಂದ



# KARNATAKA VIKASA : JULY,2011

A Monthly Magazine of Rural Development and Panchayat Raj Department, Government of Karnataka

Regd. No. KA/BGGPO/2531/09-11. Licence to post "Without Prepayment" WPP-32

RNI. No. 28103, KAR, KAN-02190, Total No. of Pages 52. Despatch Date : 1st week of every month






ಬೆಲೆ : 5 ರೂಪಾಯಿಗಳು

Despatcher

**OFFICE OF THE CHIEF EDITOR, KARNATAKA VIKASA**

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

**Printed at : GEETANJALI GRAPHICS**

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346